ಕರ್ನಾಟಕ ವಿಧಾನ ಸಭೆ

ಶುಕ್ರವಾರ 9ನೇ ಆಗಸ್ಟ್ 1995ರಂದು ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 10.10 ಗಂಟೆಗೆ ಸಮಾವೇಶಗೊಂಡಿತು.

ಉಪಾಧ್ಯಕ್ಷರು:- (ಶ್ರೀ ಚಂದ್ರಶೇಖರ ಮಲ್ಲಿಕಾರ್ಜುನ ಮಾಮನಿ)ರವರು ಪೀಠವನ್ನು ಅಲಂಕರಿಸಿದ್ದರು.

(1) ವಿತ್ತೀಯ ಕಾರ್ಯಕಲಾಪಗಳು

1996-97ನೇ ಸಾಲಿನ ಇಲಾಖಾ ಬೇಡಿಕೆಗಳ ಮೇಲಿನ ಚರ್ಚೆಗೆ ಉತ್ತರ

(ಅ) (ಬೆಂಗಳೂರು ನಗರಾಭಿವೃದ್ಧಿ ಇಲಾಖೆ)

ಶ್ರೀ ಅನಂತ್‌ನಾಗ್ (ಬೆಂಗಳೂರು ನಗರಾಭಿವೃದ್ಧಿ ಸಚಿವರು):- ಮಾನ್ಯ ಉಪಾಧ್ಯಕ್ಷರೇ, ಬೆಂಗಳೂರು ಮಹಾ ನಗರಾಭಿವೃದ್ಧಿ ಬೇಡಿಕೆಗಳ ಮೇಲೆ ನಡೆದ ಚರ್ಚೆಯ ಸಂದರ್ಭದಲ್ಲಿ ಅನೇಕ ಮಾನ್ಯ ಸದಸ್ಯರುಗಳು ಕಳವಳದಿಂದ, ಕಳಕಳಿಯಿಂದ ಬೆಂಗಳೂರಿನ ಸಮಸ್ಯೆಗಳನ್ನು ಮತ್ತು ಏನೇನು ಆಗಬೇಕಾಗಿದೆ ಎಂಬುದರ ಕುರಿತು ಬಹಳಷ್ಟು ಹೇಳಿದ್ದಾರೆ, ಮತ್ತು ಅವರ ಭಾವನೆಗಳನ್ನು ವ್ಯಕ್ತಪಡಿಸಿದ್ದಾರೆ, ಟೀಕೆಗಳನ್ನು ಮಾಡಿದ್ದಾರೆ, ಮತ್ತು ವ್ಯಂಗ್ಯಭರಿತವಾದ ಮಾತುಗಳಿಂದಲೂ ಹೇಳಿದ್ದಾರೆ. ಅವೆಲ್ಲವನ್ನೂ ನಾನು ಸ್ವಾಗತಿಸುತ್ತೇನೆ. ಅವರು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಸರ್ಕಾರ ಪ್ರತಿಯೊಂದು ಸಲಹೆಗಳನ್ನೂ ಗಂಭೀರವಾಗಿ ಪರಿಗಣಿಸಿ ಬೆಂಗಳೂರು ನಾಗರೀಕರಿಗೆ ಸೂಕ್ತವಾದ ಪರಿಹಾರವನ್ನು ನೀಡಲು ಧೃಡವಾದ ಸಂಕಲ್ಪ, ನಿರ್ಧಾರವನ್ನು ಮಾಡಿದೆ ಎಂಬುದನ್ನು ತಮ್ಮ ಮೂಲಕ ಈ ಸದನಕ್ಕೆ ತಿಳಿಸಲಿಚ್ಛಿಸುತ್ತೇನೆ. ಈ ದಿಸೆಯಲ್ಲಿ ಯಾವ ಯಾವ ಕಾರ್ಯಕ್ರಮಗಳನ್ನು ಹೇಗೆ ಇಟ್ಟುಕೊಳ್ಳುತ್ತೇವೆಂಬುದನ್ನು ಆದಷ್ಟು ಸಂಕ್ಷಿಪ್ತವಾಗಿ ಹೇಳುತ್ತೇನೆ. ಈಗಿನ ಬೆಂಗಳೂರು ಅಭಿವೃದ್ಧಿ ಎಂದ ಕೂಡಲೇ ಬೆಂಗಳೂರು ಮಹಾನಗರಪಾಲಿಕೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮತ್ತು ಬೆಂಗಳೂರು ನೀರು ಸರಬರಾಜು ಮತ್ತು ಒಳ ಚರಂಡಿ ವ್ಯವಸ್ಥೆಯನ್ನು ಕುರಿತು ವಿಶ್ಲೇಷಣೆ ಮಾಡಬೇಕಾಗಿದೆ. ಒಂದೆಡೆ ಮೆಂಟೇನೆನ್ಸ್ ವರ್ಕ್ಸ್, ಮತ್ತು ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಾಕಿಕೊಂಡು 87 ವಾರ್ಡ್‌ಗಳಿದ್ದುದ್ದನ್ನು ವಿಸ್ತರಿಸಿ 100 ವಿಭಾಗಗಳನ್ನಾಗಿ ಮಾಡಲಾಗಿದೆ. ಅಲ್ಲಿ ರಸ್ತೆ, ಒಳಚರಂಡಿ ವ್ಯವಸ್ಥೆ, ಲೈಟ್ಸ್, ನಗರಪ್ರದೇಶಗಳನ್ನು ಚೊಕ್ಕಟವಾಗಿಡುವಂಥಾದ್ದು ಆಗಬೇಕಾಗಿದೆ ಇದರ ಜೊತೆಯಲ್ಲೇ 150ಕ್ಕೂ ಮಿಗಿಲಾಗಿ ದೊಡ್ಡ, ಮಧ್ಯಮ, ಮತ್ತು ಸಣ್ಣ ಪ್ರಮಾಣದ ಉದ್ಯಾನವನಗಳು ಇದೆ. ಅವುಗಳ ಮೆಂಟೇನೆನ್ಸ್ ಕುರಿತು ಅನೇಕ ಸಮಸ್ಯೆಗಳು ಇದೆ. ಆದುದರಿಂದಲೇ ಈ ಪಾರ್ಕ್‌ಗಳ ವಿಚಾರದಲ್ಲಿ ಕಳೆದ ಸಲ ಅನೇಕ ಪತ್ರಿಕೆಗಳ ಮೂಲಕ ಜನರಿಗೆ ಆಹ್ವಾನ ನೀಡಿದ್ದೆ. ಅದಕ್ಕೆ ತಕ್ಕಂತೆ ಸುಮಾರು 50-60 ಸಂಘ ಸಂಸ್ಥೆಗಳು ಮುಂದೆ ಬಂದಿವೆ. ನಮಗೆ ವಹಿಸಿಕೊಡಿ, ನಾವು ಉದ್ಯಾನವನಗಳನ್ನು ನೋಡಿಕೊಳ್ಳುತ್ತೇವೆಂದು ಹೇಳಿದ್ದಾರೆ. ಏಕೆಂದರೆ ಅಲ್ಲಿ ಸಿಬ್ಬಂದಿಗಳು ಇಲ್ಲ. ಆ ದೃಷ್ಟಿ-

ಯಿಂದ ನಾವು ಈ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಅದರ ಜೊತೆ ಜೊತೆಯಲ್ಲೇ ಒಂದು ಮೇನ್‌ಟೆನೆನ್ಸ್, ರಿಪೇರಿ, ಡೆವಲಪ್‌ಮೆಂಟ್ಸ್ ವರ್ಕ್ಸ್ ಇದರ ಜೊತೆಗೆ ಸುಮಾರು 20-30 ವರ್ಷಗಳ ನಂತರದ ಸ್ಥಿತಿಗತಿಗಳನ್ನು ದೂರ ದೃಷ್ಟಿಯಿಂದ ಚಿಂತನೆ ಮಾಡಿ ಯೋಜನೆಗಳನ್ನು ರೂಪಿಸಿದ್ದು ಆ ಕೆಲಸಗಳು ಸುಮಾರು ಆಗಿದೆ. ಮುಂದೆ ಬರಬಹುದಾದ ಪರಿಸ್ಥಿತಿಗೆ ನಾವು ಈಗಿನಿಂದಲೇ ಸಿದ್ಧರಾಗ-ಬೇಕಾಗಿದೆ. ಮಾನ್ಯ ಸದಸ್ಯರು ಶ್ರೀ ಸುರೇಶ್ ಕುಮಾರ್‌ರವರೂ ಕೂಡ ಕೆಲವು ವಿಚಾರಗಳನ್ನು ಹೇಳಿದರು. ಅವರು ಮಾತು ಎತ್ತಿದರೆ ಮೆಗಾಸಿಟಿ ಎಂದು ಹೇಳಿದರು. ಆ ಒಂದು ಪರಿಸ್ಥಿತಿ ಉಂಟಾ-ಗಿದೆ. ಮೊನ್ನೆ ಮಾನ್ಯ ಮುಖ್ಯಮಂತ್ರಿಯವರು ಹೇಳಿದ ಹಾಗೆ ಈ ವ್ಯವಸ್ಥೆಯು ಎಷ್ಟರಮಟ್ಟಿಗೆ ಕೆಟ್ಟಿದೆ ಎಂದರೆ ಎಲ್ಲರಿಗೂ ಸಿನಿಸಿಸಮ್ ಬಂದು ಬಿಟ್ಟಿದೆ, ಎಂದು ಮಾನ್ಯ ಸುರೇಶ್ ಕುಮಾರ್ ಹೇಳಿದರು ಅದನ್ನು ನಾನು ಒಪ್ಪುತ್ತೇನೆ. ಆದರೂ ಕೂಡ ನಾವು ಉದಾಸೀನರಾಗದೆ ಫುಲ್ಲಿ ಮೋಟಿವೇಟ್ ಆಗಿ ಅಧಿಕಾರಿಗಳನ್ನು, ಜನರನ್ನು ಮೋಟಿವೇಟ್ ಮಾಡಿ ಈ ನಗರಾಭಿವೃದ್ಧಿ ಕಾರ್ಯಕ್ರಮಗಳಿಗೆ, ನಗರ ಸಮಸ್ಯೆಗಳಿಗೆ ನಿರಂತರವಾಗಿ, ಅವ್ಯಾಹತವಾಗಿ ಪ್ರಯತ್ನ ಮಾಡಬೇಕಾಗಿದೆ ಎನ್ನುವುದನ್ನು ನಾನು ತಮ್ಮ ಮೂಲಕ ಸದನಕ್ಕೆ ತಿಳಿಸಲಿಚ್ಛಿಸುತ್ತೇನೆ. ಇಲ್ಲಿ ಹಣದ ಕೊರತೆ ಬಹಳ ಇದೆ, ಸಂಪನ್ಮೂಲಗಳ ಕ್ರೋಢೀಕರಣ ಮಾಡಬೇಕಾಗಿದೆ. ಇದರಲ್ಲಿ ನಾವು ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿ-ದ್ದೇವೆ. ಇದನ್ನು ಒಂದೊಂದಾಗಿ ನಾನು ತಮಗೆ ಹೇಳುತ್ತೇನೆ. ಮೊನ್ನೆ ಮಾನ್ಯ ಮುನಿಯಪ್ಪನವರು, ಮಾನ್ಯ ಸುರೇಶ್ ಕುಮಾರ್‌ರವರು ಮತ್ತು ನಮ್ಮವರೇ ಆದಂತಹ ಮಾನ್ಯ ರಾಜಣ್ಣನವರೂ ಕೂಡ...

ಶ್ರೀ ಕೆ.ಎಸ್. ಈಶ್ವರಪ್ಪ:- ನಾವು ನಿಮ್ಮವರಲ್ಲವೇ?

ಶ್ರೀ ಅನಂತ್‌ನಾಗ್:- ನೀವು ನಮ್ಮವರೇ, ನಾನು ಅವರನ್ನು ನಮ್ಮ ಪಕ್ಷದವರು ಎನ್ನುವ ದೃಷ್ಟಿಯಿಂದ ಹೇಳಿದೆ. ತಮಗಿಂತ ಬಹಳ ಸ್ಟ್ರಾಂಗ್ ಆಗಿ ಮಾನ್ಯ ರಾಜಣ್ಣನವರು ಮಾತನಾಡುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ರಾಜಣ್ಣನವರು ಬೆಂಗಳೂರು ಮೂಲ ನಿವಾಸಿ-ಗಳು.

ಶ್ರೀ ಬಿ. ಮುನಿಯಪ್ಪ:- ನಾವು ಏನೂ ಆಫ್ರಿಕಾದಿಂದ ಬಂದಿಲ್ಲ. ನಾವು ಬೆಂಗಳೂರಿನ ಮೂಲ ನಿವಾಸಿಗಳೇ.

ಶ್ರೀ ಅನಂತನಾಗ್:- ನಮ್ಮವರೇ ಎನ್ನುವ ಮಾತಿಗೆ ಅಷ್ಟೊಂದು ಅಪಾರ್ಥವನ್ನು ಕಲ್ಪಿಸಬೇಡಿ, ನೀವು ನಮ್ಮವರೇ ಆದುದರಿಂದಲೇ ಮೊದಲು ನಿಮ್ಮ ಹೆಸರನ್ನು ತೆಗೆದುಕೊಂಡು ನಂತರ ಮಾನ್ಯ ರಾಜಣ್ಣನವರ ಹೆಸರನ್ನು ತೆಗೆದುಕೊಂಡಿದ್ದೇನೆ.

ಶ್ರೀ ಎಸ್. ಸುರೇಶ್ ಕುಮಾರ್:- ಜನತಾದಳದಲ್ಲೂ ಕೂಡ ನಮ್ಮವರು ಎನ್ನುವುದಕ್ಕೆ ಬೇರೆ ಅರ್ಥವಿದೆ.

ಶ್ರೀ ಅನಂತನಾಗ್:- ಸಾಮಾನ್ಯವಾಗಿ ಏನಾಗುತ್ತದೆ ಎಂದರೆ ಒಂದು ಪಕ್ಷದವರು ಎಂದಾಗ

ನಾವು ಅವರಿಗೆ ಟೀಕೆ ಮಾಡಬೇಕೆಂದರೂ ಅದು ನಮ್ಮ ಶಾಸಕಾಂಗ ಪಕ್ಷದಲ್ಲಿ ಮಾಡಬೇಕೆಂದು ನಾವು ಕೇಳುತ್ತೇವೆ. ಆದರೂ ಅವರು ಸದನದಲ್ಲೇ ಹೇಳಿದರು. ಅವರು ಕಾರ್ಪೊರೇಷನ್‌ನಲ್ಲಿ ಇದ್ದಾಗ ಕೂಡ ಕೆಲಸವನ್ನು ಮಾಡಿದ್ದಾರೆ, ಹೆಸರು ಪಡೆದಿದ್ದಾರೆ. ಮೊನ್ನೆ ಮಾನ್ಯ ಮುನಿಯಪ್ಪನವರು ಮಹಾ ನಗರ ಪಾಲಿಕೆ ಪ್ರೈಮರಿ, ಸೆಕೆಂಡರಿ ಶಾಲೆಗಳನ್ನು ಏನು ನಡೆಸುತ್ತಿವೆ, ಅದರಲ್ಲಿ ಶಿಕ್ಷಕರು ಕಡಿಮೆ ಸಂಖ್ಯೆಯಲ್ಲಿದ್ದಾರೆ. ಆ ಸ್ಥಾನವನ್ನು ತುಂಬಬೇಕೆಂದು ಹೇಳಿದರು. ಕಟ್ಟಡಗಳಿಗೆ ಅಲ್ಲಿ ಸರಿಯಾಗಿ ಮೇನ್‌ಟೆನೆನ್ಸ್ ಮಾಡುತ್ತಿಲ್ಲ. ಸ್ವಚ್ಛತೆ, ಮತ್ತು ಪರಿಸರ ಶಿಕ್ಷಣಕ್ಕೆ ಆದರ್ಶವಾದಂತಹ ವಾತಾವರಣ-ವಿರಬೇಕು ಅದೇ ಇಲ್ಲ. ಶಾಲೆಗಳಲ್ಲಿ ಅವ್ಯವಹಾರ ನಡೆಯುತ್ತಿದೆ. ಅದಕ್ಕೆ ವಾಚ್‌ಮನ್‌ಗಳನ್ನು ನೇಮಿಸಬೇಕೆಂದು ಹೇಳಿದ್ದಾರೆ.

ಹಾಗೆಯೇ ನಗರಪಾಲಿಕೆಯಲ್ಲಿ ಕೆಲಸಗಳು ಸರಿಯಾಗಿ ಆಗುತ್ತಿಲ್ಲ, ಚುನಾವಣೆಗಳನ್ನು ಶೀಘ್ರ್ರವಾಗಿ ನಡೆಸಬೇಕು ಎಂದೂ ಸಹ ಮುನಿಯಪ್ಪನವರು ಹೇಳಿದರು. ನಾವು ಅಕ್ಟೋಬರ್ 13ನೇ ತಾರೀಖಿ-ನಂದು ನಗರಪಾಲಿಕೆಯ ಚುನಾವಣೆಯನ್ನು ಮಾಡುತ್ತೇವೆಂದು ಆಗಲೇ ಘೋಷಣೆಯನ್ನು ಮಾಡಿ-ದ್ದೇವೆ. ಮಾನ್ಯ ಸದಸ್ಯರುಗಳು ಅನೇಕ ಲೋಪದೋಷಗಳ ಬಗ್ಗೆ ಹೇಳಿದರು. ಉದಾಹರಣೆಗೆ ಮಹಿಳೆ-ಯರಿಗೆ, ಡಿವಿಷನ್ ವೈಸ್ ಮಾಡುವುದು, ಹಿಂದುಳಿದವರಿಗೆ ಮೀಸಲಾತಿ ನೀಡುವುದು, ಇತ್ಯಾದಿಗಳ ಬಗ್ಗೆ ಪ್ರಸ್ತಾಪಿಸಿದ್ದಾರೆ. ನಿರ್ದಿಷ್ಟವಾಗಿ ರಾಜಾಜಿನಗರದ ಕ್ಷೇತ್ರದಲ್ಲಿ ಬಹಳ ಅನ್ಯಾಯವಾಗಿದೆ ಎನ್ನುವು-ದನ್ನು ಹೇಳಿದ್ದಾರೆ, ಅವೈಜ್ಞಾನಿಕವಾದ ರೀತಿಯನ್ನು ಅನುಸರಿಸಲಾಗಿದೆ ಎಂದೂ ಹೇಳಿದ್ದಾರೆ, ಅವೆಲ್ಲ-ವನ್ನೂ ಸರಿಪಡಿಸುವ ಪ್ರಾಮಾಣಿಕ ಪ್ರಯತ್ನವನ್ನು ನಾನು ಮಾಡುತ್ತೇನೆ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಸುಮಾರು ಮೂರು ಸಾವಿರ ಪೌರ ಕಾರ್ಮಿಕರನ್ನು ಕೆಲಸಕ್ಕೆ ತೆಗೆದು-ಕೊಳ್ಳುವ ಒಂದು ಯೋಜನೆ ಇದೆ. ಅವನ್ನು ಲಾಟರಿ ಎತ್ತುವ ಮೂಲಕ ಭರ್ತಿ ಮಾಡಬಾರದು, ಏಳು, ಎಂಟನೇ ತರಗತಿಗಳಲ್ಲಿ ಪಾಸ್ ಆದ ಅಥವಾ ನಾಪಾಸ್ ಆದ ವರ್ಕಿಂಗ್ ಮತ್ತು ಎಫಿಶಿ-ಯೆಂಟ್ ಗ್ಯಾಂಗ್‌ಮ್ಯಾನ್‌ಗಳನ್ನೇ ತೆಗೆದುಕೊಳ್ಳಬೇಕೆಂದು ಹೇಳಲಾಗಿದೆ, ಇವೆಲ್ಲವನ್ನೂ ಕೂಡ ನಾನು ನೋಟ್ ಮಾಡಿಕೊಂಡಿದ್ದೇನೆ ಮತ್ತೆ ನಗರಪಾಲಿಕೆಯ ಅಧಿಕಾರಿಗಳ ಜೊತೆಯೂ ಕೂಡ ಆಗಲೇ ಚರ್ಚಿಸಿದ್ದೇನೆ. ನಮ್ಮ ವಾಟಾಳ್‌ನಾಗರಾಜ್‌ರವರೂ ಕೂಡ ಬಹಳ ಕುಪಿತರಾಗಿಯೇ, ಇಲ್ಲಿ ಮೂರು ಜನ ಮುಖ್ಯ ಅಭಿಯಂತರುಗಳು ಬೇಕೇ; ಮೂರು ಜನ ಉಪಾಯುಕ್ತರುಗಳು ಬೇಕೇ ಎನ್ನುವುದನ್ನು ಹೇಳಿದರು. ಮತ್ತು ಪೆಂಡಿಂಗ್ ಅಪ್ರೂವಲ್ ಬೈ ದಿ ಗೌರ್ನಮೆಂಟ್ ಎನ್ನುವ ಕ್ಯಾಟಗರಿಯಲ್ಲಿ ಹೊಸ ಹುದ್ದೆಗಳನ್ನು ಸೃಷ್ಟಿಸಬಾರದೆನ್ನುವುದನ್ನೂ ಕೂಡ ವಾಟಾಳ್ ನಾಗರಾಜ್‌ರವರು ಹಾಗೂ ಮುನಿಯಪ್ಪ ನವರು ಹೇಳಿದರು. ಇದೆಲ್ಲದರ ಕುರಿತು ನಾವು ಸಮಗ್ರವಾದ ಯೋಜನೆಯನ್ನು ಮಾಡಬೇಕಾಗಿದೆ. ಏಕೆಂದರೆ, ಇದರಲ್ಲಿ ಒಂದು ವಿಚಾರವಿದೆ. ವಾಟಾಳ್ ನಾಗರಾಜ್‌ರವರು ಹಿಂದಿನ ಅರವತ್ತೇಳು, ಎಪ್ಪತ್ತೇಳನೆ ಇಸವಿಯ ಪರಿಸ್ಥಿತಿಯನ್ನು ಕುರಿತು ಮಾತನ್ನಾಡುತ್ತಾರೆ. ಆದರೆ ಇವತ್ತು ಸುಮಾರು ಹತ್ತಿರ ಹತ್ತಿರ ಐವತ್ತು ಲಕ್ಷ ಜನಸಂಖ್ಯೆಯಿರುವ ಈ ಬೆಂಗಳೂರು ಪಟ್ಟಣದಲ್ಲಿ ಈಗ ಈ ಪೌರ

ಕಾರ್ಮಿಕರನ್ನು ಕೆಲಸಕ್ಕೆ ತೆಗೆದುಕೊಂಡ ನಂತರ ಸುಮಾರು ಹದಿನೇಳು ಸಾವಿರ ಪೌರಕಾರ್ಮಿಕರ ಸಂಖ್ಯೆಯಾಗಬಹುದು. ಆದರೆ ಸಧ್ಯದ ವ್ಯವಸ್ಥೆಯಲ್ಲಿ ಮೇಲಿನಿಂದ ಕೆಳಗಡೆಗೆ ಸರಾಸರಿಯಾಗಿ ಒಂದು ಲೆಕ್ಕವನ್ನು ನೋಡಿದರೆ, ಸುಮಾರು ಮುನ್ನೂರ ಐವತ್ತು ನಾಗರೀಕರಿಗೆ ಒಬ್ಬ ಪೌರಕಾರ್ಮಿಕ ರೇಶಿ-ಯೊದಲ್ಲಿ ವರ್ಕ್ ಔಟ್ ಆಗಿದೆ. ಆದುದರಿಂದ ಇವತ್ತು ಸಮಸ್ಯೆಗಳು ಹೆಚ್ಚಿವೆ, ನಗರವೂ ಬೆಳೆಯು-ತ್ತಿದೆ, ಜನಸಂಖ್ಯೆಯೂ ಹೆಚ್ಚಾಗಿದೆ, ಹೀಗಾಗಿ ಕೆಲವು ಕಡೆ ಹೆಚ್ಚು ಸಿಬ್ಬಂದಿಗಳನ್ನು ಅಥವಾ ಅಡಿಷ-ನಲ್ ಪೋಸ್ಟ್ ಕ್ರಿಯೇಟ್ ಮಾಡಬೇಕಾಗಿ ಬಂದಿದೆ. ಅವುಗಳನ್ನು ತುಂಬುವಾಗ ಸಲಹೆಗಳನ್ನೇನು ಸದಸ್ಯರುಗಳು ಕೊಟ್ಟಿದ್ದಾರೆ ಅವುಗಳನ್ನು ತೆಗೆದುಕೊಂಡೇ ಸರ್ಕಾರ ಈ ಕುರಿತು ಗಂಭೀರವಾಗಿ ಯೋಚನೆ ಮಾಡುತ್ತದೆ ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಸುತ್ತೇನೆ. ಸನ್ಮಾನ್ಯ ಸುರೇಶ್ ಕುಮಾರ್‌ರವರೂ ಕೂಡ ಅನೇಕ ವಿಚಾರಗಳನ್ನು, ನೀರಿನ ಸಮಸ್ಯೆಯನ್ನು ಕುರಿತು ವಿಶೇಷವಾಗಿ ಬೆಂಗಳೂರು ನಗರವನ್ನು ಬೆಳೆಯುವುದಕ್ಕೆ ಬಿಡಬಾರದೆನ್ನುವುದನ್ನು ಒಂದು ಕಡೆ ಹೇಳಿ-ದರು. ಇಲ್ಲಿ ಒಮ್ಮೊಮ್ಮೆ ಇಂಥ ವಿಚಾರಗಳಲ್ಲಿ ಏನಾಗುತ್ತದೆಂದರೆ, ಮಾನ್ಯ ಸದಸ್ಯರು ಮಾಡುತ್ತಾ-ರೆಂದಲ್ಲ, ಒಂದೊಂದು ಸಲ ಏನಾಗುತ್ತದೆಂದರೆ, run with hares and hunt with hounds ಎನ್ನುವ ರೀತಿಯಲ್ಲಿ ಒಂದು ಕಡೆ ನಗರವನ್ನು ಬೆಳೆಯುವುದಕ್ಕೆ ಬಿಡಬಾರದೆನ್ನುತ್ತೇವೆ, ಇನ್ನೊಂದು ಕಡೆ ಅನೇಕ ಕೊಳಚೆ ಪ್ರದೇಶಗಳಲ್ಲಿ ಹೊಸ ಹೊಸ ಹೆಸರುಗಳು ಬರುತ್ತವೆ, ಎಲ್ಲಿಂದ ಬಂದರು ಎನ್ನುವುದು ಗೊತ್ತೇ ಆಗುವುದಿಲ್ಲ, ಅವರ ಹತ್ತಿರ ಪಡಿತರ ಚೀಟಿ ಇರುವುದಿಲ್ಲ ಅಥವಾ ಅವರಿಗೆ ವೋಟ್‌ನ ಚೀಟಿ ಕೂಡ ಇಲ್ಲಿರುವುದಿಲ್ಲ, ಅಂಥ ಒತ್ತಡಗಳು ಬರುತ್ತವೆ. ಹೀಗೆ ಎರಡೂ ಕಡೆ ನಗರ ಬೆಳೆಯಬಾರದೆಂದು ಹೇಳಿ ಆರ್ಟಿಕಲ್ 370ನಂತೂ ಇಲ್ಲಿ ನಾವು ಜಾರಿಗೆ ತರುವುದ-ಕ್ಕಾಗುವುದಿಲ್ಲ. ಆದರೂ ಕೂಡ ಇನ್ನು ಹೆಚ್ಚುವರಿ ಕೊಳಚೆ ಪ್ರದೇಶಗಳಾಗದಂತೆ ನಾವು ಕ್ರಮಗಳನ್ನು ಕೈಗೊಳ್ಳಬೇಕೆನ್ನುವ ಒಂದು ಯೋಜನೆಯನ್ನು ಹಾಕಿಕೊಂಡಿದ್ದೇನೆ. ಆಗಲೇ ಬೆಂಗಳೂರು ಮಹಾನಗರ ಪಾಲಿಕೆ ನಮ್ಮ ಕೊಳಚೆ ನಿರ್ಮೂಲನ ಮಂಡಳಿಯ ಜೊತೆ ಈ ಕುರಿತು ಚರ್ಚೆ ನಡೆಸಿದೆ. ಮತ್ತು ನೀರನ್ನು ಕುರಿತೂ ಕೂಡ ಅವರು 130 ಕಿ. ಮೀ. ದೂರದಿಂದ ಕಾವೇರಿ ನೀರನ್ನು ಇಲ್ಲಿಗೆ ತರಲಾಗು-ತ್ತಿದೆ, ಮೂರು ಸಾವಿರ ಅಡಿಯಷ್ಟು ನೀರನ್ನು ಹತ್ತಿಸಬೇಕಾಗುತ್ತದೆ, ಆದರೂ ಕೂಡ ನೀರಿನ ಹಂಚಿಕೆ-ಯಲ್ಲಿ ದಕ್ಷಿಣ, ಉತ್ತರ ಎಂದು ಈ ತರಹದ ಪಕ್ಷಪಾತವಾಗುತ್ತಿದೆ ಎಂದು ಹೇಳಿದರು. ಆದರೆ ಇವತ್ತು ಅದನ್ನು ತಪ್ಪಿಸುವುದಕ್ಕೋಸ್ಕರವೇ ಆಲ್ಟರ್‌ನೇಟೀವ್ ಡೇಸ್ ಎಲ್ಲಾ ಕಡೆ ನೀರನ್ನು ಬಿಡುವ ವ್ಯವಸ್ಥೆಯನ್ನು ಮಾಡಿದ್ದೇವೆ. ಇಡೀ ಬೆಂಗಳೂರಿಗೆ ಮತ್ತು ತಮ್ಮ ಪಶ್ಚಿಮ ಕ್ಷೇತ್ರದಲ್ಲೂ ಕೂಡ ಇವತ್ತು ತಿಪ್ಪಗೊಂಡನಹಳ್ಳಿಯಿಂದ ಬರುವ ನೀರಿನ ಪ್ರಮಾಣ ಬಹಳ ಕುಸಿದಿದ್ದರಿಂದ ನಾವು ರಿವರ್ಸ್ ಪಂಪಿಂಗ್ ಮುಂತಾದವನ್ನು ಮಾಡಿ ಕಾವೇರಿ ನೀರನ್ನೇ ರಾಜಾಜಿನಗರ, ಬಸವೇಶ್ವರ ನಗರ, ಪೀಣ್ಯ, ನಂದಿನಿ ಲೇಔಟ್‌ಗಳಿಗೂ ಕೂಡ ಕೊಡುವ ಒಂದು ವ್ಯವಸ್ಥೆಯನ್ನು ಮಾಡಿದ್ದೇವೆ. ಇನ್ನು ಕೆ.ಇ.ಬಿ. ಬಿಲ್‌ನಲ್ಲಿ ಬಿ.ಡಬ್ಲ್ಯು.ಎಸ್.ಎಸ್.ಬಿ.ಗೆ ರಿಯಾಯಿತಿಯನ್ನು ಕೊಡಬೇಕು ಎನ್ನುವ ವಿಚಾರವನ್ನೂ ಕೂಡ ಅವರು ಹೇಳಿದ್ದಾರೆ. ಹಾಗೆಯೇ ದೇವನಹಳ್ಳಿ ವಿಮಾನ ನಿಲ್ದಾಣಕ್ಕೆ ನೀರಿನ ಸರಬರಾಜಿನ

ಬಗ್ಗೆಯೂ ಸಹ ಹೇಳಿದ್ದಾರೆ, ನಾನು ವಿಚಾರಿಸಿದೆ, ಅಂಥದ್ದೇನೂ ಕಾಂಕ್ರೀಟ್ ಆಗಿ ಯಾವ ಪ್ರಸ್ತಾವನೆಯೂ ಇಲ್ಲ. ಅವರು ನೀರಿನ ಸರಬರಾಜಿಗೆ ಕೇಳಿರಬಹುದು, ಬೆಂಗಳೂರು ನಗರಕ್ಕೆ ನೀರು ಸಾಕಾಗುತ್ತಿಲ್ಲ, ನಿಜವಾದ ಅರ್ಥದಲ್ಲಿ ಕಾವೇರಿ ನಾಲ್ಕನೇ ಹಂತ ಇನ್ನೂ ಪ್ರಾರಂಭವಾಗಬೇಕಾಗಿದೆ. ದೇವನಹಳ್ಳಿಯ ವಿಮಾನ ನಿಲ್ದಾಣಕ್ಕೆ ಬೆಂಗಳೂರಿನಿಂದ ಈ ನೀರನ್ನು ಕೊಡುವ ಒಂದು ಯೋಜನೆ ಸಧ್ಯದ ಸಮಯದಲ್ಲಿ ಇಲ್ಲವೆನ್ನುವುದನ್ನು ತಮಗೆ ಸ್ಪಷ್ಟೀಕರಿಸಲಿಚ್ಚಿಸುತ್ತೇನೆ. ಒಟ್ಟಿನಲ್ಲಿ ಸ್ವಚ್ಛತೆಯನ್ನು ಕುರಿತೂ ಕೂಡ, ಲಾಲ್‌ಬಾಗ್, ಕಬ್ಬನ್‌ಪಾರ್ಕ್, ಮಾರೇನಹಳ್ಳಿ, ಜಕ್ಕರಾಯನ ಕೆರೆ, ಅಲ್ಲಿಯ ಪೌರ ಕಾರ್ಮಿಕರು ಇತ್ಯಾದಿಗಳ ಬಗ್ಗೆ ಅವರು ಸಲಹೆಗಳನ್ನು ಕೊಟ್ಟಿದ್ದಾರೆ. ನಾನು ಅದಕ್ಕೆ ಬರುತ್ತೇನೆ. ಆಮೇಲೆ ನಮ್ಮ ರಾಜಣ್ಣನವರು ಮೊನ್ನೆ ಬಹಳ ಕಳವಳದಿಂದ ಕೆಲವು ವಿಚಾರಗಳನ್ನು ಹೇಳಿದರು. ಹೇಗೆ ಬಿಲ್ಡರ್ಸ್‌ಗಳ ದುರಾಸೆಯಿಂದ ನಗರ ನಾಶವಾಗುತ್ತಿದೆ ಎನ್ನುವುದನ್ನೂ ಕೂಡ ಅವರು ಹೇಳಿದರು. ಫ್ಲಾಟ್ಸ್, ಅಪಾರ್ಟ್‌ಮೆಂಟ್ಸ್, ಮಲ್ಟಿಸ್ಟೋರೀಡ್ ಬಿಲ್ಡಿಂಗ್ಸ್ ಈ ಕುರಿತು ಹೊಸ ಕಾನೂನು, ಕಾಯಿದೆಗಳನ್ನು ಮಾಡಿಕೊಂಡು ಅವುಗಳನ್ನು ಕಟ್ಟುವುದಕ್ಕೆ ಬಿಡಬಾರದೆನ್ನುವ ದೃಷ್ಟಿಯಿಂದ ಅವರು ಸಲಹೆಗಳನ್ನು ಕೊಟ್ಟಿದ್ದಾರೆ. ಒಂದು ಕಡೆ ಸಿವರೇಜ್‌ಗಳೆಲ್ಲಾ ಬರ್ಸ್ಟ್ ಆಗುತ್ತಿದೆ, ಇನ್ನೊಂದು ಕಡೆ ಜನಸಂಖ್ಯೆ,, ಈ ಕಟ್ಟಡಗಳೆಲ್ಲಾ ಜಾಸ್ತಿಯಾಗುತ್ತಿವೆ, ಇದಕ್ಕೆ ದೇವರೇ ಗತಿ ಎಂದು ಹೇಳುತ್ತಾ, ದೇವರ ಮನೆಗೂ ಕೂಡ ಕೊಳಚೆ ನೀರು ಬಂದದ್ದನ್ನು ಕುರಿತೂ ಸಹ ಅವರು ಅನೇಕ ಸಲ ಪ್ರಸ್ತಾಪ ಮಾಡಿದ್ದಾರೆ. ಅಲ್ಲದೆ ಬೆಂಗಳೂರಿನಲ್ಲಿ ಲಂಗ್‌ಸ್ಪೇಸ್ ಇಲ್ಲ, ಗಿಡಮರಗಳ ನಾಶವಾಗುತ್ತಿದೆ, ಮಕ್ಕಳಿಗೋಸ್ಕರ ಆಟದ ಮೈದಾನಗಳಿಲ್ಲ ಹೀಗೆ ಅನೇಕ ಸಮಸ್ಯೆಗಳನ್ನು ಕುರಿತು ಅವರು ಮಾತನಾಡಿದ್ದಾರೆ. ಒಟ್ಟಿನಲ್ಲಿ ಬೆಂಗಳೂರು ಈ ಸಮಸ್ಯೆಗಳ ಆಗರವಾಗಿದೆ, ಭೂತಾಕಾರವಾಗಿ ಈ ಸಮಸ್ಯೆಗಳು ನಮ್ಮ ಎದುರಿಗೆ ನಿಂತ ಹಿನ್ನೆಲೆಯಲ್ಲಿ ಕೂಡ ಬಹಳ ಹಿಂದಿನಿಂದಲೇ ಬಿ.ಡಬ್ಲ್ಯು.ಎಸ್.ಎಸ್.ಬಿ., ಬಿ.ಡಿ.ಎ. ಮತ್ತು ಬೆಂಗಳೂರು ಮಹಾನಗರ ಪಾಲಿಕೆ ಈ ಮೂರು ಸಂಸ್ಥೆಗಳ ಹಿಂದುಗಡೆ ಬೆಂಗಾವಲಾಗಿ ಬೆಂಗಳೂರು ಮೆಟ್ರೋಪಾಲಿಟನ್ ರೀಜನಲ್ ಡೆವಲಪ್‌ಮೆಂಟ್ ಅಥಾರಿಟಿ, ಬಿ.ಎಂ.ಆರ್.ಡಿ. ಮಾಡಿದ್ದಲ್ಲದೆ, ಕೇಂದ್ರ ಸರ್ಕಾರ, ರಾಜ್ಯ ಸರ್ಕಾರದಿಂದ ಅಲ್ಲದೆ, ಈ ಹುಡ್ಕೊ ಮುಂತಾದ ಹಣಕಾಸು ಸಂಸ್ಥೆಗಳಿಂದ ಹಣ ಪಡೆಯುವುದಕೋಸ್ಕರವೇ ನೋಡಲ್ ಏಜೆನ್ಸಿಯಾಗಿ ಕರ್ನಾಟಕ ಅರ್ಬನ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಅಂಡ್ ಫೈನಾನ್ಸ್ ಕಾರ್ಪೊರೇಷನ್ ಎಂದು ಮಾಡಲಾಗಿದೆ. ಮೊನ್ನೆ ಕೇಂದ್ರ ಸರ್ಕಾರದ ಆಯವ್ಯಯದಲ್ಲೂ ಕೂಡ ಅದರ ಪ್ರಸ್ತಾಪವಿದೆ. ಅಲ್ಲಿ ಕೆ.ಯು.ಐ.ಡಿ.ಎಫ್.ಸಿ.ನಲ್ಲಿ ಹಣವನ್ನು ಕ್ರೋಢೀಕರಿಸಿ, ಅಲ್ಲಿಂದ ಬಿ.ಡಬ್ಲ್ಯು.ಎಸ್.ಎಸ್.ಬಿ.ಗೋ, ಮಹಾನಗರಪಾಲಿಕೆಗೋ ಈ ಕಾರ್ಯಕ್ರಮಗಳಿಗೆ ಹಣವನ್ನು ಒದಗಿಸುವಂಥ ಒಂದು ವ್ಯವಸ್ಥೆಯನ್ನು ಮಾಡುವುದಕ್ಕೆ ಆಗಲೇ ಈ ಕೆ.ಯು.ಐ.ಡಿ.ಎಫ್.ಸಿ.ಯಲ್ಲಿ 105 ಕೋಟಿ ರೂಪಾಯಿಗಳು ಕ್ರೋಢೀಕರಣವಾಗಿರುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಅನೇಕ ಯೋಜನೆಗಳನ್ನು ನಾವೇನು ಹಾಕಿಕೊಂಡಿದ್ದೇವೆ ಅದನ್ನು ನಾನು ತಮ್ಮ ಮುಂದೆ ಸಂಕ್ಷಿಪ್ತವಾಗಿ ಇಡುತ್ತೇನೆ. ಬೆಂಗಳೂರು ಮಹಾನಗರ ಪಾಲಿಕೆಗೆ ಒಳಪಟ್ಟಂಥ ಮಾರೇನಹಳ್ಳಿ ಕಟ್ಟಡ ಕುರಿತು ಆಗಲೇ ತಾವೇನು ಕೇಳಿದ್ದೀರಿ, ಅಲ್ಲಿ ಕಟ್ಟಡ ಕುಸಿದು ಬಿದ್ದಂತೆ ಇಲ್ಲಿ

ವಿಧಾನಮಂಡಲದಲ್ಲಿ ಆ ವಿಷಯ ಪ್ರಸ್ತಾಪವಾಗಿತ್ತು. ಇದಕ್ಕೆ ಸಂಬಂಧಿಸಿದಂತೆ ಇತರ ಕಡೆಗಳಲ್ಲಿ ಕಟ್ಟಿರುವ ಪೌರ ಕಾರ್ಮಿಕರ ಕಟ್ಟಡಗಳನ್ನು ಪರಿಶೀಲಿಸಿ ವಿಶ್ವನಾಥ್‌ರವರ ಅಧ್ಯಕ್ಷತೆಯಲ್ಲಿ ತಜ್ಞರ ಸಮಿತಿಯನ್ನು ನೇಮಕ ಮಾಡಲಾಗಿದ್ದು, ಈ ಸಮಿತಿಯ ವರದಿಯನ್ನು ಅನುಸರಿಸಿ ಮುಂದಿನ ಕ್ರಮ- ವನ್ನು ತೆಗೆದುಕೊಳ್ಳಲಾಗುತ್ತದೆಂದು ಮತ್ತೊಮ್ಮೆ ಇಲ್ಲಿ ಸ್ಪಷ್ಟೀಕರಿಸುತ್ತೇನೆ. ಆಗಲೇ ಹಿಂದೆ ಜಕ್ಕರಾಯನ ಕೆರೆಯಲ್ಲಿ ಆದ ಅನಾಹುತ ಕುರಿತು ಚಾರ್ಜಸ್ ಫ್ರೇಂ ಮಾಡುವುದಕ್ಕೆ ಆದೇಶವನ್ನು ನೀಡಲಾಗಿದೆ. ಅಲ್ಲಿ ಮೊನ್ನೆ ಕಟ್ಟಡದ ಕುಸಿತದಿಂದ ಯಾರ್‍ಯಾರು ನಿವೇಶನವನ್ನು ಕಳೆದುಕೊಂಡರು, ಆ ಫಲಾನು- ಭವಿಗಳಿಗೆ ಲಾಟರಿ ಚೀಟಿಯನ್ನು ಎತ್ತುವ ಮೂಲಕ ತಾವೇ ನಿವೇಶನಗಳನ್ನು ತೆಗೆದಿದ್ದಾರೆ, ನಿವೇಶನ ಹಂಚಿಕೆ ಕಾರ್ಯ ಈಗ ಪೂರ್ಣಗೊಂಡಿದೆ. ಇದರ ಜೊತೆಗೆ ಆಗಸ್ಟ್ 15ರಂದು ಅವರಿಗೆ ಮನೆ ಕಟ್ಟಲು ಸಾಲವನ್ನು ಮಂಜೂರು ಮಾಡುವ ಒಂದು ಕಾರ್ಯಕ್ರಮವನ್ನು ಮಹಾನಗರಪಾಲಿಕೆಯ ವತಿ- ಯಿಂದ ಇಟ್ಟುಕೊಂಡಿದ್ದೇವೆ. ರಸ್ತೆಗಳ ಕುರಿತು ಬೇರೆ ಬೇರೆ ಸಮಯದಲ್ಲಿ, ಬೇರೆ ಬೇರೆ ಸಂದರ್ಭದಲ್ಲಿ ಈ ವಿಚಾರಗಳೆಲ್ಲಾ ಬಂದು ಹೋಗಿವೆ. ರಸ್ತೆಗಳ ಉಬ್ಬುತಗ್ಗುಗಳನ್ನು ಎಲ್ಲಾ ವಿಭಾಗಗಳಲ್ಲೂ ಸರಿಪಡಿ- ಸಲು ಕೂಡಲೇ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕೆಂದು ಹೇಳಿದ ತಕ್ಷಣವೇ ಇದನ್ನು ನಾವು ಹಮ್ಮಿಕೊಂಡಿದ್ದೇವೆ. ಈ ಕುರಿತು ಸಮನ್ವಯ ಸಮಿತಿಯನ್ನು ರಚಿಸಲಾಗಿದೆ. ಏಕೆಂದರೆ ರೋಡ್ ಕಟಿಂಗ್‌ಅನ್ನು ಒಮ್ಮೊಮ್ಮೆ ಟೆಲಿಫೋನ್ ಇಲಾಖೆಯವರು ಮಾಡುತ್ತಾರೆ, ವಾಟರ್ ಸಪ್ಲೈನವರು ಮಾಡುತ್ತಾರೆ ಅದು ದುರಸ್ತಿಯಾಗದೆ ಹಾಗೆ ಇರುತ್ತದೆ, ಅವುಗಳಿಂದ ಬಹಳ ಅಪಘಾತಗಳಾಗಿವೆ, ತೊಂದರೆಗಳುಂಟಾಗಿವೆ ಎನ್ನುವುದಕ್ಕೆ ಒಂದು ಸಮನ್ವಯ ಸಮಿತಿಯನ್ನು ಮಾಡಿ, ಇದು ದಿನಾಂಕ: 27-7-1996ರಂದು ತನ್ನ ಪ್ರಥಮ ಒಂದು ಸಭೆಯನ್ನು ನಡೆಸಿ ಆಗಸ್ಟ್, ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳುಗಳಲ್ಲಿ ಈ ರೋಡ್ ಕಟಿಂಗ್ ಮಾಡಿದ ಎಲ್ಲಾ ಪ್ರಕರಣಗಳಲ್ಲಿ ದುರಸ್ತಿ ಮಾಡುವ ಕೆಲಸವನ್ನು ಮಹಾನಗರ ಪಾಲಿಕೆಯೇ ನಿರ್ವಹಿಸಬೇಕೆಂದು ಠರಾವನ್ನು ಪಾಸ್ ಮಾಡಿದೆ. ನವೆಂಬರ್ ಒಂದನೇ ತಾರೀಖಿನಿಂದ ಎಲ್ಲೆಲ್ಲಿ ರಸ್ತೆಗಳನ್ನು ಅಗೆಯುವುದಾಗಲಿ, ರೋಡ್ ಕಟಿಂಗ್ ಮಾಡುವುದಾಗಲಿ ಮಾಡಿಸುತ್ತಾರೆ ಇಂಥ ರಸ್ತೆಗಳನ್ನು ಆಯಾ ಇಲಾಖೆಗಳೇ ದುರಸ್ತಿಪಡಿಸುವಂಥ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಇನ್ನು ಕಸವನ್ನು ಗುಡಿಸುವ ಹಾಗೂ ಸಾಗಿಸುವ ವ್ಯವಸ್ಥೆ ಕೂಡ ಸರಿಯಾಗಿಲ್ಲ, ಅದು ಗಾರ್ಬೇಜ್ ಡಿಸ್ಪೋಸಲ್ ಅಲ್ಲ ಗಾರ್ಬೇಜ್ ಡಿಸ್‌ಪರ್ಸಲ್ ಸಿಸ್ಟಂ ಆಗಿದೆ ಎನ್ನುವುದನ್ನು ಸನ್ಮಾನ್ಯ ಸುರೇಶ್ ಕುಮಾರ್‌ರವರು ಹೇಳಿದರು. ಕ್ವಿಟ್ ಇಂಡಿಯಾ ಚಳುವಳಿ, ಆಗಸ್ಟ್ 9, ಇವತ್ತಿನ ದಿವಸದಿಂದಲೇ ಒಂದು ಹೊಸ ಕಾರ್ಯಕ್ರಮವನ್ನು ಹಾಕಿಕೊಂಡಿ- ದ್ದೇವೆ, ಈ ಒಂದು ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿ ನಾನು ಈ ಸದನಕ್ಕೆ ಬಂದಿದ್ದೇನೆ. ಅಂದರೆ ಎಲ್ಲಾ ಶಾಸಕರ ಕ್ಷೇತ್ರಗಳಲ್ಲಿ ಎಷ್ಟೆಷ್ಟು ಡಿವಿಷನ್‌ಗಳಿವೆ, ವಾರಕ್ಕೊಂದು ದಿವಸ ಪ್ರತಿ ಶಾಸಕರ ಕ್ಷೇತ್ರದಲ್ಲಿ ಎರಡೆರಡು ವಿಭಾಗಗಳಲ್ಲಿ ಕ್ಲೀನಿಂಗ್, ಗಾರ್ಬೇಜ್ ಡಿಸ್‌ಪೋಸಲ್ ಮತ್ತು ಡೆಬ್ರಿಯನ್ನು ಎತ್ತುವುದು, ಸ್ವಚ್ಛಗೊಳಿಸುವ ಒಂದು ಕಾರ್ಯಕ್ರಮವನ್ನು ಇವತ್ತಿನಿಂದಲೇ ನಾವು ಹಮ್ಮಿಕೊಂಡಿ- ದ್ದೇವೆ, ಅದು ಪ್ರಾರಂಭ ಮಾಡಿದೆ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳಲು ಬಯಸುತ್ತೇನೆ. ಇನ್ನು,

ಇದನ್ನು ಸಹಜವಾಗಿ ಕೊನೆಯಲ್ಲಿ ಕೇಳಲಾಗುತ್ತದೆ, ಆದರೆ ಈ ಎಲ್ಲಾ ಸಮಸ್ಯೆಗಳು ಎಷ್ಟರ ಮಟ್ಟಿಗೆ ಇವೆ ಎಂದರೆ, ನಾನು ಈ ಸಲ ನಮ್ಮ ಸರ್ಕಾರಕ್ಕೆ, ಮಾನ್ಯ ಮುಖ್ಯ ಮಂತ್ರಿಗಳು, ಉಪ ಮುಖ್ಯ-ಮಂತ್ರಿಗಳ ಹತ್ತಿರ ಒಂದು ನೂರು ಕೋಟಿ ರೂಪಾಯಿಗಳನ್ನು ಈ ವರ್ಷವೇ ನಮಗೆ ಅಡಿಷನಲ್ ಗ್ರ್ಯಾಂಟ್ ಕೊಡಬೇಕು, ಈ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬೇಕಾದರೆ ಎಂದು ನಾನು ಕೇಳಿ–ಕೊಂಡಿದ್ದೇನೆ. ಇನ್ನು ಕಸ ಗುಡಿಸುವ ಲಾರಿಗಳ ಕುರಿತು ಹೇಳಬೇಕೆಂದರೆ ನಾವು ಗುತ್ತಿಗೆಗಳ ಮೇಲೆ ಕೊಡುತ್ತೇವೆ, ಅಂಥವುಗಳನ್ನೆಲ್ಲಾ ಮಾಡಿದರೆ ಆಗುವುದಿಲ್ಲ. ನಮ್ಮದು ಇಷ್ಟು ದೊಡ್ಡ ನಗರವಾಗಿದೆ, ಆದರೂ ಸಂಪೂರ್ಣವಾಗಿ ಲಾರಿಗಳು ನಮ್ಮ ಹತ್ತಿರ ಇಲ್ಲ. ಉದಾಹರಣೆಗೆ ನನ್ನ ಕ್ಷೇತ್ರದಲ್ಲಿ ಏಳು ವಿಭಾಗಗಳಿವೆ. ಆದರೆ ಸೋಮಣ್ಣನವರು ಅಥವಾ ಸುರೇಶ್ ಕುಮಾರ್‌ರವರ ಕ್ಷೇತ್ರದಲ್ಲಿ 15-16 ಡಿವಿಷನ್‌ಗಳಿವೆ. ಅದಕ್ಕೆ ತಕ್ಕಂತೆ ಲಾರಿಗಳನ್ನು ನಮ್ಮ ಮಹಾನಗರ ಪಾಲಿಕೆ ಕೊಂಡುಕೊಳ್ಳಬೇಕು. ಅದೂ ಕೂಡ modern lorries which are closed, so that garbage disposal ಮಾಡುವುದಕ್ಕೆ ಹೊಗುವಾಗ ರಸ್ತೆಯ ಉದ್ದಕ್ಕೂ ಬೀಳಿಸುತ್ತಾ ಹೋಗುವಂಥಾದ್ದು ಏನು ನಡೆಯು-ತ್ತಿದೆ, ಅದನ್ನು ತಪ್ಪಿಸಬೇಕು ಎನ್ನುವ ದೃಷ್ಟಿಯಿಂದ ನಾನು ಕೂಡ ಸರ್ಕಾರದ ಮುಂದೆ ಮನವಿ ಮಾಡಿದ್ದೇನೆ. ನಮ್ಮದು ಮಹಾನಗರ ಪಾಲಿಕೆಯಾಗಿದೆ, ಮಾರ್ಡನ್ ಡೆಲ್ಲಿ ಟೈಪ್ ಎಂದು ಹೇಳುತ್ತಾರೆ, ಆ ಲಾರಿಗಳು ಮುಚ್ಚಿರುತ್ತವೆ, ಸುಮಾರು ನೂರು ಡಿವಿಶನ್‌ಗಳಿದ್ದರೆ ಇನ್ನೂರು ಲಾರಿ-ಗಳಾದರೂ ಇರಲೇ ಬೇಕು. ಅದರ ಜೊತೆಯಲ್ಲಿ ನಮ್ಮ ಹತ್ತಿರ ಜೆ.ಸಿ.ಬಿ. ಎಕ್ಸ್‌ಕವೇಟರ್ಸ್ ಇದ್ದರೆ ಅವು ಬಹೋಪಯೋಗಿಯಾಗಿ ಉಪಯೋಗಕ್ಕೆ ಬರುತ್ತವೆ. ಅದನ್ನು ಪ್ರತಿಯೊಂದು ಸಲ ನಾವು ಬಾಡಿಗೆಗೆ ತೆಗೆದುಕೊಳ್ಳಬೇಕು. ಇದು ಒಂದು ರೀತಿ ಫೈರ್ ಫೈಟಿಂಗ್ ಎಕ್ಸರ್‌ಸೈಜ್ ಹಾಗೆ ಆಗಿದೆ. ಉದಾ-ಹರಣೆಗೆ ಹೇಳುವುದಾದರೆ, ನನ್ನ ಕ್ಷೇತ್ರದಲ್ಲಿ ಬೃಂದಾವನ ನಗರ ಎಂದು ಒಂದು ನಗರವಿದೆ. ಅಲ್ಲಿ ಮಳೆ ನೀರು, ಕೊಳಚೆ ನೀರು ಎಲ್ಲಾ ಹೋಗಿ ಸೇರಿಕೊಂಡು ಒಮ್ಮೆಮ್ಮೆ ಎಲ್ಲರ ಮನೆಗಳಲ್ಲಿ ಮೊಣಕಾಲಷ್ಟು ನೀರು ತುಂಬಿಕೊಳ್ಳುತ್ತದೆ. ಅದನ್ನು ಕ್ಲಿಯರ್ ಮಾಡುವುದಕ್ಕೆ ಗ್ಯಾಂಗ್‌ಮೆನ್ ಪ್ರಯತ್ನ ಮಾಡುತ್ತಾರೆ. ಆ ಕೊಳಚೆ ನೀರಿನಲ್ಲಿ ಮುಳುಗಿ ಮೇಲೆದ್ದು ಬಂದು ಪ್ರಯತ್ನ ಮಾಡಿದರೂ ಸರಿಪಡಿಸುವುದಕ್ಕೆ ಆಗದೇ ಇದ್ದಂಥ ಸಂದರ್ಭಗಳಲ್ಲಿ ಈ ಎಕ್ಸ್‌ಕವೇಟರ್‌ಗಳನ್ನು ಬಾಡಿಗೆಗೆ ತೆಗೆದುಕೊಂಡು ಅದನ್ನು ಕ್ಲಿಯರ್ ಮಾಡಿದ್ದೇವೆ. ಆದರೆ ಅದನ್ನು ಉಪಯೋಗಿಸಿದ ನಂತರ ಅವುಗಳ ಬಿಲ್ ಕೊಡುವುದಕ್ಕೂ ಕೂಡ ಬಹಳ ಪರದಾಡಬೇಕಾಗುತ್ತದೆ. ಬಿಲ್ ಸ್ಯಾಂಕ್ಷನ್ ಮಾಡದೇ ಇದ್ದಾಗ ಅವರು ಮುಂದಿನ ಸಲ ಬರುವುದೇ ಇಲ್ಲ. ಇದನ್ನು ತಪ್ಪಿಸುವುದಕ್ಕೋಸ್ಕರ ಕನಿಷ್ಟ ಪಕ್ಷ, ಇಷ್ಟು ದೊಡ್ಡ ನಗರವಿದೆ, ಇಷ್ಟು ದೊಡ್ಡ ಮಹಾನಗರ ಪಾಲಿಕೆಗೆ 100-200 ಸ್ವಂತ ಮಾರ್ಡನ್ ಲಾರಿಗಳು ಬೇಕಾಗಿವೆ. ಅದರ ಜೊತೆ ಯಲ್ಲಿ ನಾಲ್ಕು ಎಕ್ಸ್‌ಕವೇಟರ್‌ಗಳೂ ಕೂಡ ಇರಬೇಕು ಎನ್ನುವ ಪ್ರಸ್ತಾಪವನ್ನು ನಾವು ಸರ್ಕಾರಕ್ಕೆ ಕೊಟ್ಟಿದ್ದೇವೆ ಎನ್ನುವುದನ್ನೂ ಸಹ ಸನ್ಮಾನ್ಯ ಸದಸ್ಯರ ಗಮನಕ್ಕೆ ತರಲು ನಾನು ಇಚ್ಛಿಸುತ್ತೇನೆ. ಹಾಗೆ ಎಲ್ಲಾ ಕಡೆ, ಫುಟ್‌ಪಾತ್‌ಗಳಲ್ಲಿ ಪಾದಚಾರಿ ರಸ್ತೆಗಳು ಸಂಚಾರಕ್ಕೆ ಸದಾಕಾಲ ತೆರವಾಗರಬೇಕು ಎಂದು ತೀರ್ಮಾನಿಸಿದ್ದೇವೆ. ಎಲ್ಲಾ ತರಹದ ವ್ಯಾಪಾರಿಗಳು ಅಲ್ಲಿ ವ್ಯಾಪಾರ ಮಾಡುತ್ತಾರೆ. ಮೊನ್ನೆ

ಎಂ. ಜಿ. ರೋಡ್, ಬ್ರಿಗೇಡ್ ರೋಡಿನಲ್ಲಿ ಪ್ರಾರಂಭ ಮಾಡಿದರು. ಇದಕ್ಕೆ ಉತ್ತರವೇ ಇಲ್ಲ. ಅವರು ಅಲ್ಲಿ ಅನಧಿಕೃತವಾಗಿ ಯಾವ ಒಂದು ಸುಂಕ ಅಥವಾ ಟ್ಯಾಕ್ಸ್‌ಅನ್ನು ಕೊಡದೇ ಅಂಗಡಿಗಳನ್ನು ಪ್ರಾರಂಭ ಮಾಡುತ್ತಾರೆ. ಮಹಾ ನಗರಪಾಲಿಕೆಯವರು ಅವರನ್ನು ಓಡಿಸುವುದು, ಅವರು ಅವರ ಎಲ್ಲಾ ಸಾಮಾನು ಸರಂಜಾಮುಗಳನ್ನು ಎತ್ತಿಕೊಂಡು ಹೋಗುತ್ತಾರೆ. ಲಾರಿ ಹೋದ ತಕ್ಷಣ ಮತ್ತೆ ಬಂದು ಅಲ್ಲಿ ಕುಳಿತುಕೊಳ್ಳುತ್ತಾರೆ. ಅದಕ್ಕಾಗಿ ಮೊನ್ನೆ ನಮ್ಮ ಆಡಳಿತಾಧಿಕಾರಿಗಳು ಹೇಳಿದ್ದಾರೆ, ಅವರು ಎಷ್ಟು ಸಲ ಬರುತ್ತಾರೆ, ನಾವು ಅಷ್ಟು ಸಲವು ಮತ್ತೆ ಮತ್ತೆ ಅವರನ್ನು ಓಡಿಸುತ್ತೇವೆ. ಎಲ್ಲಾ ಕಡೆ ಈ ಕ್ರಮ ಕೈಗೊಳ್ಳುತ್ತೇವೆ ಎಂದು. ಇಲ್ಲವೆಂದರೆ ರಸ್ತೆಗಳಲ್ಲಿ ಜನಗಳು ನಡೆಯುವುದಕ್ಕೇ ಆಗುವುದಿಲ್ಲ. ಅದು ಬ್ರಿಗೇಡ್ ರೋಡ್ ಆಗಲೀ, ಎಂ. ಜಿ. ರೋಡ್ ಆಗಲೀ, ಕೆ. ಜಿ. ರೋಡ್ ಆಗಲೀ, ಕೃಷ್ಣ ರಾಜೇಂದ್ರ ಮಾರುಕಟ್ಟೆಯಾಗಲೀ, ಆದಕ್ಕೆ ಒಂದು ಕಾರ್ಯಕ್ರಮವನ್ನು ಮಹಾನಗರಪಾಲಿಕೆ ಹಾಕಿ-ಕೊಂಡಿದೆ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ. ಇನ್ನು ಉದ್ಯಾನವನಗಳ ಕುರಿತು ನಾನು ಈಗಾಗಲೇ ಹೇಳಿದೆ. ಒಟ್ಟು ಸುಮಾರು 160 ಸಣ್ಣ, ಮಧ್ಯಮ ಮತ್ತು ದೊಡ್ಡ ಪಾರ್ಕುಗಳು ಇವೆ. ಅವುಗಳ ಮೈನ್‌ಟೆನೆನ್ಸ್‌ಗೆ ಸಿಬ್ಬಂದಿ ಇಲ್ಲ. ಉದಾಹರಣೆಗೆ ನನ್ನ ಕ್ಷೇತ್ರವಾದ ಮಲ್ಲೇಶ್ವರದಲ್ಲಿ, ನನ್ನ ಮನೆಯ ಸುತ್ತಮುತ್ತಲೇ ಮೂರು ಪಾರ್ಕುಗಳಿವೆ. ಅವುಗಳನ್ನು ಯಾರೂ ವಿಚಾರಿಸುವವರು ಇಲ್ಲ. ಅಂಥ ಕಡೆ ನಾವು ಜನರ ಹತ್ತಿರ ಕೇಳಿಕೊಂಡಾಗ, ಇವತ್ತು ಜನರೇ ಮುಂದೆ ಬಂದು ಇವು-ಗಳನ್ನು ನಾವು ನೋಡಿಕೊಳ್ಳುತ್ತೇವೆ ಎನ್ನುವ ಒಂದು ರೆಸ್ಪಾನ್ಸ್ ಜನಗಳಿಂದ ಬಂದಿದೆ. Response from the people has come. It is indeed very necessary today, because unless the people participate ಇದು ಮಹಾನಗರದ ಸಮಸ್ಯೆಯಾಗಲೀ ಅಥವಾ ಉದ್ಯಾನವನದ ಸಮಸ್ಯೆಯಾಗಲೀ ಅಥವಾ ಗಾರ್ಬೇಜ್ ಡಿಸ್ಪೋಸಲ್ ಮಾಡುವಂಥಾದ್ದಾಗಲೀ ಅಥವಾ ಸ್ವಚ್ಛತೆಯಾಗಲೀ ಈ ಯಾವ ಕಾರ್ಯಕ್ರಮಗಳೂ ಯಶಸ್ವಿಯಾಗುವುದಿಲ್ಲ ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛಿಸುತ್ತೇನೆ. ಅದಕ್ಕೆ ತಕ್ಕ ರೆಸ್ಪಾನ್ಸ್ ಕೂಡ ಇದೆ. ಆದರೆ ಮಹಾನಗರ ಪಾಲಿಕೆ ರೆಸ್ಪಾನ್ಸ್ ಮಾಡುವುದರಲ್ಲಿ ತಡ ಮಾಡುತ್ತದೆ ಎನ್ನುವ ಒಂದು ದೂರು ಕೂಡ ಇದೆ. ಅದನ್ನೂ ಕೂಡ ನಾನು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುತ್ತೇನೆ ಎನ್ನುವುದನ್ನು ಈ ಸಂದರ್ಭ-ದಲ್ಲಿ ಹೇಳುತ್ತೇನೆ. ಕುಡಿಯುವ ನೀರಿನ ವಿಷಯದಲ್ಲಿ ಕೂಡ ಅನೇಕ ಸಮಸ್ಯೆಗಳಿವೆ. ನಾವು ಈಗಾ-ಗಲೇ 483 ಸ್ಥಳಗಳಲ್ಲಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಇವರ ಮೂಲಕ ಕೊಳವೆ ಬಾವಿಗಳನ್ನು ತೋಡುವ ಒಂದು ಪ್ರಯತ್ನವನ್ನು ಮಾಡಿದ್ದೇವೆ. ಇದಕ್ಕೆ 50 ಲಕ್ಷ ರೂಪಾಯಿಗಳನ್ನು ಆಗಲೇ ಬಿ.ಡಬ್ಲ್ಯು.ಎಸ್.ಎಸ್.ಬಿ.ಗೆ ಕಟ್ಟಿದ್ದೇವೆ. ಇನ್ನೂ ಸ್ವಲ್ಪ ಹಣ ಕಟ್ಟಬೇಕು, ಆಮೇಲೆ ನಾವು ಕೆಲಸ ಪ್ರಾರಂಭ ಮಾಡುತ್ತೇವೆ ಎಂದು ಅಲ್ಲಿಂದ ಒಂದು ಎಚ್ಚರಿಕೆ ಕೂಡ ಬಂದಿದೆ. ಅದಕ್ಕೆ ಸುಮಾರು 100 ಕೋಟಿ ರೂಪಾಯಿಗಳು ಮಾರ್ಚ್ 31ರೊಳಗೆ ಬೇಕು ಎನ್ನುವುದನ್ನು ನಾನು ಸರ್ಕಾರದ ಮೇಲೆ ಒತ್ತಡ ತರಲು ನಿಮ್ಮ ಮುಂದೆ ಇವುಗಳನ್ನೆಲ್ಲಾ ಹೇಳುತ್ತಿದ್ದೇನೆ. ಬೆಂಗಳೂರು ಮಹಾನಗರ ಪಾಲಿಕೆ 151 ಚದುರ ಕಿ. ಮೀ. ಇದ್ದದ್ದು, ಈಗ 224 ಆಗಿದೆ.

ಶ್ರೀ ಹೆಚ್.ಎನ್. ನಂಜೇಗೌಡ:- ಕೊಳವೆ ಬಾವಿಗಳಿಗಾಗಿ 50 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ ಎಂದು ಹೇಳಿದಿರಿ. ಆದರೆ ಎರಡು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುತ್ತೇವೆ ಎಂದು ಹೇಳಿದ್ದೀರಿ. ಕೊಳವೆ ಬಾವಿ ತೆಗೆದಿದ್ದಾರೆ, ಪಂಪ್ ಹಾಕುವುದಕ್ಕೆ ಆಗಿಲ್ಲ. ಏಕೆಂದರೆ ದುಡ್ಡಿಲ್ಲ, ಇವರು ದುಡ್ಡು ಕಟ್ಟಿಲ್ಲ. ನೀವು ಕೂಡಲೇ ಇನ್ನೂ ಒಂದೂವರೆ ಕೋಟಿ ರೂಪಾ-ಯಿಗಳನ್ನು ಕಳುಹಿಸಿದರೆ ಅದಕ್ಕೇನಾದರೂ ಏರ್ಪಾಟು ಮಾಡುವುದಕ್ಕೆ ಆಗುತ್ತದೆ. ಇಲ್ಲದಿದ್ದರೆ ಬಾವಿ ಇರುತ್ತದೆ, ಮಕ್ಕಳು ಕಲ್ಲು ತುಂಬಬಹುದು ಅವಗಳಿಗೆ ಅಷ್ಟೆ.

(ಈ ಹಂತದಲ್ಲಿ ಸಭಾಧ್ಯಕ್ಷರು ಶ್ರೀ ರಮೇಶ್ ಕುಮಾರ್‌ರವರು ಪೀಠವನ್ನಲಂಕರಿಸಿದರು)

ಶ್ರೀ ಅನಂತನಾಗ್:- ಅದಕ್ಕೇ ಮಹಾನಗರಪಾಲಿಕೆ, ಸರ್ಕಾರದಿಂದ ಹೆಚ್ಚಿನ ಗ್ರ್ಯಾಂಟ್ ಬೇಕು ಎಂಬ ಒತ್ತಾಯವನ್ನು ತಂದಿದೆ. 50 ಲಕ್ಷ ರೂ.ಗಳನ್ನು ಈಗಾಗಲೇ ಒದಗಿಸಲಾಗಿದೆ. ಎರಡು ಕೋಟಿಯವರಿಗೆ ಕೊಟ್ಟ ಕೂಡಲೇ ಕೊಳವೆ ಬಾವಿಗಳನ್ನು ತೋಡಲಾಗುತ್ತದೆ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಸಿಬ್ಬಂದಿ ವರ್ಗದ ಕುರಿತು ಹೇಳುವುದಾದರೆ, ಕಳೆದ 10 ವರ್ಷಗಳಿಂದರೂ ಇಲ್ಲಿ ಏನೇನು ಬೆಳವಣಿಗೆಯಾಗಿದೆ, ಆದರೆ ಸಿಬ್ಬಂಧಿ ಜಾಸ್ತಿಯಾಗಿಲ್ಲ, ಜಾಸ್ತಿ ಮಾಡಿಲ್ಲ. ಅದರ ಕುರಿತು ಕೂಡ ನಾನು ಈಗಾಗಲೇ ಹೇಳಿದೆ, ಮುನಿಯಪ್ಪನವರೂ ಸಹ ಅನೇಕ ಸಲ ಹೇಳಿದರು, ಲಾಟರಿ ಮೂಲಕ ಮಾಡಬಾರದು, ಅಲ್ಲದೇ ಕನ್ನಡಿಗರಿಗೆ ಹೆಚ್ಚು ಆದ್ಯತೆ ಕೊಡ-ಬೇಕು, ಎಫಿಷಿಯಂಟ್ ಇದ್ದವರಿಗೆ, ಫಿಸಿಕಲಿ ಫಿಟ್ ಇದ್ದವರಿಗೆ ಮಾತ್ರ ಇಂಥ ಕೆಲಸಗಳನ್ನು ಕೊಡ-ಬೇಕು ಎನ್ನುವುದನ್ನು ಅವರು ಹೇಳಿದ್ದಾರೆ. ಈಗ ಇರುವ ಸಿಬ್ಬಂದಿ ಸುಮಾರು 16,232, ಖಾಲಿ ಇರುವ ಹುದ್ದೆಗಳು 2,761. ಇವುಗಳನ್ನು ತುಂಬುವುದಕ್ಕೆ ನಾವು ಕ್ರಮ ಕೈಗೊಳ್ಳುತ್ತೇವೆ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಈಗಿನ ಹೊಸ ವಾರ್ಡ್ ಸಿಸ್ಟಮ್‌ನಲ್ಲಿ ಕೂಡ ಈಗಿನ ವ್ಯವಸ್ಥೆಯನ್ನು ರಿವ್ಯೂ ಮಾಡಿ, ರಿವೈಸ್ ಮಾಡಿದಾಗ ಪ್ರತಿಯೊಂದು ವಲಯದಲ್ಲೂ ಒಬ್ಬ ಉಪ ಆಯುಕ್ತರು, ಒಬ್ಬ ಮುಖ್ಯ ಅಭಿಯಂತರರು, ಒಬ್ಬ ಆರೋಗ್ಯಾಧಿಕಾರಿ ಕಾರ್ಯ ನಿರ್ವಹಣೆ ಮಾಡುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ. ಇವರಿಗೆ ಸಹಾಯಕರಾಗಿ ಬೃಹತ್ ವಿಧಾನಸಭಾ ಕ್ಷೇತ್ರದ ಇಬ್ಬರು ಕಾರ್ಯಪಾಲಕ ಅಭಿಯಂತರರು, ಇಬ್ಬರು ಆರೋಗ್ಯ ವೈದ್ಯಾಧಿಕಾರಿಗಳು, ಕೆಲವು ವಿಧಾನಸಭಾ ಕ್ಷೇತ್ರಗಳಿಗೆ ಒಬ್ಬೊಬ್ಬ ಕಾರ್ಯಪಾಲಕ ಅಭಿಯಂತರರು ಹಾಗೂ ಆರೋಗ್ಯ ವೈದ್ಯಾಧಿಕಾರಿಗಳು ಕಾರ್ಯ ನಿರ್ವಹಿಸುವಂತೆ ನೇಮಕ ಮಾಡಿದ್ದೇವೆ. ಇದೇ ರೀತಿ ಕಂದಾಯ ಅಧಿಕಾರಿಗಳೂ ಸಹ ಕಾರ್ಯ ನಿರ್ವಹಿಸುವಂತೆ ಪ್ರತಿಯೊಂದು ಕ್ಷೇತ್ರದಲ್ಲೂ ಮೂರರಿಂದ ನಾಲ್ಕು ವಾರ್ಡ್‌ಗಳಿಗೆ ಒಬ್ಬರಂತೆ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು ಹಾಗೂ ಸಹಾಯಕ ಕಂದಾಯ ಅಧಿಕಾರಿಗಳು ಕಾರ್ಯ ನಿರ್ವಹಿಸು-ವಂತೆ ಒಂದು ವ್ಯವಸ್ಥೆಯನ್ನು ತರಲಾಗಿದೆ. ಅಂದರೆ ಸರಾಸರಿ 40 ಸಾವಿರ ಜನಸಂಖ್ಯೆಗೆ ಈ ರೀತಿಯ ಸ್ಟಾಫ್ ಅನ್ನು ಒದಗಿಸುವ ವ್ಯವಸ್ಥೆಯನ್ನು ಮಾಡಿದ್ದೇವೆ. ಇನ್ನು ಬೆಂಗಳೂರು ಮಹಾನಗರ ಪಾಲಿಕೆ-ಯಲ್ಲಿ ಸುಮಾರು 6 ಸಾವಿರ ಜನ ಪೌರ ಕಾರ್ಮಿಕರು ಇದ್ದಾರೆ. ಆದರೆ ಆಬ್ಸೆಂಟಿಸಂ ಬಹಳ

ಇದ್ದುದರಿಂದ ಈ ಸಮಸ್ಯೆಗಳು ಹೆಚ್ಚುತ್ತಿವೆ. ಇನ್ನೂ 1200 ಪೌರ ಕಾರ್ಮಿಕರನ್ನು ನೇಮಕ ಮಾಡುವ ಪ್ರಕ್ರಿಯೆ ಈಗ ಮುಕ್ತಾಯದ ಹಂತದಲ್ಲಿದೆ. ಅದನ್ನು ನಾವು ಆದಷ್ಟು ಬೇಗ ಕಾರ್ಯಪ್ರವೃತ್ತರಾಗಿ ಅವರನ್ನು ಕೆಲಸಕ್ಕೆ ತೆಗೆದುಕೊಳ್ಳುವಂಥ, ನೇಮಕಾತಿ ಮಾಡುವಂಥ ಕೆಲಸವನ್ನು ಮಾಡುತ್ತೇವೆ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಅಭಿವೃದ್ಧಿ ಚಟುವಟಿಕೆಗಳಲ್ಲಿ ನಮ್ಮ ಬೆಂಗಳೂರು ಮಹಾನಗರ ಪಾಲಿಕೆಯ ನಾಗರೀಕ ಸಭಾಂಗಣ ಎನ್ನುವ ಕಾರ್ಯಕ್ರಮ ತಮಗೆಲ್ಲರಿಗೂ ಗೊತ್ತಿದೆ. ಕೃಷ್ಣರಾಜೇಂದ್ರ ಮಾರುಕಟ್ಟೆ ಬಳಿ ಮಾಂಸದ ಮಾರುಕಟ್ಟೆ ನಿರ್ಮಾಣ, ಶ್ರೀ ಕೃಷ್ಣರಾಜೇಂದ್ರ ಮಾರುಕಟ್ಟೆಯ ನವೀಕರಣ ಹೀಗೆ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಹಾಗೆಯೇ ಬೃಹತ್ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ, ರಾಜಾಜಿನಗರದ ವಾಣಿಜ್ಯ ಸಂಕೀರ್ಣದ ಒಂದನೇ ಮಹಡಿಯಲ್ಲಿ ಸಭಾ ಭವನದ ನಿರ್ಮಾಣ, ತಾವು ಆವತ್ತೇ ಈ ವಿಚಾರ ಎತ್ತಿದ ಹಾಗೆ ವಾಟಾಳ್ ನಾಗರಾಜ್ ರಸ್ತೆಯಲ್ಲಿ ಸುಜಾತ ಚಿತ್ರಮಂದಿರದ ಬಳಿ ಎರಡೂ ಕಡೆ ಸೇತುವೆ ನಿರ್ಮಾಣವನ್ನು ಕೈಗೆತ್ತಿಕೊಳ್ಳುತ್ತೇವೆ. ಹಾಗೆಯೇ, ಅರಮನೆ ರಸ್ತೆಯಲ್ಲಿ ರೈಲ್ವೆ ರಸ್ತೆ ಕೆಳಗೆ ಸಂಪರ್ಕ ರಸ್ತೆ ನಿರ್ಮಾಣ ಏನು ಅರ್ಧದಲ್ಲಿ ನಿಂತಿದೆ, ಅದಕ್ಕೆ ಪರ್ಮಿಷನ್ ಕೊಟ್ಟಿದ್ದೇವೆ. ಮೇಲ್ಮನೆಯಲ್ಲೂ ಕೂಡ ಈ ವಿಚಾರ ಬಹಳ ತೀವ್ರವಾಗಿ ಬಂದಿತ್ತು. ಹಾಗೆಯೇ ಮಡಿವಾಳ ಮಾರುಕಟ್ಟೆಯ ಎರಡನೇ ಹಂತದ ನಿರ್ಮಾಣ ಇವುಗಳನ್ನು ಆದಷ್ಟು ಬೇಗ ಕೈಗೊಂಡು ಮುಗಿಸುತ್ತೇವೆ ಎನ್ನುವುದನ್ನು ಹೇಳುತ್ತೇನೆ. ಮೆಗಾಸಿಟಿಯಲ್ಲಿ ಕೂಡ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆ. ಆವತ್ತೇ ನಾನು ಒಂದು ಸಂದರ್ಭದಲ್ಲಿ ಹೇಳಿದ್ದೆ. ಟೌನ್‌ಹಾಲ್‌ನಿಂದ ಸಿರಸಿ ವೃತ್ತದವರೆಗಿನ ಮೇಲು ಸೇತುವೆ ನಿರ್ಮಾಣ, ಸುಮಾರು 94 ಕೋಟಿ ರೂಪಾಯಿಗಳದ್ದು, ಅದರಂತೆ ರಿಚ್‌ಮಂಡ್ ರಸ್ತೆಯಲ್ಲಿ ಗ್ರೇಟ್ ಸೆಪರೇಷನ್ ಎಂದು ಫ್ಲೈ ಓವರ್, ಬನಶಂಕರಿಯಲ್ಲಿ ವಿದ್ಯುತ್ ಚಿತಾಗಾರ ಇವುಗಳನ್ನು ಮೆಗಾಸಿಟಿ ಯೋಜನೆಯಲ್ಲಿ ನಾವು ತೆಗೆದುಕೊಂಡಿದ್ದೇವೆ. ನಿನ್ನೆ ಕೂಡ ಮೇಲ್ಮನೆಯಲ್ಲಿ ಇದರ ವಿಚಾರವಾಗಿ ಬಂದಿತ್ತು. ಅಲ್ಲಿ ಜಾಗವಿಲ್ಲ, ಸ್ಥಳವಿಲ್ಲ, land for the living ಎನ್ನವ ಮೂವ್‌ಮೆಂಟ್ ಶುರು ಆಗಬಹುದೇನೋ? ಏಕೆಂದರೆ ಇಲ್ಲಿ ಜೀವಂತವಾಗಿ ಇದ್ದವರಿಗೇ ಅಲ್ಲಿ ಸರಿಯಾಗಿ ನೆಲೆ ಇಲ್ಲದಂಥ ಸಂದರ್ಭದಲ್ಲಿ ಈ ಶವಾಗಾರಗಳನ್ನು ಆದಷ್ಟು ಶೀಘ್ರದಲ್ಲಿ ಕೈಗೊಳ್ಳಬೇಕು ಎಂದು ನಮ್ಮ ಪ್ರಯತ್ನ ಇದೆ.

10.40 ಎ. ಎಂ.

ಅದಕ್ಕೋಸ್ಕರವೇ ಬೆಂಗಳೂರು ಮಹಾನಗರ ಪಾಲಿಕೆಗೆ ಜರೂರಾಗಿ 100 ಕೋಟಿ ರೂಪಾಯಿಗಳ ಧನಸಹಾಯ ಬೇಕು, ಅದು 25 ಕೋಟಿ ರೂಪಾಯಿಯ ತರಹದಲ್ಲಿ ಹಂತ ಹಂತದಲ್ಲಿ ಅಥವಾ 15 ಕೋಟಿ ರೂಪಾಯಿಯಲ್ಲಾದರೂ ಬಿಡುಗಡೆ ಮಾಡಬೇಕೆಂದು ಸರ್ಕಾರಕ್ಕೆ ಒತ್ತಾಯ ಮಾಡಿದ್ದೇವೆ. ತಾವೆಲ್ಲರೂ ಇದಕ್ಕೆ ಬೆಂಬಲ ಕೊಡಬೇಕೆಂದು ಸನ್ಮಾನ್ಯ ಅಧ್ಯಕ್ಷರ ಮೂಲಕ ನಾನು ಸದಸ್ಯರನ್ನು ಕೇಳಿಕೊಳ್ಳುತ್ತೇನೆ. ಇನ್ನು ಬಿ.ಡಿ.ಎ. ಕುರಿತು ಹೇಳುವಾಗ ಬೇರೆ ಬೇರೆ ತರಹದ ನವರಸಗಳಲ್ಲಿ ಬೇರೆ ಬೇರೆ ಭಾವನೆಗಳು, ಉದ್ರಿಕ್ತದ ಭಾವನೆ, ಸಿಟ್ಟು ನೋವು ಮುಂತಾದವು ಎಲ್ಲರಲ್ಲೂ ಕೂಡ

ಉಂಟಾಗುತ್ತದೆ. ಇಲ್ಲಿ ಸಮಸ್ಯೆ ಬಹಳ ದೊಡ್ಡದಾಗಿದೆ. ಆ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಬಿ.ಡಿ.ಎ.ಯಿಂದ ಪ್ರಯತ್ನ ಮಾಡುತ್ತಿದ್ದೇವೆ. ಸಮಸ್ಯೆಗಳನ್ನು ಬಗೆಹರಿಸುವ ಸಲುವಾಗಿ ಉದಾಹರಣೆಗೆ Future plan and strategies ಎನ್ನುವುದನ್ನು ಮಾತ್ರ ಸ್ವಲ್ಪದರಲ್ಲಿ ಹೇಳಲಿಚ್ಛಿಸುತ್ತೇನೆ. To allot remaining sites notified in 1988 to eligible applicants ಎನ್ನುವುದನ್ನು ನಮ್ಮ ಫ್ಯೂಚರ್ ಪ್ಲಾನ್‌ನಲ್ಲಿ ಇಟ್ಟುಕೊಂಡಿದ್ದೇವೆ. 1988ರ ನಂತರ ಯಾವುದೇ ಅಧಿಸೂಚನೆಯನ್ನು ಹೊರಡಿಸಿ ನಿವೇಶನಗಳನ್ನು ಪಡೆಯಲು ದುಡ್ಡು ಕೊಟ್ಟು ಅಪ್ಲೈ ಮಾಡಿ ಎಂದು ನಾವು ಕೇಳಲಿಲ್ಲ. ಈಗಾಗಲೇ 20' x 30' ಸೈಟುಗಳನ್ನು ಬಿ.ಡಿ.ಎ.ಯಿಂದ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಹೇಳಿದ್ದೇವೆ. ಮತ್ತು ಅಂಥವರು ದುಡ್ಡು ವಾಪಸ್ಸು ತೆಗೆದುಕೊಂಡು ಹೋಗಬಹುದೆಂದೂ ಕೂಡ ಹೇಳಲಾಗಿದೆ. ಇಂತಹ ಕೇಸುಗಳು ಆಗಿದೆ. ಎಲ್ಲಿ ಬಿ.ಡಿ.ಎ. ಈ ಸೈಟುಗಳನ್ನು ಮತ್ತು ನಿವೇಶನಗಳನ್ನು ಮಾಡುವುದಕ್ಕೆ ಭೂಸ್ವಾಧೀನ ಮಾಡುತ್ತಾರೋ ಅಲ್ಲೆಲ್ಲಾ ಹೆಚ್ಚಿನ ಸಮಯ ಲಿಟಿಗೇಷನ್‌ನಲ್ಲಿ ಹೋಗುವುದರಿಂದ ಮಾನ್ಯ ಶಾಸಕರು ಹಾಗೂ ಅನೇಕರಿಗೆ 10-12-15 ವರ್ಷಗಳ ಹಿಂದೆ ಕೊಟ್ಟಂಥ ಸೈಟ್‌ಗಳು ಇವತ್ತಿಗೂ ಅವರ ಸ್ವಾಧೀನಕ್ಕೆ ಬಂದಿಲ್ಲ. ಇನ್ನು ಮೇಲೆ ಮೊನ್ನೆ ಹಿರಿಯ ಸದಸ್ಯರಾದ ನಂಜೇಗೌಡರು ಸಲಹೆ ಕೊಟ್ಟಂತೆ ಶೇ. 30 ಭಾಗದಲ್ಲಿ ಲ್ಯಾಂಡ್ ಈ ಕೋಆಪರೇಟೀವ್ ಅಥವಾ ಬೇರೆ ಖಾಸಗಿಯವರಿಗೆ ಬಡಾವಣೆಗಳನ್ನು ಮಾಡುವುದಕ್ಕೆ ಅನುಮತಿ ಕೊಟ್ಟಂಥ ಕಡೆ ಎಲ್ಲಾ to complete the ongoing schemes. In this connection, Government has come up with a new policy that the land owners along with developers may take up group housing or layouts in notified areas subject to giving a portion of the sites/houses to the BDA at free of cost. ಎನ್ನುವುದನ್ನು ಇನ್‌ಕಾರ್ಪೋರೇಟ್ ಮಾಡಿದ್ದೇವೆ ಎಂದು ಸನ್ಮಾನ್ಯ ಸದಸ್ಯರ ಗಮನಕ್ಕೆ ತರುತ್ತೇನೆ. ಹೀಗೆ ಎಲ್ಲಾ ಲಿಟಿಗೇಷನ್ಸ್‌ಗಳಲ್ಲಿ ಆದಷ್ಟು ಬೇಗ ಅವುಗಳನ್ನು ಮುಗಿಸುವುದಕ್ಕೆ ಪ್ರಾಮಾಣಿಕ ಪ್ರಯತ್ನವನ್ನು ಬಿ.ಡಿ.ಎ. ಮಾಡುತ್ತದೆ. Simplifying the procedure of allotment so as to reduce harassment to the public. They are already harassed. ಹಾಗೆಯೇ ಅನ್‌ಆಥರೈಸ್ಡ್ ಎನ್‌ಕ್ರೋಚ್‌ಮೆಂಟ್ ಬಗ್ಗೆ ಹೇಳುವುದಾದರೆ ಅನೇಕ ಕಡೆ ಅಂದರೆ ಹೆಚ್.ಆರ್.ಬಿ.ಆರ್. ಮುಂತಾದ ಕಡೆ ಅಲ್ಲಿ ಏನಾಗಿದೆ ಎಂದರೆ ಬಿ.ಡಿ.ಎ.ಯವರು ಯಾವತ್ತೋ ಅಕ್ವೈರ್ ಮಾಡಿದರು, ತದ ನಂತರ ಕೆಲವು ದುಷ್ಟ ಹಾಗೂ ಸಮಾಜಘಾತುಕ ಶಕ್ತಿಗಳು ಫಾಲ್ಸ್ ಡಾಕ್ಯುಮೆಂಟ್ಸ್ ಕ್ರಿಯೇಟ್ ಮಾಡಿ ಈ ಜಾಗ ನಮಗೆ ಸೇರಿದೆಯೆಂದು ಅಲ್ಲಿ ಅನಧಿಕೃತವಾಗಿ ಕಟ್ಟಡಗಳನ್ನು ಕಟ್ಟುವುದಕ್ಕೆ ಅನಧಿಕೃತವಾಗಿ ಪ್ರಯತ್ನ ಮಾಡುತ್ತಿದ್ದರು. ಆದ್ದರಿಂದ ಅಂತಹ ಅನಧಿಕೃತವಾದ ಕಟ್ಟಡಗಳನ್ನು ಕಟ್ಟುತ್ತಿದ್ದನ್ನು ತಡೆಹಿಡಿಯುವುದಕ್ಕೆ ಪೋಲೀಸ್ ದಳದ ಸಹಾಯದಿಂದ ಒಂದು ಮೆಟ್ರೊಪಾಲಿಟನ್ ಟಾಸ್ಕ್ ಫೋರ್ಸ್‌ನ್ನು ಮಾಡಿದ ನಂತರ ಈಗ ಸ್ವಲ್ಪ ಅನಧಿಕೃತ ಕಟ್ಟಡಗಳನ್ನು ಕಟ್ಟುವುದು ಕಡಿಮೆಯಾಗಿದೆ. ಇನ್ನು ಇನ್‌ಫ್ರಾಸ್ಟ್ರಕ್ಚರ್ ಪ್ರಾಜೆಕ್ಟ್‌ಗೋಸ್ಕರ ಔಟರ್ ರಿಂಗ್ ರೋಡ್ ಮತ್ತು ಇನ್ನರ್ ರಿಂಗ್ ರೋಡ್ ಮತ್ತು ವಾಣಿಜ್ಯ ಸಂಕೀರ್ಣಗಳ ಅಭಿವೃದ್ಧಿ

ಮುಂತಾದವನ್ನು ಬಿ.ಡಿ.ಎ. ಕೈಗೊಂಡಿದೆ. ಇಲ್ಲಿ ಬಹಳ ಹಿಂದೆಯೇ ರಿಂಗ್ ರೋಡ್‌ನ ಪ್ಲಾನನ್ನು ಮಾಡಲಾಗಿತ್ತು. ಈಗ ಔಟರ್ ರಿಂಗ್ ರೋಡ್ ಎನ್ನತಕ್ಕಂಥದ್ದು ಆಗಿದೆ. ಅದಲ್ಲದೆ ಅನಂತರ ಇಂಟರ್‌ಮೀಡಿಯೇಟರಿ ರಿಂಗ್ ರೋಡನ್ನು ಪ್ರಾರಂಭ ಮಾಡಿದ್ದೇವೆ. ಇಷ್ಟೆಲ್ಲಾ ಪೂರ್ಣ ಮಾಡಿದರೂ ಕೂಡ ಸಮಸ್ಯೆ ಕಡಿಮೆಯಾಗಿಲ್ಲ. ಬೆಂಗಳೂರಿನ ಮೇಲೆ ಟ್ರಾಫಿಕ್‌ನ ಒತ್ತಡ ಬಹಳಷ್ಟು ಜಾಸ್ತಿಯಾಗಿದ್ದರಿಂದ ಇವಾಗ ಹೊಸ ರಸ್ತೆಯನ್ನು ದೊಡ್ಡದಾಗಿ ಮಾಡಬೇಕು, ಅಂದರೆ ಲಾರಿ ಟ್ರಾಫಿಕ್ ಮುಂತಾದವು which are not destinated to Bangalore ಅವರು ಬೆಂಗಳೂರನ್ನು ಬೈ ಪಾಸ್ ಮಾಡಿ ಹೋಗುವಂಥ ಒಂದು ಕ್ರಮವನ್ನು ಕೈಗೊಳ್ಳಲಾಗಿದೆ. ಸನ್ಮಾನ್ಯ ಲೋಕೋಪಯೋಗಿ ಸಚಿವರ ಜೊತೆ ನಾನು ಖುದ್ದಾಗಿ ಹೋಗಿ ಇದರ ಪರಿಶೀಲನೆ ಮಾಡಿ ಬಂದಿದ್ದಾಗಿದೆ. ಇದು ತುಮಕೂರು ರಸ್ತೆಯಿಂದಲೇ ಒಂದು ಕಡೆಯಿಂದ ಟ್ರಕ್‌ಗಳನ್ನು ಡೈವರ್ಟ್ ಮಾಡುವುದಕ್ಕೆ ಹೊಸ ವ್ಯವಸ್ಥೆಯನ್ನು ಹಾಕಿಕೊಳ್ಳುತ್ತೇವೆ. ಆಗಲೇ ಕೇಂದ್ರ ಸರ್ಕಾರದ Surface Transport Ministerರವರಿಂದ ಕೂಡ ಸುಮಾರು 26 ಕೋಟಿ ರೂಪಾಯಿ ಸ್ಯಾಂಕ್ಷನ್ ಆಗಿದೆ. ಈ ಕೆಲಸವನ್ನು ಈ ಸದನ ಮುಗಿದ ಕೂಡಲೇ from Dabaspet all traffic will be diverted to Doddaballapur, Devanahalli, Hoskote and then to Dasarahalli. ಅಲ್ಲಿಂದ ನೂರು ನೂರು ಎಕರೆಗಳನ್ನು ಕೂಡ ಅಕ್ವೈರ್ ಮಾಡಿ-ಕೊಂಡು ಲಾರಿ ಟರ್ಮಿನಸ್‌ಗಳನ್ನು ಕಟ್ಟಿ ಒಟ್ಟಿನಲ್ಲಿ ಬೆಂಗಳೂರಿನ ಮೇಲೆ ಈ ಸಾರಿಗೆ ಒತ್ತಡ-ವನ್ನು ಕಡಿಮೆ ಮಾಡಬೇಕು, ಇಲ್ಲಿ ಆಗುವಂಥ ಅಪಘಾತಗಳನ್ನು ಕಡಿಮೆ ಮಾಡಬೇಕು ಎನ್ನುವ ಪ್ರಯತ್ನವನ್ನು ಪ್ರಾಮಾಣಿಕವಾಗಿ ಮಾಡುತ್ತೇವೆ. ಮತ್ತು ಲಾರಿಗಳನ್ನು ತಡೆಯುವುದಕ್ಕೆ ಎರಡು ಸಲ ನಾನು ಪೋಲೀಸ್ ಕಮೀಷನರ್‌ರವರ ಜೊತೆಗೆ ಹೋಗಿ ಪ್ರಯತ್ನ ಮಾಡಿದಾಗ ನಾವು ಅವರುಗಳಿಂದ ಕೆಟ್ಟ ಪದಗಳನ್ನು ಕೇಳಬೇಕಾಗಿ ಬಂತು. ಲಾರಿಗಳನ್ನು ತಡೆಗಟ್ಟುತ್ತೇವೆಂದು ಹೇಳಿದರೆ ಹಾಗೆ ಅವುಗಳನ್ನು ತಡೆಗಟ್ಟುವುದಕ್ಕಾಗುವುದಿಲ್ಲ. ಏತಕ್ಕೆಂದರೆ ಅವು ಅವ್ಯಾಹತವಾಗಿ stream of lorries which comes, ಅವುಗಳನ್ನು ನಾವು ಇಲ್ಲಿ ಒಂದು ಗಂಟೆ ತಡೆಹಿಡಿ-ದರೂ ಕೂಡ, ಅದರಿಂದ ಸಮಸ್ಯೆ ಇನ್ನು ಡಬಲ್ ಆಗಬಹುದು ಎನ್ನುವ ದೃಷ್ಟಿಯಿಂದ ಈಗಲೂ ಅವರ ಹತ್ತಿರ ನಾವು ಮಾತನಾಡುತ್ತಾ ಇದ್ದೇವೆ. ಬೆಳಿಗ್ಗೆ 7 ಗಂಟೆಯಿಂದ ರಾತ್ರಿ 7 ಗಂಟೆಯ-ವರೆಗೆ ಟ್ರಾಫಿಕ್ ನಿಲ್ಲಿಸಬೇಕೆಂದು ಪ್ರಯತ್ನ ಮಾಡಿದೆವು. ಆದರೆ ಅದು ಆಗಲಿಲ್ಲ. ಕನಿಷ್ಟ ಬೆಳಿಗ್ಗೆ ಮತ್ತು ಸಂಜೆ ಪೀಕ್ ಹವರ್ಸ್‌ನಲ್ಲಿ ಒಂದೂವರೆ ಎರಡು ಗಂಟೆಗಳ ಕಾಲ ತಡೆಹಿಡಿಯುವುದಕ್ಕೆ ಒಂದು ಕ್ರಮವನ್ನು ಕೈಗೊಳ್ಳುವುದಕ್ಕೆ ಅವರ ಜೊತೆ ಮಾತುಕತೆಯನ್ನು ಆಗಲೇ ಪ್ರಾರಂಭಿಸಿದ್ದೇವೆ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಕೊನೆಯದಾಗಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಬಗ್ಗೆ ಹೇಳುವುದಾದರೆ, ಅಲ್ಲಿ 1996-97ಕ್ಕೆ ಕಾವೇರಿ ನೀರು ಪೂರೈಕೆ ಯೋಜನೆ 4ನೇ ಹಂತ ಅದಕ್ಕೆ 37.50 ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ. ಹಾಗೆಯೇ ಹೆಸರಘಟ್ಟ ರಿಹ್ಯಾಬಿಲಿಟೇಷನ್ ಸ್ಕೀಂನಲ್ಲಿ ಅದಕ್ಕೆ ಒಂದೂವರೆ ಕೋಟಿ ರೂಪಾಯಿಗಳನ್ನು

ಒದಗಿಸಲಾಗಿದೆ. ನಗರದ ಹಳೆಯ ಏರಿಯಾಗಳಲ್ಲಿ replacement of corroded pipes ಬಗ್ಗೆ ನಮ್ಮ ಪ್ರಕಾಶ್‌ರವರು ಪ್ರಸ್ತಾಪಿಸಿದರು. ಅದಕ್ಕೂ ಸುಮಾರು ಒಂದು ಕೋಟಿ ರೂಪಾಯಿಯನ್ನು ಒದಗಿಸಲಾಗಿದೆ. ಈ ಎಲ್ಲಾ ಕಾರ್ಯಕ್ರಮಗಳನ್ನು ಮಾಡಿ, ಬೆಂಗಳೂರಿನ ನಾಗರೀಕರಿಗೆ ಏನು ಪರಿಹಾರ ಕೊಡಬೇಕು, ಇಲ್ಲಿಯ ಬದುಕನ್ನು ಆದಷ್ಟು ಒತ್ತಡದಿಂದ ತಪ್ಪಿಸುವುದಕ್ಕೆ ಕೆಲಸ ಕಾರ್ಯಗಳನ್ನು ಏನು ಮಾಡಬೇಕು, ಆ ಪ್ರಯತ್ನವನ್ನು ಬಹಳ ಗಂಭೀರವಾಗಿ ಮತ್ತು ಬಹಳ ಪ್ರಾಮಾಣಿಕವಾಗಿ ಮತ್ತು ಬಿಗಿಯಾದ ಕ್ರಮಗಳನ್ನು ತೆಗೆದುಕೊಂಡು ನಗರಾಭಿವೃದ್ಧಿ ಇಲಾಖೆ, ನಮ್ಮ ಸರ್ಕಾರ ಮಾಡುತ್ತದೆ ಎನ್ನುವುದನ್ನು ಈ ಸಂದರ್ಭದಲ್ಲಿ ತಮ್ಮ ಮೂಲಕ ಈ ಸದನಕ್ಕೆ ತಿಳಿಸಲಿಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ):- ಮಾನ್ಯ ಅಧ್ಯಕ್ಷರೇ, ನಾನು ಬೇಡಿಕೆ ಮೇಲೆ ಮಾತನಾಡುವಾಗ ಐದಾರು ಪ್ರಮುಖವಾದ ಅಂಶಗಳನ್ನು ಹೇಳಿದ್ದೆ. ಮೊದಲನೆಯದು ಏನೆಂದರೆ ಇಡೀ ಬೆಂಗಳೂರಿನಲ್ಲಿ ಕುಡಿಯುವ ನೀರಿನ ಅಭಾವದಿಂದ ಟ್ಯಾಂಕರುಗಳಲ್ಲಿ ಏನು ನೀರನ್ನು ಪೂರೈಕೆ ಮಾಡುತ್ತಿದ್ದಾರೆ ಅದು ಕುಡಿಯುವುದಕ್ಕೆ ಯೋಗ್ಯವಾಗಿಲ್ಲ. ಅದರಿಂದ ಏನೇನು ಪರಿಣಾಮವಾಗುತ್ತದೆ, ಇಡೀ ಬೆಂಗಳೂರು ಮಹಾನಗರ ಪಾಲಿಕೆಯಿಂದ ಅದನ್ನು ಟೆಸ್ಟ್ ಮಾಡಿಸುವುದಕ್ಕೆ ಯಾವುದೇ ಒಂದು ವ್ಯವಸ್ಥೆ ಇಲ್ಲ. ಹೋಟೇಲುಗಳಿಗೆ, ನರ್ಸಿಂಗ್ ಹೋಂಗಳಿಗೆ, ಕಲ್ಯಾಣ ಮಂಟಪಗಳಿಗೆ ಆ ನೀರನ್ನು ಪೂರೈಕೆ ಮಾಡುತ್ತಾರೆ. ಅದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ? ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೀರೋ? ಎರಡನೆಯದಾಗಿ ಡಂಪಿಂಗ್ ಯಾರ್ಡ್ಸ್ ಬಗ್ಗೆ ಹೇಳಿದ್ದೆ. ಅದರ ಬಗ್ಗೆ ಜಾಗ ಗುರುತಿಸಿದ್ದೇವೆ, ಡಿ.ಸಿ.ಯವರು ಕೊಟ್ಟಿದ್ದಾರೆಂದು ಹೇಳಿದ್ದಾರೆ. ಆದರೆ ಇದುವರೆಗೂ ಕೂಡ ಸೈಂಟಿಫಿಕ್ ಮೆಥೆಡ್‌ನಲ್ಲಿ ನಾವು ಡಂಪಿಂಗ್ ಯಾರ್ಡ್‌ನ್ನು ಮಾಡಿಲ್ಲ. ಕಸವನ್ನು ತೆಗೆದುಕೊಂಡು ಹೋಗಿ ರಸ್ತೆಯಲ್ಲಿ ಸುರಿದುಬಿಟ್ಟು ಬರುತ್ತೇವೆ. 3ನೆಯದು ಏನೆಂದರೆ ಇದು ಬಹಳ ಪ್ರಮುಖವಾದುದು. ಬೆಂಗಳೂರಿನ ತೆರಿಗೆದಾರ ಗಾಬರಿ ಪಡುವುದು ಏನೆಂದರೆ ಕಂದಾಯ ಇನ್ಸ್‌ಪೆಕ್ಟರುಗಳು ಮತ್ತು ಟ್ಯಾಕ್ಸ್ ಇನ್ಸ್‌ಪೆಕ್ಟರುಗಳೇ ಅಸೆಸ್ಸರ್ಸ್. ಇದುವರೆಗೆ ಒಂದು ಪ್ರಾಪರ್ಟಿ ಟ್ಯಾಕ್ಸ್‌ಗೆ ಒಂದು ಸ್ಟೆಂಟಿಫಿಕ್ ಫಾರ್ಮುಲ ಒಂದು ಬೇಸಿಸ್‌ನ್ನು ನೀವು ನಿರ್ಧಾರ ಮಾಡಿಲ್ಲ. ಅದನ್ನು ದಯವಿಟ್ಟು ಮಾಡುತ್ತೀರಾ? 4ನೆಯದು, ಇವತ್ತು ಏನೋ ಜೆ.ಸಿ.ಬಿ. ತೆಗೆದುಕೊಳ್ಳಬೇಕೆಂದು ಹೇಳಿದಿರಿ. ಅದನ್ನು ನಾನು ಸ್ವಾಗತಿಸುತ್ತೇನೆ. ಕಾರ್ಪೋರೇಷನ್‌ನಲ್ಲಿ ಕೆಲಸ ಆಗುವುದಕ್ಕಿಂತ ದುಡ್ಡು ಖರ್ಚು ಮಾಡುವುದು ಬಹಳ ಮುಖ್ಯವಾಗುತ್ತದೆ. 20 ಲಕ್ಷ ರೂಪಾಯಿ ಕೊಟ್ಟು pothole filling machine ಎನ್ನುವಂಥದ್ದನ್ನು ತಂದರು. ಅದೇ ಫಿಲ್ ಮಾಡುತ್ತದೆ pothole ಎಂದು. ಈಗ ಅದು ಎಲ್ಲಿ ಇದೆಯೆಂದು ಯಾರಿಗೂ ಗೊತ್ತಿಲ್ಲ. ಈ ಯಂತ್ರವನ್ನು ಜಸ್ಟ್ ಒಂದು ವರ್ಷದ ಹಿಂದೆ 20 ಲಕ್ಷ ರೂಪಾಯಿ ಕೊಟ್ಟು ತಂದಿದ್ದರು. ಆ ಯಂತ್ರಕ್ಕೆ ಕೊಟ್ಟ ದುಡ್ಡು ಯಾರದು ಎಂದರೆ ಈ ತೆರಿಗೆದಾರನದು.

ಅದೇ ರೀತಿಯಾಗಿ ಜೆ.ಸಿ.ಪಿ.ಯೂ ಸಹ ಆಗುವುದಿಲ್ಲ ಎಂದು ಗ್ಯಾರಂಟಿ ಕೊಡುತ್ತೀರೋ? ನೀವು ಜಿ.ಪಿ.ಎಫ್. ಏನೋ ಎಂದು ಇಂಟ್ರಡ್ಯೂಸ್ ಮಾಡಿದ್ದೀರಿ. ಇದು ಹೊಸ ಯೋಜನೆ ಅಲ್ಲ. ಬೆಂಗಳೂರಿನಲ್ಲಿ ನಮ್ಮದೊಂದು ಇಂಟೆನ್ಸೀವ್ ಕ್ಲೀನಿಂಗ್ ಎಂದು ಕಳೆದ 10 ವರ್ಷಗಳಿಂದ ನಾವು ಮಾಡಿಕೊಳ್ಳುತ್ತಾ ಬರುತ್ತಿದ್ದೇವೆ. ಪ್ರತಿ ಶನಿವಾರ ಆ ರೇಂಜ್ ಪೌರ ಕಾರ್ಮಿಕರು ಗ್ಯಾಂಗ್ ಮೆನ್ ಎಲ್ಲಾ ಸೇರಿಕೊಂಡು ಒಂದೊಂದು ವಿಭಾಗದಲ್ಲಿ ಕೆಲಸ ಮಾಡುವುದು. ಆದರೆ ಬಹಳ ಸಲ ಇದು ಗೆಟ್-ಟುಗೇದರ್ ಆಗುತ್ತಿದೆಯೇ ಹೊರತು ಕೆಲಸಗಳು ಆಗುತ್ತಿಲ್ಲ. ಈ ಒಂದು ಜಿ.ಪಿ.ಎಫ್.ಅನ್ನು ಮಾಡುವಾಗ ನೀರು ಸರಬರಾಜು ಮಂಡಳಿ, ಕೆ.ಇ.ಬಿ. ಮುಂತಾದ ಸಂಸ್ಥೆಗಳನ್ನು ಸೇರಿಸಿಕೊಂಡು ನಿಜವಾದ ಅರ್ಥದಲ್ಲಿ ಒಳ್ಳೆಯ ಕೆಲಸಗಳು ಆಗುವ ಹಾಗೆ ಮಾಡುತ್ತೀರಾ ಎಂದು ನಾನು ಮಾನ್ಯ ಸಚಿವರನ್ನು ತಮ್ಮ ಮೂಲಕ ಕೇಳುತ್ತಿದ್ದೇನೆ.

ಅಧ್ಯಕ್ಷರು:- ಈಗ ಮುನಿಯಪ್ಪನವರು ಮಾತನಾಡಿ. ಸಚಿವರು ತಾವು ಒಟ್ಟಿಗೆ ಉತ್ತರ ಕೊಡಿ. ದಯಮಾಡಿ ಈಗ ತಾವು ಸದಸ್ಯರು ಹೇಳುವುದನ್ನು ನೋಟ್ ಮಾಡಿಕೊಳ್ಳಿ. ನಂತರ ಒಟ್ಟಿಗೆ ಉತ್ತರ ಹೇಳಿ.

ಶ್ರೀ ಬಿ. ಮುನಿಯಪ್ಪ (ಗಾಂಧಿನಗರ):- ಮಾನ್ಯ ಅಧ್ಯಕ್ಷರೇ, ಬೆಂಗಳೂರು ಅಭಿವೃದ್ಧಿ ಬಗ್ಗೆ ಮಾತನಾಡುವಾಗ ಕೆಲವೊಂದು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೆ. ಅದಕ್ಕೆ ಮಂತ್ರಿಗಳು ಕೆಲವೊಂದು ಉತ್ತರವನ್ನು ಕೊಟ್ಟಿದ್ದಾರೆ. ಮೊದಲನೆಯದಾಗಿ ಈ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ 87 ವಾರ್ಡ್‌ಗಳು ಇದ್ದವು. ಅದನ್ನು 100 ವಾರ್ಡ್‌ಗಳಾಗಿ ಪರಿವರ್ತನೆ ಮಾಡಿದ್ದಾರೆ. ಹಾಗೆ ವಾರ್ಡ್‌ಗಳನ್ನು ಮಾಡಿದಂಥ ಸಂದರ್ಭದಲ್ಲಿ ಇವತ್ತು ನೀವು ಎಲ್ಲೂ ಕೇಳಿರಲಿಕ್ಕೆ ಸಾಧ್ಯವಿಲ್ಲ, ನೋಡಿರಲಿಕ್ಕೆ ಸಾಧ್ಯವಿಲ್ಲ, ಅಂಥ ಲೋಪ ಈ ವಾರ್ಡ್‌ಗಳನ್ನು ಹೆಚ್ಚಿಗೆ ಮಾಡುವಾಗ ನಡೆದಿದೆ. ಆ 100 ವಾರ್ಡ್‌ಗಳಲ್ಲಿ ಮೀಸಲಾತಿ ಎಂದು ಏನು ಮಾಡಿದ್ದಾರೆ, ಅದು ಮಹಿಳೆಯರಿಗೆ, ಹಿಂದುಳಿದವರಿಗೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಮತ್ತು ಜನರಲ್ ವಾರ್ಡ್ ಎಂದು, ಅದು ಯಾವ ರೀತಿಯಾದ ವೈಜ್ಞಾನಿಕವಾಗಿ ಇಲ್ಲ. ಈ ಯಾವುದಾದರೂ ಒಂದು ವಾರ್ಡನ್ನು ಇಂಥವರಿಗೆ ಮೀಸಲಾತಿಯಾಗಿ ಇಟ್ಟಿದ್ದೇವೆ ಎಂದು ಹೇಳಿದರೆ, ಆಗ ಅದರಲ್ಲಿ ಏನಾದರೂ ತಪ್ಪು ಇತ್ತು ಎಂದರೆ, ಅದಕ್ಕೆ ಸಾರ್ವಜನಿಕರಿಂದ ಅಬ್ಜೆಕ್ಷನ್ ಮಾಡುವುದಕ್ಕೆ ಒಂದು ತಿಂಗಳ ಕಾಲ ಕಾಲಾವಕಾಶ ಕೊಡಬೇಕು. ಇಲ್ಲಿ ಅಂತಹ ಅವಕಾಶವನ್ನು ಕೊಟ್ಟಿಲ್ಲ. ನಂತರ ಬೆಂಗಳೂರಿನಲ್ಲಿ ಎರಡು ವಾರ್ಡ್‌ಗಳನ್ನು ಮಾಡಿದ್ದಾರೆ, ಬಿಸಿಬಿ ಎಂದು; ಅದರಲ್ಲಿ ಹಲವಾರು ಷರತ್ತುಗಳಿವೆ. ಅದರಲ್ಲಿ ಒಂದು ಷರತ್ತು ಏನೆಂದರೆ ಆ ವಾರ್ಡ್‌ನಲ್ಲಿ ಸ್ಪರ್ಧಿಸುವಂತಹ ಅಭ್ಯರ್ಥಿಯು ಟೆಲಿಫೋನ್ ಹೊಂದಿರಬಾರದೆಂದು ಇದೆ. ಅವರು ಚುನಾವಣೆಯ ಸಂದರ್ಭದಲ್ಲಿ ಟೆಲಿಫೋನ್ ಇಲ್ಲದೇ ಚುನಾವಣೆಯಲ್ಲಿ ಸ್ಪರ್ಧಿಸಿ ಆಯ್ಕೆಯಾಗುತ್ತಾರೆ. ಅವರು ಏನೋ ಒಂದು ವ್ಯಾಪಾರವನ್ನು ಮಾಡಿ, ಅಥವಾ ಒಂದು ಲಾಟರಿ ಟಿಕೆಟ್‌ನ್ನು ತೆಗೆದುಕೊಂಡು, ಅಥವಾ ಪಕ್ಕದಲ್ಲಿ

ಒಂದು ರೇಸ್ ಕೋರ್ಸ್ ಇದೆ ಅಲ್ಲಿ ಯಾವುದೋ ಒಂದು ಜಾಕ್‌ಪಾಟೋ, ಅಥವಾ ಲಾಟರಿ ಹೊಡೆದು, ಅವರು ಒಂದು ಟೆಲಿಫೋನ್ ಅನ್ನು ಮನೆಗೆ ಹಾಕಿಸಿಕೊಂಡರೆ, ಅವರು ನಗರ ಪಾಲಿಕೆಯ ಸದಸ್ಯರಾದ ಮೇಲೆ ಅವರ ಸದಸ್ಯತ್ವವನ್ನು ಕಿತ್ತುಕೊಳ್ಳುತ್ತೀರೋ? ಅವರು ನಗರ ಪಾಲಿಕೆಯ ಅಭ್ಯರ್ಥಿಗಾಗಿ ನಾಮಪತ್ರವನ್ನು ಕೊಡುವಂತಹ ಸಂದರ್ಭದಲ್ಲಿ ಅವರ ಮನೆಗೆ ಟೆಲಿಫೋನ್ ಇರು-ವುದಿಲ್ಲ. ನಂತರ ವ್ಯಾಪಾರದ ಅಭಿವೃದ್ಧಿಯನ್ನು ಹೊಂದಿ, ಒಳ್ಳೆಯ ಮಾರ್ಗದಲ್ಲಿ ಹಣ ಬಂದು ಟೆಲಿ-ಫೋನ್ ಹಾಕಿಸಿಕೊಳ್ಳುತ್ತಾರೆ, ಮಹಾನಗರ ಪಾಲಿಕೆಯಿಂದಲೇ ಟೆಲಿಫೋನ್ ಕೊಡುವಂತಹ ಪದ್ಧತಿಯೂ ಸಹ ಇದೆ, ಅಂತಹ ಒಂದು ಬಿ.ಸಿ.ಬಿ. ಎನ್ನುವಂತಹ ಎರಡು ವಾರ್ಡ್‌ಗಳಿವೆ. ಇದಕ್ಕೆ ಆಳುವಂತಹ ಪಕ್ಷದವರು ಈ ರೀತಿಯಾಗಿ ಷರತ್ತನ್ನು ಮಾಡಿರಬಹುದೆಂದು ಹೇಳಬಹುದು, ಬೆಂಗಳೂರಿನ ಪ್ರಕಾಶ ನಗರದಲ್ಲಿ ಒಂದು ವಾರ್ಡ್ ಇದೆ. ಅಲ್ಲಿ 25-30 ಸಾವಿರ ಮತದಾರರು ಇರತಕ್ಕಂತಹ ಆ ವಾರ್ಡ್‌ನ್ನು ಪರಿಶಿಷ್ಟ ಜಾತಿಯವರಿಗೆ ಮೀಸಲು ಎಂದು ಮಾಡಿದ್ದಾರೆ. ಅಲ್ಲಿ ಲೋಕಲ್‌ನಲ್ಲಿ ಯಾರು ಅಭ್ಯರ್ಥಿಗಳೇ ಇಲ್ಲ. 1000 ಜನರು ಪರಿಶಿಷ್ಟ ಜಾತಿಗೆ ಬರುವಂತಹ ಮತ-ದಾರರು ಇಲ್ಲ. ಅಲ್ಲಿ ಯಾರನ್ನೋ ಗೆಲ್ಲಿಸಬೇಕು, ಅಲ್ಲಿ ಯಾರೋ ಒಬ್ಬ ಅಭ್ಯರ್ಥಿಯನ್ನು ಗೆಲ್ಲಿಸ-ಬೇಕೆಂದು ಆ ವಿಭಾಗವನ್ನು ಪರಿಶಿಷ್ಟ ಜಾತಿಯವರಿಗೆ ಎಂದು ಮೀಸಲಾಗಿ ಇಟ್ಟಿದ್ದಾರೆ. ಅಲ್ಲಿ ಚುನಾ-ವಣೆಗೆ ಹೋದಾಗ ಅಲ್ಲಿರತಕ್ಕಂತಹ ಎಲ್ಲಾ ರಾಜಕೀಯ ಪಕ್ಷದವರು ಇವರನ್ನು ಸೋಲಿಸುತ್ತಾರೆ. ಗೆಲ್ಲುವುದು, ಸೋಲುವುದು ಅವರಿಗೆ ಬಿಟ್ಟಿದ್ದು. ಈ ರೀತಿಯಾಗಿ 100 ವಾರ್ಡ್‌ಗಳನ್ನು ಮಾಡಿರ-ತಕ್ಕಂತಹ ಸಂದರ್ಭದಲ್ಲಿ, ಸಾರ್ವಜನಿಕರ ಗಮನಕ್ಕೆ ತಂದು ಇಂತಿಂಥ ವಾರ್ಡ್‌ಗಳು, ಇಂತಿಂಥ ಮೀಸಲಾತಿಗಳಿಗೆ ವಾರ್ಡ್‌ಗಳನ್ನು ಇಟ್ಟಿಲ್ಲ ಎಂದು ತಿಳಿಸಬೇಕಾಗಿತ್ತು. ನಂತರ ಒಂದು ದೊಡ್ಡ ಸಮಸ್ಯೆ ಏನೆಂದರೆ, ಇವತ್ತು ನಮ್ಮಲ್ಲಿ ಗಂಡಸರ ಪಟ್ಟಿ ಇದೆ, ಮಹಿಳಾ ಮತದಾರರ ಪಟ್ಟಿ ಇದೆ. ನಂತರ ಪರಿಶಿಷ್ಟ ಜಾತಿಯವರ ಮತದಾರರ ಪಟ್ಟಿ ಇದೆ, ಹಿಂದುಳಿದ ಜನಾಂಗ ಮತದಾರರ ಪಟ್ಟಿಯನ್ನು ಇದುವರೆಗೆ ತೆರೆದಿಲ್ಲ. ಆದರೆ ಹಿಂದುಳಿದವರಿಗೆ, ಸಾಮಾಜಿಕವಾಗಿ ಮೇಲೆ ಎತ್ತಬೇಕು ಎಂದರೆ ಕೊಡಬೇಕಾಗುತ್ತದೆ. ಅಂತಹ ಒಂದು ಪಟ್ಟಿಯನ್ನು ನಾವು ಇವತ್ತಿನವರೆಗೂ ತಯಾರು ಮಾಡಿಲ್ಲ. ಇವತ್ತು ತಮಿಳುನಾಡಿನಲ್ಲಿ ಇಂತಹ ಸಮಸ್ಯೆಯು ಬಂದಾಗ, ಅವರ ಶಾಸನ ಸಭೆಯಲ್ಲಿ ಒಂದು ತೀರ್ಮಾನವನ್ನು ತೆಗೆದುಕೊಂಡರು. ನಮ್ಮಲ್ಲಿ ಹಿಂದುಳಿದವರ ಅಂಕಿ ಅಂಶಗಳನ್ನು ಸಂಗ್ರಹಿಸುವುದಕ್ಕೆ ಆಗಿಲ್ಲ, ಅದನ್ನು ಸಂಗ್ರಹಿಸಬೇಕಾದರೆ ಎರಡು ವರ್ಷಗಳು ಬೇಕಾಗುತ್ತದೆಂದು, ಆದುದರಿಂದ ಯಾವ ರೀತಿಯಲ್ಲಿ ಇದೆಯೋ ಅದೇ ರೀತಿಯಲ್ಲಿ ಚುನಾವಣೆಯನ್ನು ಮಾಡುತ್ತೇವೆ ಎಂದು ತೀರ್ಮಾನ-ವನ್ನು ತೆಗೆದುಕೊಂಡರು. ಒಂದು ತಿಂಗಳು ಕಾಲ ಅಲ್ಲಿ ಇಂಥಿಂತಹ ವಾರ್ಡ್‌ಗೆ ಇಂಥಿಂತಹ ಮೀಸ-ಲಾತಿಗಳು ಎಂದು ಸಾರ್ವಜನಿಕರ ಮುಂದೆ ನೋ ಅಬ್ಜೆಕ್ಷನ್‌ಗೆ ಇಟ್ಟಿದ್ದರು. ಇಲ್ಲಿ ಆ ರೀತಿಯಾಗಿ ಸಾರ್ವಜನಿಕರಿಗೆ ಒಂದು ತಿಂಗಳುಗಳ ಕಾಲ ನೋ ಆಬ್ಜೆಕ್ಷನ್‌ಗೆ ಇಟ್ಟಿಲ್ಲ. ಮಾನ್ಯ ಮಂತ್ರಿಗಳನ್ನು ಇದನ್ನು ಸರಿಪಡಿಸುತ್ತಾರೆಯೇ? ಮಾನ್ಯ ಸುರೇಶಕುಮಾರ್‌ರವರು ಕೇಳಿದಾಗ ಅವರು ಏನು ಹೇಳಿ-ದರು ಎಂದರೆ, ಅವರ ವಿಭಾಗದಲ್ಲಿ ಮಹಿಳೆಯರ ವಾರ್ಡ್‌ಗಳು ಸಾಕಷ್ಟು ಆಗಿದೆ ಎಂದಾಗ ಅದನ್ನು

ಸರಿಪಡಿಸುತ್ತೇವೆಂದು ಹೇಳಿದರು. 100 ವಾರ್ಡ್‌ಗಳನ್ನು ಮತ್ತೆ ಬದಲಾವಣೆಯನ್ನು ಮಾಡಿ ಅದನ್ನು ಸಾರ್ವಜನಿಕರ ಗಮನಕ್ಕೆ ತರುತ್ತೀರೋ ಎನ್ನುವುದನ್ನು ದಯವಿಟ್ಟು ಸಭೆಯ ಮುಂದೆ ಹೇಳಬೇಕು.

ಅಧ್ಯಕ್ಷರು:- ಕ್ಲಾರಿಫಿಕೇಷನ್ ಕೇಳಿ ಎಂದರೆ ತಾವು ಭಾಷಣವನ್ನೇ ಮಾಡುತ್ತಿದ್ದೀರಲ್ಲ!

ಶ್ರೀ ಬಿ. ಮುನಿಯಪ್ಪ:- ಮಾನ್ಯ ಅಧ್ಯಕ್ಷರೆ, ಆ ದಿನ ಬೇಡಿಕೆಯ ಮೇಲೆ ಚರ್ಚೆ ಮಾಡಿದಾಗ ನಾನು ಹೇಳಿದ್ದಕ್ಕೆ ಮಾನ್ಯ ಮಂತ್ರಿಗಳು ಉತ್ತರವನ್ನೇ ಕೊಟ್ಟಿಲ್ಲವಲ್ಲ! ತಾವು ಹೇಳಿ ನೀವು ಹೇಳಿದಂತೆ ನಾನು ಕೇಳುತ್ತೇನೆ.

ಅಧ್ಯಕ್ಷರು:- ನಾವು ಏನೂ ಹೇಳುವುದಿಲ್ಲ, ನೀವು ಹೇಗೆ ಹೇಳುತ್ತೀರಿ ಆ ರೀತಿಯಲ್ಲಿ ನಡೆದು-ಕೊಂಡು ಹೋಗುತ್ತೇವೆ. ನಾನು ಅದಕ್ಕೆ ಅಡ್ಜೆಸ್ಟ್ ಆಗಿಬಿಟ್ಟಿದ್ದೇನೆ.

ಶ್ರೀ ಬಿ. ಮುನಿಯಪ್ಪ:- ಮಾನ್ಯ ಅಧ್ಯಕ್ಷರೆ, ನಾನು ಬೆಂಗಳೂರಿನ ಅಭಿವೃದ್ಧಿಯ ಬಗ್ಗೆ ಮಾತ-ನಾಡುವಾಗ ಇದರ ಬಗ್ಗೆ ಪ್ರಸ್ತಾಪವನ್ನು ಮಾಡಿದ್ದೆವು, ಅದಕ್ಕೆ ಮಂತ್ರಿಗಳಿಂದ ಉತ್ತರ ಬಂದಿಲ್ಲ. ಆದ್ದರಿಂದ ತಾವು ಯಾವ ರೀತಿಯಲ್ಲಿ ಹೇಳುತ್ತೀರಿ ಆ ರೀತಿಯಲ್ಲಿ ತಮ್ಮ ಮಾರ್ಗದರ್ಶನದ ಪ್ರಕಾರವಾಗಿ ನಡೆದುಕೊಳ್ಳುತ್ತೇವೆ.

ಅಧ್ಯಕ್ಷರು:- ಮುಕ್ಕಾಲು ಭಾಗ ಆಗಿ ಹೋಗಿದೆ, ಇನ್ನು ಕಾಲು ಭಾಗಕ್ಕೆ ಏನು ನನ್ನ ಮಾರ್ಗ-ದರ್ಶನ? ನಡೆಯಲಿ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೆ, ತಮ್ಮ ಮಾರ್ಗದರ್ಶನ ಇಲ್ಲದೆ ನಡೆಯು-ತ್ತದೆ ಎಂದು ಹೇಳುತ್ತಿರುವಂತೆ ಕಾಣುತ್ತದೆ.

ಅಧ್ಯಕ್ಷರು:- ಎಲ್ಲಿಯಾದರೂ ಉಂಟೇ; ನೀವು ಬಂದಿದ್ದು ನಾನು ನೋಡಲಿಲ್ಲ. ಈಗ ನನಗೆ ಸಂತೋಷವಾಗುತ್ತಿದೆ.

ಶ್ರೀ ವಾಟಾಳ್ ನಾಗರಾಜ್:- ನಾನು ಬಂದಾಗ ತಮ್ಮ ಸೀಟಿಗೆ ಕೈಮುಗಿದು ಹೇಳಿದೆ, ತಾವು ಗಮನಿಸಲಿಲ್ಲ ನಾನೇನು ಮಾಡಲಿ? ನಾನು ಬಂದು ನನ್ನ ಕರ್ತವ್ಯವನ್ನು ಮುಗಿಸಿಬಿಟ್ಟೆ.

ಶ್ರೀ ಹೆಚ್. ಶಿವಪ್ಪ:- ವಾಟಾಳ್ ನಾಗರಾಜ್‌ರವರೇ ನಿಮ್ಮ ಮೇಲೆ ಅಧ್ಯಕ್ಷರು ಅಪಾರ ಪ್ರೀತಿ ಎನ್ನುವುದರಲ್ಲಿ, ಈಗ ಅಪಾರ ಹೋಗಿದೆ.

ಶ್ರೀ ಬಿ. ಮುನಿಯಪ್ಪ:- ಮಾನ್ಯ ಅಧ್ಯಕ್ಷರೆ, ಈ 1200 ಪೌರ ಕಾರ್ಮಿಕರನ್ನು ಕೆಲಸಕ್ಕೆ ತೆಗೆದುಕೊಳ್ಳುವುದು ಎಂದು 1990ರಲ್ಲಿ. . .

ಶ್ರೀ ವಾಟಾಳ್ ನಾಗರಾಜ್:- ನೀವು ಕೈಯನ್ನು ಆ ಕಡೆಯಲ್ಲಿ ತೋರಿಸುತ್ತಿದ್ದೀರಿ, ಅದರ ಕತೆ ಮುಗಿದಿದೆ ಬಿಡಿ. ಇದು ಅತ್ತೆಗೆ ಒಂದು ಕಾಲ, ಸೊಸೆಗೆ ಒಂದು ಕಾಲ ಎಂದರೆ, ತಮಗೆ ಅರ್ಥ-

ವಾಗಿರಬೇಕು. ಶ್ರೀ ನಂಜೇಗೌಡರಿಗೂ ಅರ್ಥವಾಗಿದೆ, ಸುಮ್ಮನೆ ನಮಗೆ ಏಕೆ ತೊಂದರೆಯನ್ನು ಕೊಡುತ್ತೀರಿ.

ಶ್ರೀಮತಿ ಪ್ರಮೀಳಾ ನೇಸರ್ಗಿ:- ಮಾನ್ಯ ಅಧ್ಯಕ್ಷರೆ, ಮಾನ್ಯ ವಾಟಾಳ್ ನಾಗರಾಜ್‌ರವರು ಮಾತು ಎತ್ತಿದ್ದರೆ ಅತ್ತೆ ಸೊಸೆಯರ ಮಾತನ್ನು ಎತ್ತುತ್ತಾರೆ. ನೀವುಗಳು ಏನು ಜಗಳವನ್ನು ಆಡುವು-ದಿಲ್ಲವೇ?

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೆ, ಅತ್ತೆ ಸೊಸೆ ಎನ್ನುವುದು ಇತಿಹಾಸದಲ್ಲಿ ಬಂದಿರುವಂಥದ್ದು; ಇದು ಏನು ಹೊಸದಾಗಿ ಬಂದಿರುವುದಿಲ್ಲ.

ಶ್ರೀ ಹೆಚ್.ಎಸ್. ನಂಜೇಗೌಡ:- ಮಾನ್ಯ ಅಧ್ಯಕ್ಷರೆ, ಮಾವನಿಗೆ ಒಂದು ಕಾಲ ಮತ್ತು ಅಳಿಯನಿಗೆ ಒಂದು ಕಾಲ ಎಂದು ಹೇಳಿ.

ಶ್ರೀಮತಿ ಪ್ರಮೀಳಾ ನೇಸರ್ಗಿ:- ಆ ರೀತಿಯಾಗಿ ಹೇಳುವುದನ್ನು ಕಲಿತು ಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್:- ಆದ್ದರಿಂದ ಪ್ರತಿದಿವಸ ಇದನ್ನು ಹೇಳಿ ಹೇಳಿ ನನಗೆ ಬಹಳವಾಗಿ ಯಾತನೆಯನ್ನು ತಂದು ಇಟ್ಟಿದ್ದೀರಿ. ನಿಮ್ಮಿಬ್ಬರದು ಬಹಳ ಪಿತೂರಿ ನಡೆದಿದೆ. ದಯಮಾಡಿ ಅದನ್ನು ಬಹಿರಂಗಪಡಿಸುವುದು ಬೇಡ.

ಅಧ್ಯಕ್ಷರು:- ನೀವು ಹೋಗಿ, ಹೋಗಿ ಆ ಹೆಣ್ಣು ಮಕ್ಕಳ ಕೈಯಲ್ಲಿಯೇ ಸಿಕ್ಕಿ ಕೊಳ್ಳುತ್ತೀರಲ್ಲಾ. ನಾನೇನು ಮಾಡಲಿ?

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಪ್ರಮೀಳಾ ನೇಸರ್ಗಿಯವರು ಯಾವತ್ತೂ ನನ್ನ ಜೊತೆಯಲ್ಲಿಯೇ ನಿಂತಿದ್ದಾರೆ ಇವತ್ತೇ ಅಲ್ಲ, ಎಂತಹ ಸಂದರ್ಭ ಬಂದಾಗಲೂ ಸಹ ನಿಂತಿದ್ದಾರೆ. ಇದರಲ್ಲಿ ಏನೂ ಅನುಮಾನವಿಲ್ಲ.

ಅಧ್ಯಕ್ಷರು:- ಹಿಂದೆ ಬಂದು ಅವರು ಹೇಳುವುದನ್ನು ನೀವು ಕೇಳಬೇಕು.

ಶ್ರೀ ವಾಟಾಳ್ ನಾಗರಾಜ್:- ಇಲ್ಲ, ಇಲ್ಲ, ನನ್ನ ಜೊತೆಯಲ್ಲಿ ಇರುತ್ತಾರೆ, ಬೇಕಾದರೆ ಕೇಳಿ, ನೀವು.

ಅಧ್ಯಕ್ಷರು:- ನನ್ನನ್ನು ಪ್ರತ್ಯೇಕವಾಗಿ ಬಂದು ಭೇಟಿಯಾದಾಗ ಅವರು ಹೇಳಿರುವುದನ್ನು ನೀವು ಕೇಳಬೇಕು. ನೀವು ಓಡಿ ಹೋಗಿಬಿಡುತ್ತೀರಿ.

ಶ್ರೀ ವಾಟಾಳ್ ನಾಗರಾಜ್:- ಇಲ್ಲ, ಇಲ್ಲ, ನೀವೇ ಪಿತೂರಿಯನ್ನು ಮಾಡುತ್ತಿದ್ದೀರಿ. ಅವರು ಎಂದೂ ಸಹ ಈ ರೀತಿಯಾಗಿ ಮಾಡುವುದಿಲ್ಲ. ಶ್ರೀಮತಿ ಪ್ರಮೀಳಾ ನೇಸರ್ಗಿಯವರು ಎಂದೂ ಸಹ ನಮ್ಮವರೇ.

ಶ್ರೀ ಬಿ. ಮುನಿಯಪ್ಪ:- ಮಾನ್ಯ ಅಧ್ಯಕ್ಷರೆ, ಮೀಸಲಾತಿಯಲ್ಲಿ ಎ. ಬಿ. ಗ್ರೂಪ್ ಎಂದು ಏನು ಮಾಡಿದ್ದಾರೆ, ಅದರಲ್ಲಿ ವನ್ಯಗೌಂಡರ್ ಎಂದು ಒಂದು ಜಾತಿ ಇದೆ. ಒಂದು ಕಡೆ ವನ್ಯ ಎಂದು ಜಾತಿಯನ್ನು 'ಎ' ಗ್ರೂಪ್‌ನಲ್ಲಿಟ್ಟಿದ್ದಾರೆ. ಗೌಂಡರ್ ಎಂಬ ಜಾತಿಯನ್ನು 'ಬಿ' ಗ್ರೂಪ್‌ನಲ್ಲಿಟ್ಟಿದ್ದಾರೆ. ಇನ್ನೊಂದು ಕಮ್ಮನಾಯ್ಡು ಎಂಬ ಒಂದು ಜಾತಿ ಇದೆ. 'ಎ' ಗ್ರೂಪ್‌ನಲ್ಲಿ ಕಮ್ಮ ಎಂಬ ಜಾತಿಯನ್ನು ಇಟ್ಟಿದ್ದಾರೆ. ಇನ್ನೊಂದು ಕಡೆ 'ಬಿ' ಗ್ರೂಪ್‌ನಲ್ಲಿ ನಾಯ್ಡು ಇಟ್ಟಿದ್ದಾರೆ. ಹೀಗಿರುವಾಗ ಅವರ ವಾರ್ಡ್ ಯಾವುದು ಆಗುತ್ತದೆಯೋ ಅವರ ಜಾತಿಯನ್ನು ಪರಿವರ್ತನೆಯನ್ನು ಮಾಡಿಕೊಳ್ಳಬಹುದು. ಇಲ್ಲಿ ಯಾರು ನಿಂತುಕೊಳ್ಳಬಹುದು, ಕಮ್ಮ ಜಾತಿ ಇರುವವರು ನಿಂತುಕೊಳ್ಳಬಹುದು ಅಥವಾ ನಾಯ್ಡು ಜಾತಿ ಇರುವವರು ನಿಂತುಕೊಳ್ಳಬಹುದು. ವನ್ಯ ಜಾತಿ ಇರುವವರು ನಿಂತುಕೊಳ್ಳಬಹುದು, ಗೌಂಡರ್ ಜಾತಿ ಇರುವವರು ನಿಂತುಕೊಳ್ಳಬಹುದು, ಇವತ್ತು ಬೆಂಗಳೂರು ನಗರದಲ್ಲಿ ಒಂದು ಹೊಸ ಜಾತಿಯು ಸೃಷ್ಟಿಯಾಗುತ್ತಿದೆ. ಈ ಮಹಾನಗರಪಾಲಿಕೆಯು ಮಾಡಿರುವ ವಾರ್ಡ್‌ಗೆ ತಕ್ಕಂತೆ ಅವರವರು ಅವರ ಜಾತಿ ಸರ್ಟಿಫಿಕೇಟ್‌ನ್ನು ಬದಲಾವಣೆಯನ್ನು ಮಾಡಿಕೊಂಡು ಅಭ್ಯರ್ಥಿಗಳಾ-ಗುವುದಕ್ಕೆ ಒಂದು ಹೊಸ ಜಾತಿಯನ್ನು ಸೃಷ್ಟಿ ಮಾಡಿರುವುದನ್ನು ನಾವು ನೋಡುತ್ತಿದ್ದೇವೆ. ಅದೇ ಸಂದರ್ಭದಲ್ಲಿ ಈ 1200 ಪೌರ ಕಾರ್ಮಿಕರನ್ನು ಆದಷ್ಟು ಬೇಗ ಕೆಲಸಕ್ಕೆ ತೆಗೆದುಕೊಳ್ಳುತ್ತೇವೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದರು. ಹಿಂದಿನ ಸರ್ಕಾರ ಅವರುಗಳನ್ನು ಕೆಲಸಕ್ಕೆ ಸೇರಿಸಿಕೊಳ್ಳುವಾಗ ಲಾಟರಿಯನ್ನು ಎತ್ತುವುದರಿಂದ ಅವರುಗಳನ್ನು ಕೆಲಸಕ್ಕೆ ಸೇರಿಸಿಕೊಳ್ಳಬೇಕೆಂಬ ಒಂದು ಸರ್ಕಾರದ ಬಿ.ಓ. ವನ್ನು ಮಾಡಿದೆ. ನಾನು ಕಳೆದ ಸಾರಿ ಮಾನ್ಯ ಮಂತ್ರಿಗಳಿಗೆ ಹೇಳಿದ್ದೆ, ಲಾಟರಿಯ ಮೂಲಕ ತೆಗೆಯುವಾಗ ಅಲ್ಲಿ ಒಬ್ಬ ಕುರುಡನಿಗೆ ಲಾಟರಿಯು ಬರಬಹುದು, ಒಬ್ಬ ಕುಂಟನಿಗೆ ಬರಬಹುದು, ಒಬ್ಬ ಹೆಳವನಿಗೆ ಬರಬಹುದು ಆದ್ದರಿಂದ ಅಂತಹ ಒಂದು ಪದ್ಧತಿಯು ಇಡೀ ಪ್ರಪಂಚದಲ್ಲಿ ಎಲ್ಲಿಯೂ ಇರುವುದಕ್ಕೆ ಸಾಧ್ಯವಿಲ್ಲ. ಕೆಲಸಕ್ಕೆ ಸೇರಿಸಿಕೊಳ್ಳುವಾಗ ಲಾಟರಿಯ ಪದ್ಧತಿ ಬೇಡ. ಆದರೆ ಮಾನ್ಯ ಮಂತ್ರಿಗಳು ಪೌರ ಕಾರ್ಮಿಕರನ್ನು ಕೆಲಸಕ್ಕೆ ಸೇರಿಸಿಕೊಳ್ಳುತ್ತೇವೆಂದು ಉತ್ತರಿಸುವಾಗ ಹೇಳಿ-ದರು, ಆದರೆ ಯಾವ ರೀತಿಯಾಗಿ ತೆಗೆದುಕೊಳ್ಳುತ್ತಾರೆಂದು ಸಭೆಯಲ್ಲಿ ತಿಳಿಸಬೇಕೆಂದು ಕೇಳಿ-ಕೊಂಡು ಗ್ಯಾಂಗ್‌ಮನ್‌ಗಳ ವಿಚಾರವನ್ನು ಪ್ರಸ್ತಾಪ ಮಾಡಿದೆ. ಅಧಕ್ಕೂ ಕೂಡ ಸಚಿವರು ಉತ್ತರವನ್ನು ಕೊಟ್ಟಿಲ್ಲ. ಇವತ್ತು ಬೆಂಗಳೂರು ನಗರದಲ್ಲಿ 100 ವಾರ್ಡ್‌ಗಳಲ್ಲಿ 7-8 ಜನರು ಗ್ಯಾಂಗ್ ಮನ್‌ಗಳು ಒಂದು ವಾರ್ಡ್‌ನಲ್ಲಿದ್ದಾರೆ. ಉದಾಹರಣೆಗೆ ನನ್ನ ಕ್ಷೇತ್ರದಲ್ಲಿ ಕುಮಾರ ಪಾರ್ಕ್‌ನಲ್ಲಿ ಪ್ರಾರಂಭವಾಗಿ ಅದು ಬಿನ್ನಿ ಮಿಲ್‌ನವರೆಗೆ ಹೋಗಿ ಮುಗಿಯುತ್ತದೆ. ಈ ಕಡೆ ಮೈಸೂರು ಬ್ಯಾಂಕ್ ಅಷ್ಟು ದೊಡ್ಡ ಭಾಗದಲ್ಲಿ 7-8 ಜನರು ಗ್ಯಾಂಗ್‌ಮನ್‌ಗಳು ಕೆಲಸವನ್ನು ಮಾಡುವುದಕ್ಕೆ ಆಗುವುದಿಲ್ಲ. ಆ 7-8 ಜನರಲ್ಲಿ 3-4 ಜನರು ಅಂಗವಿಕಲರು ಕೆಲಸವನ್ನು ಮಾಡದೇ ಇರುವಂತಹ ಪರಿಸ್ಥಿತಿಯಲ್ಲಿ-ದ್ದಾರೆ. ಇದರ ಜೊತೆಗೆ ಅವರಿಗೆ ವಯಸ್ಸಾಗಿ ಅವರುಗಳೂ ಸಹ ಕೆಲಸವನ್ನು ಮಾಡದೇ ಇರತಕ್ಕಂತಹ ಪರಿಸ್ಥಿತಿಯಲ್ಲಿದ್ದಾರೆ. ಆದ್ದರಿಂದ ಅದರ ಬಗ್ಗೆ ಕೂಡ ಮಾನ್ಯ ಸಚಿವರು ಉತ್ತರವನ್ನು ಹೇಳಬೇಕು. ಮತ್ತೆ ಬೆಂಗಳೂರು ನಗರದಲ್ಲಿ ಇವತ್ತು ಏನಾಗಿದೆ ಎಂದರೆ, ತಾವೂ ಕೂಡ ಎಲ್ಲಿಯೋ ಒಂದು ಸಭೆಗೆ

ಹೋಗಿದ್ದಾಗ, ಬೆಂಗಳೂರಿನ ಸಮಸ್ಯೆಗಳು ತುಂಬಾ ಇದೆ ಎಂದು ಹೇಳಿದ್ದೀರಿ. ಶಾಸಕರುಗಳೂ ಸಹ ಪಾಪ ಬೆಂಗಳೂರಿನಲ್ಲಿ ಯಾರೂ ಮಾತನಾಡುತ್ತಿಲ್ಲವೆಂದು ಹೇಳಿದ್ದನ್ನು ಪತ್ರಿಕೆಗಳಲ್ಲಿ ಓದಿದ್ದೆ. ಇವತ್ತು ಬೆಂಗಳೂರು ಮಹಾ ನಗರಪಾಲಿಕೆಯಲ್ಲಿ. . .

ಶ್ರೀ ವಿ. ಸೋಮಣ್ಣ (ಬಂದೀಖಾನೆ ಸಚಿವರು):- ಮಾನ್ಯ ಅಧ್ಯಕ್ಷರೆ, ಕ್ಲಾರಿಫಿಕೇಷನ್ ಕೇಳಿ ಎಂದರೆ ಅವರು ಭಾಷಣವನ್ನು ಶುರು ಮಾಡಿಬಿಟ್ಟಿದ್ದಾರೆ.

ಶ್ರೀ ಬಿ. ಮುನಿಯಪ್ಪ:- ನೀವು ಪ್ರಶ್ನೆಯನ್ನು ಯಾವ ರೀತಿಯಾಗಿ ಕೇಳಬೇಕೆಂದು ಬರೆದು-ಕೊಟ್ಟು ಬಿಡಿ, ಆ ರೀತಿಯಾಗಿ ನಾವು ಸದನದಲ್ಲಿ ಓದಿಬಿಡುತ್ತೇವೆ.

ಶ್ರೀ ವಿ. ಸೋಮಣ್ಣ:- ಮಾನ್ಯ ಅಧ್ಯಕ್ಷರೆ, ಪ್ರಶ್ನೆಯನ್ನು ಬೇಕಾದರೆ ಮಾನ್ಯ ಮುನಿಯಪ್ಪನವರು ಕೇಳಲಿ, ಸದನದಲ್ಲಿ ಬೇರೆ ವಿಷಯವನ್ನು ಚರ್ಚೆ ಮಾಡುವುದು ಬೇಡವೇ? ನೀವು ಕೇಳಿರುವಂತಹ ಪ್ರಶ್ನೆಗೆ ಯಾವುದಕ್ಕೆ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿಲ್ಲ, ಅದರ ಬಗ್ಗೆ ಕೇಳಿ. ಮಾನ್ಯ ಸುರೇಶ್ ಕುಮಾರ್‌ರವರು ಕ್ಲಾರಿಫಿಕೇಷನ್ ಕೇಳಿದರು, ಅವರು ಕುಡಿಯುವ ನೀರಿನ ಟ್ಯಾಂಕರ್‌ಗಳ ಬಗ್ಗೆ ಕೇಳಿದರು. ದಯಮಾಡಿ ಆ ರೀತಿಯಾಗಿ ಕೇಳಿ; ಭಾಷಣ ಬೇಡ.

ಶ್ರೀ ಬಿ. ಮುನಿಯಪ್ಪ:- ನಾನೂ ಸಹ ಕ್ಲಾರಿಫಿಕೇಷನ್ ಕೇಳುತ್ತಿರುವುದು; ಸುರೇಶ್‌ಕುಮಾರ್-ರವರು ಕೇಳಿದ ರೀತಿಯಲ್ಲಿಯೇ ನಾನು ಕೇಳಿ ಎಂದು ಮಾನ್ಯ ಸೋಮಣ್ಣನವರು ಹೇಳಬಾರದು.

ಶ್ರೀ ವಿ. ಸೋಮಣ್ಣ:- ಗ್ಯಾಂಗ್‌ಮನ್‌ಗಳ ಬಗ್ಗೆ ಏನು ಮಾಡುತ್ತೀರಿ ಎಂದು ಕೇಳಿ; ಅದನ್ನು ಬಿಟ್ಟು ನನ್ನ ಡಿವಿಜನ್‌ನಲ್ಲಿ ಗ್ಯಾಂಗ್‌ಮನ್‌ಗಳು, ನನ್ನ ಕ್ಷೇತ್ರ ಅಲ್ಲಿಂದ ಇಲ್ಲಿಯವರೆಗೂ ಇದೆ. . .

ಶ್ರೀ ಬಿ. ಮುನಿಯಪ್ಪ:- ನೀವೂ ಸಹ ಹೇಳಿಕೊಳ್ಳುತ್ತೀರಿ, ಕಾರ್ಪೊರೇಷನ್ನಿನ ಎಲ್ಲಾ ಅಧಿಕಾರಿ-ಗಳ ಹತ್ತಿರ ಹೋಗಿಬಿಟ್ಟು, ಕರ್ನಾಟಕ ರಾಜ್ಯದಲ್ಲಿ ನನ್ನ ಕ್ಷೇತ್ರ ಬಹಳ ದೊಡ್ಡ ಕ್ಷೇತ್ರವೆಂದು. ಇಲ್ಲಿ ಹೇಳದೇ ಇರಬಹುದು.

ಶ್ರೀ ಬಿ. ಸೋಮಣ್ಣ:- ಸನ್ಮಾನ್ಯ ಅಧ್ಯಕ್ಷರೆ, ತಾವು ಈಗಾಗಲೇ ಸೂಚನೆಯನ್ನು ನೀಡಿದ್ದೀರಿ, ಏನಾದರೂ ಕ್ಲಾರಿಫಿಕೇಷನ್ ಬೇಕಾದರೆ ಕೇಳಲಿ.

ಶ್ರೀ ವಾಟಾಳ್ ನಾಗರಾಜ್:- ಸೋಮಣ್ಣನವರೇ, ತಾವು ಯಾವ ರೀತಿಯಲ್ಲಿ ಪ್ರಶ್ನೆ ಕೇಳ-ಬೇಕೆಂದು ಹೇಳಿಕೊಟ್ಟುಬಿಟ್ಟರೆ ನಮ್ಮ ಗತಿ ಏನು?

ಶ್ರೀ ವಿ. ಸೋಮಣ್ಣ:- ನಾವು ಈ ರೀತಿಯಾಗಿ ಕೇಳುವುದಿಲ್ಲ. ಒಬ್ಬ ಸದಸ್ಯರಿಗೆ ಈಗಾಗಲೇ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಅವರಲ್ಲಿ ಇರತಕ್ಕಂತಹ ಸಂಶಯವನ್ನು ನಿವಾರಣೆಯನ್ನು ಮಾಡಿಕೊಳ್ಳಲು ಕ್ಲಾರಿಫಿಕೇಷನ್ ಕೇಳಲಿ. ಅದನ್ನು ವಿಶ್ಲೇಷಣೆಯನ್ನು ಮಾಡುವುದು ಬೇಡ.

ಶ್ರೀ ವಾಟಾಳ್ ನಾಗರಾಜ್:- ನಿಮ್ಮ ಇಚ್ಛೆಯಂತೆ ನೀವು ಮಾತನಾಡಿಬಿಟ್ಟರೆ ನಾವೂ ಏನೂ ಹೇಳಬೇಕಾಗಿಲ್ಲ.

ಶ್ರೀ ಬಿ. ಮುನಿಯಪ್ಪ:- ಮಾನ್ಯ ಅಧ್ಯಕ್ಷರೆ, ಏನಾಗುತ್ತದೆಂದರೆ, ಬಹಳ ಜನ ಸದಸ್ಯರು ನಗರಪಾಲಿಕೆಯ ಸದಸ್ಯರಾಗಿರುತ್ತಾರೆ, ಎಂ.ಎಲ್.ಎ. ಗಳಾಗಿ ಬಿಟ್ಟರೆ ಬೃಹಸ್ಪತಿಗಳಾಗಿ ಬಿಡುತ್ತಾರೆ.

(ಗೊಂದಲ)

ಶ್ರೀ ವಿ. ಸೋಮಣ್ಣ:- ಮಾನ್ಯ ಮುನಿಯಪ್ಪನವರೇ, ನಾನೂ ಸಹ ಎರಡು ಸಾರಿ ಕಾರ್ಪೊರೇಟರ್ ಆಗಿದ್ದವನೇ; ದಯಮಾಡಿ ತಾವು ಮಂತ್ರಿಗಳನ್ನು ಕೇಳುತ್ತಿರತಕ್ಕಂತಹ ವಿಷಯವನ್ನು ನಾನೂ ಸಹ ಕುಳಿತುಕೊಂಡು ಕೇಳುತ್ತಿದ್ದೇನೆ. ಕೆಲವು ಸಂಶಯಗಳನ್ನು ನಿವಾರಣೆ ಮಾಡಿಕೊಳ್ಳಲಿಕ್ಕೆ ಬೇಕಾಗಿರತಕ್ಕಂತಹ ಅಂಶವನ್ನು ಅವರ ಗಮನಕ್ಕೆ ತೆಗೆದುಕೊಂಡು ಬನ್ನಿ, ಅದಕ್ಕೆ ಅವರು ಉತ್ತರವನ್ನು ಕೊಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಸಚಿವರಿಗೆ ತಮ್ಮನ್ನು ಜೀರ್ಣಿಸಿಕೊಳ್ಳುವ ಶಕ್ತಿ ಇದೆ. ನಿಮ್ಮ ಸಹಕಾರ ಅವರಿಗೇನೂ ಬೇಕಾಗಿಲ್ಲ. ಮಾನ್ಯ ಅನಂತನಾಗ್‌ರವರು ಬಹಳ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿದ್ದಾರೆ. ನಾವು ಕೇಳಿದ್ದಕ್ಕೆ ಉತ್ತರ ಕೊಡುವುದಕ್ಕೆ ಅವರು ತಯಾರಾಗಿದ್ದಾರೆ. ತೋಟಗಾರಿಕೆ ಇಲಾಖೆ ಮತ್ತು ಬಂದೀಖಾನೆ ಸಚಿವರ ಸಹಕಾರವನ್ನು ಅವರೇನೂ ಕೇಳಿಲ್ಲ. ಅವರು ಸಹಕಾರ ಕೊಡಿ ಎಂದು ಕೇಳಿದಾಗ ನೀವು ಕೊಡಿ.

ಶ್ರೀ ಡಿ.ಟಿ. ಜಯಕುಮಾರ್:- ಮಾನ್ಯ ಸಚಿವರು. . .

ಶ್ರೀ ವಾಟಾಳ್ ನಾಗರಾಜ್:- ಗೊತ್ತಿದೆ ಕುಳಿತುಕೊಳ್ಳಿ.

ಶ್ರೀ ಡಿ.ಟಿ. ಜಯಕುಮಾರ್:- ಮಾನ್ಯ ಅಧ್ಯಕ್ಷರೆ, ಈ ಬೆಂಗಳೂರು ನಗರದಲ್ಲಿ ಸಮಸ್ಯೆಗಳು ಎಷ್ಟು ಅಕ್ಯುಮಲೇಟ್ ಆಗಿವೆ ಎಂದರೆ, ಅವುಗಳನ್ನು ಒಂದೆರಡು ದಿನಗಳಲ್ಲಿ ಬಗೆಹರಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಅಷ್ಟು ಸಮಸ್ಯೆಗಳಿವೆ. ಆ ಎಲ್ಲಾ ಸಮಸ್ಯೆಗಳಿಗೂ ಕೇವಲ ಒಂದೆರಡು ಗಂಟೆಗಳಲ್ಲಿ ಉತ್ತರ ಕೊಡಿ ಎಂದರೆ. . .

ಶ್ರೀ ವಾಟಾಳ್ ನಾಗರಾಜ್:- ಆ ರೀತಿ ಯಾರು ಕೇಳಿದರು?

ಶ್ರೀ ಡಿ.ಟಿ. ಜಯಕುಮಾರ್:- ಕಳೆದ 48 ವರ್ಷಗಳಿಂದ ಇರತಕ್ಕ ಸಮಸ್ಯೆಗಳು. ಅವುಗಳನ್ನು ಒಂದು ಗಂಟೆಯಲ್ಲಿ, ಒಂದು ನಿಮಿಷದಲ್ಲಿ ಮುಗಿಸುವುದಕ್ಕಾಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್:- ಯಾರು ನಿಮಗೆ ಅದನ್ನು ಕೇಳಿದವರು?

ಶ್ರೀ ಡಿ.ಟಿ. ಜಯಕುಮಾರ್:- ಯಾವುದು ಬೇಕೋ ಅದನ್ನು ಕೇಳಲಿ. ಅದನ್ನು ಬಗೆಹರಿಸೋಣ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೆ, ಎಲ್ಲಾ ಸಮಸ್ಯೆಗಳಿಗೂ ಒಂದು ಗಂಟೆಯಲ್ಲಿ ಉತ್ತರ ಕೊಡಿ ಎಂದು ಯಾರಾದರೂ ಕೇಳಿದರೆ? ಯಾರೂ ಕೇಳಲಿಲ್ಲ. ನಾವು ಇವರನ್ನು ಕೇಳ-ಬೇಕಾದರೆ, ತೆಂಗಿನ ಮರಕ್ಕೆ ರೋಗ ಬಂದಿದೆ ಏನು ಪರಿಹಾರ ಎಂದು ಕೇಳಿದಾಗ ಇವರು ಉತ್ತರ ಕೊಡಲಿ. ನಿಮ್ಮನ್ನು ಕೇಳಿದರೆ ನೀವು ಕೊಡಿ. ಅಥವಾ ಸೋಮಣ್ಣನವರನ್ನು ಕೇಳಿದರೆ ಅವರು ಬಂದೀಖಾನೆಗೆ ಸಂಬಂಧಪಟ್ಟಂತೆ ಇದ್ದರೆ ಕೊಡಲಿ. ಆದರೆ ಮಾನ್ಯ ಅನಂತನಾಗ್‌ರವರು ತಮ್ಮನ್ನು ಸಮರ್ಥಿಸಿಕೊಳ್ಳುವುದಕ್ಕೆ ಶಕ್ತಿವಂತರಾಗಿದ್ದಾರೆ. ಆದರೆ ನೀವಿಬ್ಬರೂ ಏತಕ್ಕೆ ಎದ್ದು ಎದ್ದು ನಿಲ್ಲುತ್ತೀರೋ ನನಗೆ ಅರ್ಥವಾಗುವುದಿಲ್ಲ.

ಶ್ರೀ ಡಿ.ಟಿ. ಜಯಕುಮಾರ್:- ಇದರಲ್ಲಿ ಏನು ತಪ್ಪಿದೆ? ಮಾನ್ಯ ವಾಟಾಳ್ ನಾಗರಾಜ್‌ರವರು ಮಾತ್ರ ಇಡೀ ಸದನದಲ್ಲಿ ನಡೆಯುವಂಥ ಎಲ್ಲಾ ವಿಚಾರಗಳಿಗೂ ಸಂಬಂಧಪಟ್ಟಂತೆ ಭಾಗವಹಿಸ-ಬಹುದು, ಆದರೆ ಒಬ್ಬ ಮಂತ್ರಿ ಒಂದು ವಿಚಾರದಲ್ಲಿ ಭಾಗವಹಿಸುವುದಕ್ಕೆ ಅವಕಾಶ ಇಲ್ಲವೆಂದರೆ ಇದು ನನಗೆ ಅರ್ಥವಾಗುವುದಿಲ್ಲ. ನೀವು ಎಲ್ಲಾ ವಿಚಾರಗಳಲ್ಲೂ ಭಾಗವಹಿಸಬಹುದು. ಆದರೆ ನಾವು ಮಾತ್ರ ಭಾಗವಹಿಸಬಾರದೇ?

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೆ, ಅವರು ಎಲ್ಲದರಲ್ಲೂ ಭಾಗವಹಿಸಬೇಕಂತೆ, ತಾವು ಅಪ್ಪಣೆಯನ್ನು ಕೊಟ್ಟರೆ ಅವರು ಭಾಗವಹಿಸಬಹುದು. ಅದಕ್ಕೆ ನಮ್ಮ ಅಭ್ಯಂತರವಿಲ್ಲ.

ಶ್ರೀ ಡಿ.ಟಿ. ಜಯಕುಮಾರ್:- ನಿಮಗೆ ಎಷ್ಟು ಹಕ್ಕಿದೆಯೋ ನಮಗೂ ಅಷ್ಟೇ ಹಕ್ಕಿದೆ.

ಶ್ರೀ ವಾಟಾಳ್ ನಾಗರಾಜ್:- ನೀವು ಚುನಾವಣೆಯಲ್ಲಿ ಗೆಲ್ಲದೆ ಒಳಗೆ ಬಂದಿದ್ದೀರೆಂದು ನಾವು ಹೇಳಿದೆವಾ?

ಶ್ರೀ ಡಿ.ಟಿ. ಜಯಕುಮಾರ್:- ಇವರು ದಿವಸಕ್ಕೆ ನೂರು ಸಾರಿ ಎದ್ದು ನಿಂತುಕೊಳ್ಳಬಹುದು. ಆದರೆ ನಾವು ಒಂದು ಸಾರಿ ಎದ್ದು ನಿಂತರೆ ಅದನ್ನು ತಡೆದುಕೊಳ್ಳುವುದಕ್ಕಾಗುವುದಿಲ್ಲವಲ್ಲ!

ಶ್ರೀಮತಿ ಪ್ರಮೀಳಾ ನೇಸರ್ಗಿ:- ಮಾನ್ಯ ಅಧ್ಯಕ್ಷರೆ, ಪಾಯಿಂಟ್ ಆಫ್ ಆರ್ಡರ್. . .

ಶ್ರೀ ಡಿ.ಟಿ. ಜಯಕುಮಾರ್:- ಇವರು ನೂರು ವಿಷಯಕ್ಕೆ ನೂರು ಸಾರಿ ಎದ್ದು ನಿಂತು-ಕೊಳ್ಳುತ್ತಾರೆ. ಸಮಯವನ್ನು ಹಾಳುಮಾಡಬಾರದೆಂದು ಮಂತ್ರಿಗಳಾದ ನಾವು ಏನಾದರೂ ಒಂದು ಸಲಹೆಯನ್ನು ಕೊಡುವುದಕ್ಕೆ ಹೋದರೆ ಇವರಿಗೆ ತಡೆದುಕೊಳ್ಳಲು ಆಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್:- ನಾನು ಇವರ ರೀತಿಯಲ್ಲಿ ಒಂದು ಸಾರಿ ಬಂದು ಮಧ್ಯೆ ಎದ್ದು ಹೋಗಿ ಮತ್ತೆ ರಾತ್ರಿಗೆ ಬರುವುದಿಲ್ಲ. ನಾನು ಇಲ್ಲಿಗೆ ಬೆಳಿಗ್ಗೆ 11 ಗಂಟೆಗೆ ಬರುತ್ತೇನೆ, ಸಂಜೆ 6 ಗಂಟೆಗೆ ಎದ್ದು ಹೋಗುತ್ತೇನೆ. ಈ ತೋಟಗಾರಿಕೆ ಇಲಾಖೆಯವರು ಯಾವಾಗಲೋ ಬರುತ್ತಾರೆ, ಯಾವಾ-ಗಲೋ ಎದ್ದು ಹೋಗುತ್ತಾರೆ. ನಾನು ಆ ರೀತಿ ಅಲ್ಲ.

ಶ್ರೀ ಡಿ.ಟಿ. ಜಯಕುಮಾರ್:- ಮಾನ್ಯ ಸದಸ್ಯರು ಆ ಮಾತನ್ನು ವಾಪಸ್ಸು ತೆಗೆದುಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್:- ಏತಕ್ಕೆ ವಾಪಸ್ಸು ತೆಗೆದುಕೊಳ್ಳಬೇಕು? ನಾನು ತೆಗೆದುಕೊಳ್ಳು-ವುದಿಲ್ಲ.

ಶ್ರೀ ಡಿ.ಟಿ. ಜಯಕುಮಾರ್:- ನಾವು ಮಂತ್ರಿಗಳು ಆ ಸದನಕ್ಕೂ ಹೋಗಬೇಕಾಗುತ್ತದೆ. ಕೌನ್ಸಿಲ್ ಇದೆ ಗೊತ್ತೆ?

ಶ್ರೀ ವಾಟಾಳ್ ನಾಗರಾಜ್:- ಎಲ್ಲವೂ ಗೊತ್ತಿದೆ. ನಾವು ಏತಕ್ಕೆ ವಾಪಸ್ಸು ತೆಗೆದುಕೊಳ್ಳ-ಬೇಕು? ನಿಮ್ಮ ನಡವಳಿಕೆಯ ಬಗ್ಗೆ ಹೇಳುತ್ತಿದ್ದೇವೆ. ಇದರಲ್ಲಿ ಏನನ್ನು ವಾಪಸ್ಸು ತೆಗೆದುಕೊಳ್ಳಬೇಕು?

ಶ್ರೀ ಡಿ.ಟಿ. ಜಯಕುಮಾರ್:- ನಾವು ಯಾವ ಯಾವ ಸಮಯದಲ್ಲಿ ಎಲ್ಲೆಲ್ಲಿರಬೇಕೆಂದು ಅಲಾಟ್ ಮಾಡಿರುತ್ತಾರೆ. ಅಲ್ಲಿಗೆ ಹೋಗಬೇಕಾಗುತ್ತದೆ. ಆಗ ನಿಮ್ಮ ಎದುರಿನಲ್ಲೇ ನಾವು ಕುಳಿತಿರುವುದಕ್ಕಾಗುವುದಿಲ್ಲ. ಅಲ್ಲಿಗೂ ಹೋಗಬೇಕಾಗುತ್ತದೆ, ಇಲ್ಲೂ ಇರಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್:- ನೀವು ಹೇಳಿದಂತೆ ಕೇಳುವುದಕ್ಕಲ್ಲ ನಾವು ಬಂದಿರುವುದು.

ಶ್ರೀ ಡಿ.ಟಿ. ಜಯಕುಮಾರ್:- ನಾನು ಅಧ್ಯಕ್ಷರಿಗೆ ಹೇಳುತ್ತಿದ್ದೇನೆ.

ಶ್ರೀ ಹೆಚ್. ಶಿವಪ್ಪ:- ಮಾನ್ಯ ಅಧ್ಯಕ್ಷರೆ. . . .

ಅಧ್ಯಕ್ಷರು:- ಏನು, ತಾವು ನನ್ನನ್ನು ಕರೆದಿರಾ? ಏನು ವಿಷಯ?

ಶ್ರೀ ಹೆಚ್. ಶಿವಪ್ಪ:- ಮಾನ್ಯ ಅಧ್ಯಕ್ಷರು ಏತಕ್ಕೋ ಮೌನವನ್ನು ತಾಳಿದ್ದಾರೆ.

ಅಧ್ಯಕ್ಷರು:- ಬೇರೆ ಏನೋ ಸಮಸ್ಯೆ ಇತ್ತು. ಅದರ ಬಗ್ಗೆ ಆಲೋಚನೆ ಮಾಡುತ್ತಿದ್ದೆ.

ಶ್ರೀ ಹೆಚ್. ಶಿವಪ್ಪ:- ಮಾನ್ಯ ಸದಸ್ಯರು ಇಲ್ಲಿ ಅಧ್ಯಕ್ಷರು ಇದ್ದಾರೋ ಇಲ್ಲವೋ ಎಂದು ಮರೆತು ಮಾತನಾಡುತ್ತಿದ್ದಾರೆ. ಇಲ್ಲಿ ಕ್ರಾಸ್ ಟಾಕ್ಸ್ ಶುರುವಾಗಿದೆ. ಇದು ಅಂಥಹ ಆರೋಗ್ಯ-ಕರವಾದ ಲಕ್ಷಣವಲ್ಲ.

ಅಧ್ಯಕ್ಷರು:- ನಾವೆಲ್ಲರೂ ಮನುಷ್ಯರಲ್ಲವೆ? ಮನುಷ್ಯರಿರುವಾಗ ಇಂಥಾದ್ದೆಲ್ಲಾ ಆಗುತ್ತದೆ. ಮಾತನ್ನು ಕೊಡುವುದು, ತೆಗೆದುಕೊಳ್ಳುವುದು ಇದೆಲ್ಲಾ ಆಗುತ್ತದೆ. ನಾನು ಬೆತ್ತವನ್ನು ಹಿಡಿದುಕೊಂಡು ಪ್ರೈಮರಿ ಸ್ಕೂಲ್ ಟೀಚರ್ ತರಹ ನಡೆದುಕೊಳ್ಳುವುದಕ್ಕಾಗುತ್ತದೆಯೆ? ಮಾನ್ಯ ಮುನಿಯಪ್ಪನವರೇ, ಬೇಗ ಮುಗಿಸಿ.

ಶ್ರೀ ಬಿ. ಮುನಿಯಪ್ಪ:- ಇವರು ಮಧ್ಯೆ ಪ್ರವೇಶ ಮಾಡದೇ ಇದ್ದಿದ್ದರೆ ಇಷ್ಟು ಹೊತ್ತಿಗೆ ಮುಗಿದುಹೋಗುತ್ತಿತ್ತು.

ಅಧ್ಯಕ್ಷರು:- ಇಷ್ಟೆಲ್ಲಾ ಸಂಭಾಷಣೆ ಏನು ನಡೆಯಿತು, ಅದರ ಒಟ್ಟು ಒಳಾರ್ಥ ಏನೆಂದರೆ, ಒಬ್ಬೊಬ್ಬ ಮಂತ್ರಿಗಳೂ ಒಂದೊಂದು ನಮೂನೆಯ ಉತ್ತರವನ್ನು ಕೊಡುತ್ತಾರೆ. ನೀವು ಕೊಡುತ್ತಿರುವ ಉತ್ತರ ಅಸಮರ್ಪಕ ಎಂದು ನೀವು ಹೇಳಬಹುದು. ಅಥವಾ ಬಹಳ ಮುಖ್ಯವಾದ ಒಂದೆರಡು ವಿಚಾರಗಳನ್ನು ಹೇಳಬಹುದು. ಸ್ಪಷ್ಟೀಕರಣವನ್ನು ಕೊಡತಕ್ಕ ಅವಧಿಯಲ್ಲಿ ಅವರ ಭಾಷಣಕ್ಕೆ ಅವಧಿಯನ್ನು ನೀವೂ ತೆಗೆದುಕೊಳ್ಳುವುದಾದರೆ, ಅದಕ್ಕೆ ನಾನು ಅವಕಾಶವನ್ನು ಕೊಟ್ಟರೆ ಬಹುಶಃ ನನಗೇ ಈ ಸಭೆಯನ್ನು ನಡೆಸುವುದಕ್ಕೆ ಬರುವುದಿಲ್ಲವೇನೋ ಎಂದು ಬೇರೆಯವರು ತಿಳಿದುಕೊಳ್ಳುತ್ತಾರೆ. ಆ ರೀತಿ ಆಗಬಾರದು. ನನಗೋಸ್ಕರ ತಾವು ಸ್ವಲ್ಪಮಟ್ಟಿಗೆ ಮೊಟಕುಮಾಡಿ.

ಶ್ರೀ ಬಿ. ಮುನಿಯಪ್ಪ:- ಬೆಂಗಳೂರು ನಗರವನ್ನು ಶುದ್ಧವಾಗಿಡಲು ಲಾರಿಗಳಿವೆ. ನಗರ ಪಾಲಿಕೆಯಿಂದ ಲಾರಿಗಳನ್ನು ಇಟ್ಟುಕೊಂಡು ಶುದ್ಧಮಾಡಬೇಕು, ಇಲ್ಲದಿದ್ದರೆ ಖಾಸಗಿಯವರಿಗೆ ಗುತ್ತಿಗೆ ಕೊಡಬೇಕು. ಆದರೆ ಇಲ್ಲಿ ಖಾಸಗಿಯವರಿಗೆ ಗುತ್ತಿಗೆ ಕೊಡುವಂಥ ಪದ್ಧತಿಯೂ ಇದೆ, ನಗರಪಾಲಿಕೆಯ ಲಾರಿಗಳ ಮೂಲಕ ಕಸವನ್ನು ಸಾಗಿಸುವ ಪದ್ಧತಿಯೂ ಇದೆ. ಗುತ್ತಿಗೆ ಕೊಡುತ್ತಿರುವುದರಲ್ಲಿ ಒಂದು ಲಾರಿಗೆ 300 ರೂ. ನಂತೆ ಬಾಡಿಗೆಯನ್ನು ಕೊಟ್ಟು ಕಸವನ್ನು ಹೊರಗಡೆ ಸಾಗಿಸುವ ವ್ಯವಸ್ಥೆ ಇದೆ. ಇವತ್ತು ಡಂಪಿಂಗ್ ಯಾರ್ಡ್‌ನ್ನು ನಾವು ಮಾಡಿದ್ದೇವೆಯೇ ಎಂದರೆ, ಇಲ್ಲ. 300 ರೂ. ಗೆ ಲಾರಿಗಳಲ್ಲಿ ಕಸವನ್ನು ತೆಗೆದುಕೊಂಡು ನಗಲದ ಹೊರಭಾಗಕ್ಕೆ ಸಾಗಿಸುವುದಕ್ಕೆ ಸಾಧ್ಯತೆ ಇಲ್ಲ. 2 ಟ್ರಿಪ್ ಹೊಡೆಯುವುದಕ್ಕೆ ಬದಲು ಒಂದು ಲಾರಿಯನ್ನು ತೆಗೆದುಕೊಂಡು ಹೋಗಿ 2 ಟ್ರಿಪ್ ಕಸವನ್ನು ಸಾಗಿಸಿದ್ದೇನೆಂದು ಹೇಳುತ್ತಾರೆ. ಇವತ್ತು ಈ ಬೆಂಗಳೂರು ನಗರದ ವ್ಯಾಪ್ತಿಯಲ್ಲಿರತಕ್ಕ ಕಸವನ್ನು ಹೊರಗಡೆ ಸಾಗಿಸುವುದಕ್ಕೆ ಸಾಧ್ಯವಾಗುತ್ತಿಲ್ಲ. ಆದ್ದರಿಂದ ಬೆಂಗಳೂರು ನಗರ ಪಾಲಿಕೆಯ ವತಿಯಿಂದ ಲಾರಿಗಳನ್ನು ಇಟ್ಟುಕೊಂಡು ಈ ಬೆಂಗಳೂರು ನಗರದಲ್ಲಿರುವ ಕಸಕಡ್ಡಿಯನ್ನು ತೆಗೆಸುವ ಕಾರ್ಯ ಇಟ್ಟುಕೊಳ್ಳಬೇಕು, ಇಲ್ಲದೇ ಹೋದರೆ ಇಡೀ ಬೆಂಗಳೂರು ನಗರವನ್ನು ಶುದ್ಧವಾಗಿ ಇಡುವಂತೆ ಯಾರಾದರೂ ಖಾಸಗಿಯವರಿಗೆ ಒಪ್ಪಿಸಬೇಕು. ಅದು ಅವರಿಗೆ ಸೇರಿದ್ದುದು. ಇಲ್ಲಿ ಪ್ರತಿವರ್ಷ 5 ಕೋಟಿ ರೂ. ಗಳನ್ನು ಬೆಂಗಳೂರು ನಗರಸಭೆಗೆ ವಾಹನಗಳನ್ನು ತೆಗೆದುಕೊಳ್ಳುವುದಕ್ಕೆ ಇಡುತ್ತಿದ್ದೇವೆ. ಆದರೆ ವಾಹನಗಳನ್ನು ಪ್ರತಿವರ್ಷ ಅವರು ತೆಗೆದುಕೊಳ್ಳುತ್ತಿಲ್ಲ. ಇದರ ಬಗ್ಗೆ ಸಚಿವರು ಉತ್ತರ ಕೊಡಬೇಕು. ಇದರ ಜೊತೆಗೆ ಈ ವರ್ಷ ಕಾರ್ಯಕ್ರಮ ಯೋಜನೆಯನ್ನು ಈ ನಿಮಿಷದವರೆಗೂ ತೆಗೆದುಕೊಂಡಿಲ್ಲ. ಇದಕ್ಕೆ ಕಾರಣ ಏನೆಂಬುದನ್ನು ಸಚಿವರು ಹೇಳಬೇಕು. ಅದೇರೀತಿ ಕಳೆದ ವರ್ಷದ ಕಾರ್ಯಕ್ರಮಗಳ ಯೋಜನೆಯಲ್ಲಿ ಹೇಳಿದ್ದು ನಮ್ಮ ಕ್ಷೇತ್ರಗಳಲ್ಲಿ ಜಾರಿಗೆ ಬಂದಿಲ್ಲ. ಇತ್ತೀಚೆಗೆ ಮಾನ್ಯ ಜೈಲು ಮಂತ್ರಿಗಳು ಒಂದು ಕಡೆ ಭಾಷಣ ಮಾಡುತ್ತಾ ಈ ಬೆಂಗಳೂರು ನಾಗರೀಕರ ಮೇಲೆ ಜೈಲು ಶುಲ್ಕವೆಂದು 2 ಪರ್ಸೆಂಟ್ ಹಾಕುತ್ತಾರೆಂದು ತಿಳಿದುಬಂತು. ಅದು ಸರ್ಕಾರದ ಗಮನದಲ್ಲಿದೆಯೇ?

ಅಧ್ಯಕ್ಷರು:- ಇದು ನಿಮ್ಮ ವ್ಯಕ್ತಿತ್ವಕ್ಕೆ ಗೌರವ ತರುವುದಿಲ್ಲ. ಅವರ ಭಾಷಣ, ಇವರ ಭಾಷಣ ಎಂದು ಹೇಳುವುದಕ್ಕೆ ಹೋಗಬೇಡಿ. ಸ್ಪಷ್ಟೀಕರಣವನ್ನು ಕೇಳಿ.

ಶ್ರೀ ಬಿ. ಮುನಿಯಪ್ಪ:- ಸ್ಪಷ್ಟೀಕರಣವನ್ನೇ ಕೇಳುತ್ತಿದ್ದೇನೆ. ಈ ಬೆಂಗಳೂರು ನಗರದ ಜನರ ಮೇಲೆ ಹೊಸದಾಗಿ ಜೈಲು ಶುಲ್ಕ ಎಂದು ಹಾಕುತ್ತಾರಂತೆ. ಇದು ನಿಜವೇ ಎಂಬುದನ್ನು ಮಾನ್ಯ ಮಂತ್ರಿಗಳು ಹೇಳಬೇಕು.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೆ, ಈಗಾಗಲೇ ಅವರ ಭಾಷಣದಲ್ಲಿ ಅಕ್ಟೋ-ಬರ್ 13ನೇ ತಾರೀಖು ಚುನಾವಣೆಯನ್ನು ನಡೆಸುತ್ತೇವೆಂದು ತಿಳಿಸಿದ್ದಾರೆ. ಏಕೆಂದರೆ ಈ ಚುನಾವಣೆ ಈಗಾಗಲೇ 4 ಸಾರಿ ಮುಂದೆ ಹೋಗಿದೆ. ಸರ್ಕಾರದವರು ಚುನಾವಣೆಯನ್ನು ಮತ್ತೆ ಮತ್ತೆ ಮುಂದಕ್ಕೆ ಹಾಕುತ್ತಿದ್ದಾರೆ, ನಾವೇನೋ ಚುನಾವಣೆಯನ್ನು ಮಾಡುವುದಕ್ಕೆ ಸಿದ್ಧವಾಗಿದ್ದೇವೆಂದು ಹೇಳಿದ್ದಾರೆ. ಈ ಮಾತನ್ನು ಚುನಾವಣಾ ಆಯೋಗದವರು ಬಹಳ ನೊಂದ ಮನಸ್ಸಿನಿಂದ ಹೇಳಿದ್ದಾರೆ. ಇದರ ಬಗ್ಗೆ ಯಾವುದೇ ಅನುಮಾನಕ್ಕೂ ಅವಕಾಶವಾಗದ ರೀತಿಯಲ್ಲಿ ಚುನಾವಣೆಯನ್ನು ನಡೆಸುತ್ತೀರೋ ಎಂಬುದನ್ನು ಸ್ಪಷ್ಟವಾಗಿ ಹೇಳಬೇಕು.

ಇನ್ನು ಎರಡನೆಯದಾಗಿ, ಈ ಬೆಂಗಳೂರು ನಗರಕ್ಕೆ ಮಾರಕವಾಗಿರುವ ಈ ವಲಸೆ ಬರುವುದು ಏನಿದೆ ಇದನ್ನು ತಡೆಯುವುದಕ್ಕೆ ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ? ಏಕೆಂದರೆ ಈ ಬೆಂಗಳೂರು ನಗರಕ್ಕೆ ನಾನಾ ಕಡೆಯಿಂದ ಜನರು ವಲಸೆ ಬರುತ್ತಿದ್ದಾರೆ. ಇದನ್ನು ಸರ್ಕಾರ ಪರಿ-ಣಾಮಕಾರಿಯಾಗಿ ತಡೆಯುತ್ತದೆಯೆ? ಹಿಂದೆ ಮಾನ್ಯ ಲಕ್ಷ್ಮೀಸಾಗರ್‌ರವರು ನಗರಾಭಿವೃದ್ಧಿ ಮಂತ್ರಿ ಆಗಿದ್ದಾಗ ಒಂದು ಮಾತನ್ನು ಹೇಳಿದ್ದುದು ನನಗೆ ನೆನಪಿದೆ. ಈ ಬೆಂಗಳೂರು ನಗರಕ್ಕೆ ಹೊರಗಿನಿಂದ ವಲಸೆ ಬರುವುದನ್ನು ತಡೆಯುವುದಕ್ಕೆ ಪರಿಣಾಮಕಾರಿಯಾದ ಕ್ರಮವನ್ನು ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದರು. ಇವತ್ತು ಸರ್ಕಾರ ಈ ವಲಸೆ ಬರುವವರನ್ನು ತಡೆಯದೇ ಹೋದರೆ ಈ ಬೆಂಗ-ಳೂರು ನಗರ ಅತ್ಯಂತ ಅಪಾಯಕಾರಿ ಮಟ್ಟಕ್ಕೆ ಹೋಗುತ್ತದೆ ಎಂಬುದನ್ನು ಹೇಳಬಯಸುತ್ತೇನೆ.

ಇನ್ನು ಮೂರನೆಯದಾಗಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಬಗ್ಗೆ ಹಿಂದೆ ನಾನು ಭಾಷಣ ಮಾಡುವ ಸಂದರ್ಭದಲ್ಲಿ ಹೇಳಿದ್ದೆ. ಈ ಬಿ.ಡಿ.ಎ. ಗೆ ಜನರು ಸುಮಾರು 37-38 ಕೋಟಿ ರೂ. ಗಳನ್ನು ಸೈಟುಗಳನ್ನು ಪಡೆಯುವ ಸಲುವಾಗಿ ಕಟ್ಟಿದ್ದಾರೆ, ಆ ಹಣಕ್ಕೆ ಬಡ್ಡಿಯೂ ಇಲ್ಲ ಮತ್ತು ಅವರಿಗೆ ನಿವೇಶನವೂ ಇಲ್ಲ. ಆದ್ದರಿಂದ ಈಗಲಾದರೂ ಅವರಿಗೆ ನಿವೇಶನಗಳನ್ನು ಕೊಡುವ ಬಗ್ಗೆ ಸ್ಪಷ್ಟವಾದ ತೀರ್ಮಾನವನ್ನು ಏನು ತೆಗೆದುಕೊಂಡಿದ್ದೀರಿ? ಬಿ.ಡಿ.ಎ. ನವರು ಕೆಲವರಿಗೆ ನಿವೇಶನವನ್ನು ಕೊಟ್ಟಿ-ದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ಹಕ್ಕು ಪತ್ರ ಅವರ ಕೈಲಿರುತ್ತದೆ. ಆದರೆ ಆ ಜಾಗದಲ್ಲಿ ಬೇರೆಯವರು ಹೋಗಿ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಇಂಥಾದ್ದು ಎಷ್ಟು ಪ್ರಕರಣಗಳಿವೆ? ಇದರ ಬಗ್ಗೆ ತನಿಖೆ ಮಾಡಿಸಿ ನೀವು ಯಾರಿಗೆ ನಿವೇಶನ ಹಂಚಿದ್ದೀರಿ ಅವರಿಗೆ ಕೊಡಿಸುವ ವ್ಯವಸ್ಥೆಯನ್ನು ಮಾಡು-ತ್ತೀರೋ?

ಶ್ರೀ ಅನಂತನಾಗ್ (ನಗರಾಭಿವೃದ್ಧಿ ಸಚಿವರು):- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಬರುವುದಕ್ಕೆ ಮುಂಚಿತವಾಗಿ ಅದನ್ನು ಹೇಳಿದ್ದೇನೆ. 20 x 30 ಅಡಿ ಅಳತೆಯ ನಿವೇಶನಗಳಿಗೆ ಕೆಲವು

ಕಡೆ ಅರ್ಜಿಗಳನ್ನು ತೆಗೆದುಕೊಂಡು ಠೇವಣಿಯನ್ನು ಇಡಿಸಿಕೊಂಡಿದ್ದೆವು. ಆದರೆ ಅದರಲ್ಲಿ ಅನೇಕ ಕಡೆ ನಿವೇಶನಗಳನ್ನು ಕೊಡುವುದಕ್ಕಾಗುವುದಿಲ್ಲ, ನೀವು ಹಣವನ್ನು ವಾಪಸ್ಸು ತೆಗೆದುಕೊಂಡು ಹೋಗಿ ಎಂದು ತಿಳಿಸಿದ್ದಾಗಿದೆ. ಇನ್ನು 1988ರ ನಂತರ ಯಾವುದೇ ಹೊಸ ಅರ್ಜಿಗಳನ್ನು ತೆಗೆದುಕೊಂಡಿಲ್ಲ. ಎಲ್ಲೆಲ್ಲಿ ಬಿ.ಡಿ.ಎ. ನವರು ಜಮೀನನ್ನು ಅಕ್ವೈರ್ ಮಾಡಿದೆ ಅದೆಲ್ಲವೂ ಲಿಟಿಗೇಷನ್ಸ್‌ನಲ್ಲಿ ಇದ್ದುದರಿಂದ ಮಾನ್ಯ ನಂಜೇಗೌಡರು ಸಲಹೆ ಮಾಡಿದ ರೀತಿಯಲ್ಲಿ ಎಲ್ಲೆಲ್ಲಿ ಬಿ.ಡಿ.ಎ. ವತಿಯಿಂದ ಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲ ಅಂಥ ಕಡೆ ಖಾಸಗಿಯವರಿಗೆ, ಅಥವಾ ಗ್ರೂಪ್ ಹೌಸಿಂಗ್‌ಗೆ ಅನುಮತಿಯನ್ನು ಕೊಟ್ಟಿದ್ದೇವೆ. ಅಲ್ಲಿ ಶೇಕಡ 25 ರಿಂದ 30 ನಿವೇಶನಗಳನ್ನು ಬಿ.ಡಿ.ಎ. ನವರಿಗೆ ಫ್ರೀ ಆಫ್ ಕಾಸ್ಟ್ ಆಗಿ ಕೊಡಬೇಕೆಂದು ಹೊಸದಾಗಿ ಪಾಲಿಸಿಯನ್ನು ಮಾಡಿಕೊಂಡಿದ್ದೇವೆ. ಮುಂದೆ ಈ ಪೆಂಡಿಂಗ್ ಅಪ್ಲಿಕೇಷನ್ಸ್‌ಗೆ ನಿವೇಶನಗಳನ್ನು ಕೊಡುವುದಕ್ಕೆ ಅವಕಾಶವಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್:- ತಾವೂ ಮತ್ತು ಕಂದಾಯ ಮಂತ್ರಿಗಳೂ ಸೇರಿ ಇದರ ಬಗ್ಗೆ ಸ್ವಲ್ಪ ಮಟ್ಟಿಗೆ ಯೋಚನೆ ಮಾಡಿ. ಇವತ್ತು ಈ ಖಾಸಗಿ ಸೊಸೈಟಿಯವರದ್ದೇ ಒಂದು ದೊಡ್ಡ ದಂಧೆ ಆಗಿದೆ. ಈ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಉದ್ದೇಶ, ನೀತಿಯನ್ನು ನೋಡಿದರೆ ನಿಜವಾಗಿ ಸಂತೋಷ ಪಡುವಂಥಾದ್ದು. ಆದರೆ ರೆವಿನ್ಯೂ ಜಮೀನನ್ನು ತೆಗೆದುಕೊಂಡು ನಿವೇಶನಗಳನ್ನು ವಿಂಗ-ಡಿಸುವ ಖಾಸಗಿಯವರದ್ದು ಒಂದು ರೀತಿಯಲ್ಲಿ ಕ್ಯಾನ್ಸರ್ ರೋಗದಂತೆ ಆಗಿದೆ. ಇದನ್ನು ತಾವು ತಪ್ಪಿಸುವುದಕ್ಕೆ ಯೋಚನೆ ಮಾಡಬೇಕು. ಈಗ ತಾವು ತಕ್ಷಣ ಉತ್ತರ ಕೊಡುವುದಕ್ಕೆ ಬದಲು ತಾವು ಕುಳಿತು ಚೆನ್ನಾಗಿ ಯೋಚಿಸಿ, ಚರ್ಚೆಮಾಡಿ ಒಂದು ತೀರ್ಮಾನವನ್ನು ತೆಗೆದುಕೊಳ್ಳಿ. ನೀವು ಹಣವನ್ನು ತೆಗೆದುಕೊಂಡಿರುವುದು ಇವತ್ತು ಅವರಿಗೆ ವಾಪಸ್ಸು ಕೊಡುವುದಕ್ಕಲ್ಲ. ನೀವು ಅವರಿಗೆ ನಿವೇಶನಗಳನ್ನು ಕೊಡಲೇಬೇಕು. ಏನಾದರೂ ಮಾಡಿ ನಿವೇಶನಗಳನ್ನು ಕೊಡಲೇಬೇಕು. ನಿವೇಶನ ಕೊಡುತ್ತೇವೆಂದು ಹಣವನ್ನು ಜನರಿಂದ ತೆಗೆದುಕೊಂಡು, ಈಗ ನಾವು ನಿವೇಶನ ಕೊಡುವುದಕ್ಕಾಗುವುದಿಲ್ಲ, ನಿಮ್ಮ ಹಣವನ್ನು ವಾಪಸ್ಸು ತೆಗೆದುಕೊಳ್ಳಿ ಎಂದು ಹೇಳತಕ್ಕ ನಿಮ್ಮ ವಾದ ಸರಿಯಲ್ಲ. ಏನಾದರೂ ಮಾಡಿ ಅವರಿಗೆ ನಿವೇಶನ ಕೊಡಲೇಬೇಕು. ಆದರೆ ಈ ನೀತಿಯಲ್ಲಿ ಅಲ್ಲ. ಖಾಸಗಿಯವರ ಮೂಲಕ ಕೊಡು ವಂಥಾದ್ದು ಬೇಡ. ತಾವು ಉತ್ತರ ಕೊಡುವುದಕ್ಕೆ ಮುಂಚಿತವಾಗಿ ಇದರ ಬಗ್ಗೆ ತೀವ್ರವಾಗಿ ಯೋಚನೆ ಮಾಡಿ ಎಂದು ಕೇಳಿಕೊಳ್ಳುತ್ತೇನೆ.

11.10 ಎ. ಎಂ

ಶ್ರೀ ಅನಂತನಾಗ್:- ಎಲ್ಲದಕ್ಕೂ ನಾನು ಹೇಳುತ್ತಿಲ್ಲ. ಕೆಲಸಕ್ಕೆ ಮಾತ್ರ ನಾನು ಹೇಳಿದೆ. ಎಲ್ಲಾ ಕಡೆಗಳಲ್ಲೂ ಗ್ರೂಪ್ ಹೌಸಿಂಗ್ ಸೊಸೈಟಿಗಳ ಮೂಲಕ ಎಂದು ಮಾಡುವುದಕ್ಕಾಗುವುದಿಲ್ಲ. ಇದನ್ನು ಚರ್ಚೆಮಾಡಿಯೇ ನಾನು ಇಲ್ಲಿ ಹೇಳುತ್ತಿದ್ದೇನೆ.

ಇನ್ನು 20 x 30 ಅಳತೆ ಸೈಟ್ಸ್ ಬಗ್ಗೆ ನಾನು ಹೇಳಿದ್ದುದು. ಬಿ.ಡಿ.ಎ. ನವರು ತಮ್ಮ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುವುದಕ್ಕಾಗುವುದಿಲ್ಲ. ಯಾರ್‍ಯಾರು ಎಲ್ಲೆಲ್ಲಿ ನಮಗೆ ಹಣವನ್ನು

ವಾಪಸ್ಸು ಕೊಡಬೇಕೆಂದು ಕೇಳಿದ್ದಾರೆ ಅಲ್ಲಿ ಮಾತ್ರ ನೀವು ಬಂದು ನಿಮ್ಮ ಹಣವನ್ನು ವಾಪಸ್ಸು ತೆಗೆದು ಕೊಳ್ಳಬಹುದೆಂದು ಹೇಳಿದ್ದೇವೆ. ಅದನ್ನು ಸ್ಟ್ರೀಮ್‌ಲೈನ್ ಮಾಡುತ್ತಿದ್ದೇವೆ.

ಇನ್ನು ಚುನಾವಣೆಯನ್ನು ಅಕ್ಟೋಬರ್ 13ನೇ ತಾರೀಖು ಮಾಡುತ್ತೇವೆಂದು ಸರ್ಕಾರ ಈಗಾಗಲೇ ಘೋಷಣೆ ಮಾಡಿದೆ. ಚುನಾವಣೆಯನ್ನಂತೂ ನಾವು ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್:- ಇದರಲ್ಲಿ ಮತ್ತೆ ಏನಾದರೂ ಬದಲಾವಣೆ ಇದೆಯೇ?

ಶ್ರೀ ಅನಂತನಾಗ್:- ಯಾವುದೇ ಕಾರಣಕ್ಕೂ ಇದರಲ್ಲಿ ಬದಲಾವಣೆ ಇಲ್ಲ.

ಶ್ರೀ ಸಿ. ಬೈರೇಗೌಡ:- ಅನ್‌ಫೋರ್‌ಸೀನ್, ನ್ಯಾಚುರಲ್ ಕೆಲಾಮಿಟೀಸ್ ಏನಾದರೂ ಆದರೆ ಬದಲಾವಣೆ ಆಗಬಹುದು.

ಶ್ರೀ ಅನಂತನಾಗ್:- ಅನ್‌ಫೋರ್‌ಸೀನ್ ಏನಾದರೂ ಬಂದರೆ ಆಗ ಬದಲಾವಣೆ ಆಗಬಹುದು. ಇನ್ನು ವಲಸೆ ಬರುವುದನ್ನು ಕುರಿತು ತಾವು ಹೇಳಿದಿರಿ. ಶ್ರೀಮಂತರು ಬೇರೆ ಕಡೆಯಿಂದ ವಲಸೆ ಬಂದರೂ ಗೊತ್ತಾಗುವುದಿಲ್ಲ. ಅವರೆಲ್ಲರೂ ಮಿಕ್ಸ್ ಆಗಿ ಹೋಗಿಬಿಡುತ್ತಾರೆ. ಹೊರಗಿನಿಂದ ಬಂದವರು ಎಂದು ಗುರ್ತಿಸುವುದಕ್ಕೆ ಆಗುವುದೇ ಇಲ್ಲ. ಆರ್ಟಿಕಲ್ 370 ಇಲ್ಲಂತೂ ಅಪ್ಲಿಕೆಬಲ್ ಆಗುವುದಿಲ್ಲ. ಹೊರಗಿನಿಂದ ವಲಸೆ ಬರಬಾರದೆಂದು ನಾವು ಕಾಯಿದೆಯನ್ನು ಮಾಡುವುದಕ್ಕಾಗುವುದಿಲ್ಲ. ಆದರೆ ಇಲ್ಲಿ ಇಷ್ಟೊಂದು ಸ್ಲಂಸ್ ಏನು ಬೆಳೆದಿವೆ ಅವುಗಳನ್ನು ಹೇಗೆ ನಿರ್ಮೂಲನ ಮಾಡಬೇಕೆಂದು ಯೋಚನೆ ಮಾಡುತ್ತೇವೆ; ಇನ್ನು ಮುಂದೆ ಹೊಸ ಹೊಸ ಸ್ಲಂಗಳನ್ನು ನಗರ ಪ್ರದೇಶಗಳಲ್ಲಿ ಕಟ್ಟುವುದಕ್ಕೆ ಬಿಡುವುದಿಲ್ಲ ಎಂಬ ತೀರ್ಮಾನವನ್ನು ಮಹಾನಗರ ಪಾಲಿಕೆಯವರು ತೆಗೆದುಕೊಂಡು ಅದಕ್ಕಾಗಿಯೇ ಒಂದು ಸ್ಕ್ವಾಡ್‌ನ್ನು ರಚನೆ ಮಾಡಿದೆ ಎಂಬುದನ್ನು ತಮಗೆ ಈ ಸಂದರ್ಭದಲ್ಲಿ ಹೇಳ ಬಯಸುತ್ತೇನೆ. ವಲಸೆ ಬರುವುದನ್ನು ತಡೆಯುವುದಾದರೂ ಹೇಗೆ? ಹಿಂದೆ ಮಾನ್ಯ ಲಕ್ಷ್ಮೀಸಾಗರ್ ರವರು ಹೇಳಿದ್ದರ ಬಗ್ಗೆ ಕೂಡ ಹಿಂದೆ ಚರ್ಚೆ ಸಹ ಆಗಿತ್ತು. ಆದರೆ ವಲಸೆ ಬರುವವರನ್ನು ತಡೆಯುವುದಾದರೂ ಹೇಗೆ?

ಶ್ರೀ ವಾಟಾಳ್ ನಾಗರಾಜ್:- ಬೆಂಗಳೂರಿನಲ್ಲಿ ಒಂದು ಸೇರು ಖರ್ಚು ಬಂದರೆ ತಡೆಯಬಹುದು, ಆದರೆ ಅದೇ 10 ಸೇರು ಆದರೆ ಅದು ಹೊಡೆತವಾಗುತ್ತದೆ. ಇವತ್ತು ಬೆಂಗಳೂರು ನಗರ ಕಲುಷಿತ ಆಗಿದೆ. ಬೆಂಗಳೂರು ನಗರ ಒಂದು ವಿಷದ ನಗರವಾಗಿದೆ. ಬೆಂಗಳೂರಿನಲ್ಲಿ ಬದುಕುವುದೇ ಬಹಳ ಕಷ್ಟವಾಗಿದೆ. ಬೆಂಗಳೂರಿನಲ್ಲಿ ಸಾಮಾನ್ಯವಾಗಿ ಪ್ರತಿಯೊಬ್ಬರಿಗೂ ಅಸ್ತಮಾ ಬರುತ್ತಿದೆ. ಇಲ್ಲಿ ಸುಮಾರು 10 ಲಕ್ಷ ವಾಹನಗಳು ಓಡಾಡುತ್ತಿವೆ. ಆದ್ದರಿಂದ ನಾನು ತಮಗೆ ಹೇಳುತ್ತಿದ್ದೇನೆ. ಈ ವಲಸೆ ಬರುವುದನ್ನು ತಡೆಯುವುದಕ್ಕೆ ಅನೇಕ ವಿಧಾನಗಳಿವೆ. ಅದರ ಬಗ್ಗೆ ಒಂದು ಸಮಿತಿಯನ್ನು ರಚನೆ ಮಾಡಿ ಚರ್ಚೆ ಮಾಡಿ ಇದನ್ನು ಯಾವ ರೀತಿ ತಡೆಗಟ್ಟಬಹುದೆಂಬುದನ್ನು ನೋಡಿ.

ಶ್ರೀ ಅನಂತನಾಗ್:- ತಾವು ಕೊಟ್ಟ ಸಲಹೆಯಂತೆ ಚರ್ಚೆಮಾಡಿ, ಏನು ಮಾಡಬಹುದೆಂಬು-

ದನ್ನು ನಾವು ಪರಿಶೀಲಿಸುತ್ತೇವೆ. ಹಿಂದೆ ಮಹಾತ್ಮಾ ಗಾಂಧೀಜಿಯವರು "Back to the villages" ಎಂದು ಒಂದು ಸಂದೇಶವನ್ನು ಕೊಟ್ಟಿದ್ದರು. ಅದೇ ರೀತಿ ಈ ಬೆಂಗಳೂರಿಗೆ ಬಂದು ಬೇಸತ್ತು ಅನೇಕರು ತಮ್ಮ ತಮ್ಮ ಊರುಗಳಿಗೆ ವಾಪಸ್ಸು ಹೋಗಿರುವಂಥ ಉದಾಹರಣೆಗಳಿವೆ. ಆದರೆ ನಾನು ತಮಗೆ ಸ್ಪಷ್ಟವಾಗಿ ತಿಳಿಸುವುದೇನೆಂದರೆ, ಈ ಸ್ಲಂಗಳು ಹೆಚ್ಚು ಹೆಚ್ಚು ಈ ಬೆಂಗಳೂರಿಗೆ ಬರದಂತೆ ನಾವು ಕಾರ್ಯಕ್ರಮವನ್ನು ರೂಪಿಸುತ್ತೇವೆಂಬ ಮಾತನ್ನು ಹೇಳಿ ತಾವು ಏನು ಸಲಹೆಯನ್ನು ಕೊಟ್ಟಿದ್ದೀರಿ, ಅದನ್ನು ಗಂಭೀರವಾಗಿ ಪರಿಶೀಲಿಸುತ್ತೇವೆಂದು ಹೇಳಬಯಸುತ್ತೇನೆ.

ಇನ್ನು ಮಾನ್ಯ ಸದಸ್ಯರಾಗಿ ಸುರೇಶ್‌ಕುಮಾರ್‌ರವರು ಮಾತನಾಡಿ ಟ್ಯಾಂಕರ್ ಮೂಲಕ ಒದ-ಗಿಸುವಂಥ ಕಲ್ಮಶವಾದ ನೀರನ್ನು ಕುಡಿಯುವುದರಿಂದ ಮಲೇರಿಯ ಮುಂತಾದ ರೋಗಗಳು ಹಬ್ಬಬಹುದೆಂದು ಹೇಳಿದ್ದಾರೆ. ಅವರೇ ಸೂಚನೆಯನ್ನು ಕೊಟ್ಟಂತೆ ರ್‍ಯಾಂಡಂ ಆಗಿ ಚೆಕ್ಕಿಂಗ್ ಕಾರ್ಯಕ್ರಮವನ್ನು ನಾವು ಹಾಕಿಕೊಳ್ಳುತ್ತೇವೆಂದು ಹೇಳಬಯಸುತ್ತೇನೆ.

ಇನ್ನು, ಪ್ರಾಪರ್ಟಿ ಟ್ಯಾಕ್ಸ್ ಬಗ್ಗೆ ಒಂದು ಮಾತನ್ನು ಹೇಳಬೇಕಾದರೆ, ಇದು ಬಹಳ ನೋವಿನ ಸಂಗತಿ, ಆದರೂ ಇದನ್ನು ನಾನು ಹೇಳಲೇಬೇಕಾಗಿದೆ. ಅವತ್ತು ಮಾನ್ಯ ಸದಸ್ಯರಾದ ರಾಜಣ್ಣನವರು ಮಾತನಾಡುತ್ತಾ, an ordinary citizen has to run from pillar to post for a 30 x 40 site ಎಂದು ಹೇಳಿದ್ದರು. ಅಲ್ಲಿಯ ಅಧಿಕಾರಿಗಳು ನೂರಾರು ಸಾರಿ ಸುತ್ತುವಂತೆ ಮಾಡುತ್ತಾರೆ ಅದೇ ಬಿಲ್ಡರ್ಸ್ ಬಂದರೆ ಅವರ ಮನೆಗೆ ಸ್ಯಾಂಕ್ಷನ್ಡ್ ಪ್ಲಾನ್‌ನ್ನು ತೆಗೆದುಕೊಂಡು ಹೋಗಿ ಅಧಿಕಾರಿಗಳು ಕೊಡುತ್ತಾರೆಂದು ಹೇಳಿದರು. ಇದು ಬಹಳ ನೋವಿನ ಸಂಗತಿ. ಇದನ್ನು ಬದಲಾವಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಇತ್ತೀಚೆಗೆ ನಡೆದಂಥ ಒಂದು ಘಟನೆಯನ್ನು ತಮ್ಮ ಅನುಮತಿ ಪಡೆದು ಹೇಳ ಬಯಸುತ್ತೇನೆ. ಇದು ಮಾನ್ಯ ವಾಟಾಳ್ ನಾಗರಾಜ್‌ರವರಿಗೂ ಗೊತ್ತು. ಡಾ॥ ರಾಜ್‌ಕುಮಾರ್ ರವರ ನೇತೃತ್ವದಲ್ಲಿ ಕಲಾವಿದರ ಒಂದು ಸಂಘವನ್ನು ಮಾಡಿದರು. ಅದಕ್ಕೆ ಅವರೇ ಅಧ್ಯಕ್ಷರು. ಹಿಂದೆ ಸರ್ಕಾರದವರು ನಮಗೆ ಸಿ.ಎ. ಸೈಟ್ಸ್‌ನ್ನು ಕೊಟ್ಟಿದ್ದರು. ಆ ಸೈಟುಗಳಲ್ಲಿ ಮನೆಗಳನ್ನು ಕಟ್ಟಬಾರದೆಂದು ಕೆಲವು ಸಾರ್ವಜನಿಕ ಹಿತಾಸಕ್ತಿಗಳು ಹೈಕೋರ್ಟ್‌ಗೆ ಹೋದರು. ಅಲ್ಲಿ ನಮ್ಮ ಪರವಾಗಿ ಆಯಿತು. ನಾವು ಕಟ್ಟಡವನ್ನು ಶುರುಮಾಡಿ ಕಾಂಪೌಂಡ್‌ನ್ನೂ ಕೂಡ ಹಾಕಿದೆವು. ಅನಂತರ ಅವರು ಸುಪ್ರೀಂ ಕೋರ್ಟ್‌ಗೆ ಹೋದರು. ಆ ಸುಪ್ರೀಂ ಕೋರ್ಟ್‌ನವರು "Further Construction should not be made" ಎಂದು ಆರ್ಡರ್ ಕೊಟ್ಟರು. ಕಟ್ಟಿರುವುದನ್ನು ಕೆಡವಿಹಾಕಿ ಎಂದೂ ಕೂಡ ಅವರು ಹೇಳಲಿಲ್ಲ. ಆಗ ಮಾನ್ಯ ದೇವೇಗೌಡರ ಸರ್ಕಾರ ಇತ್ತು. ನಾವು ಅವರನ್ನು ಕಂಡು ಕೇಳಿದಾಗ, ಈಗ ಚುನಾವಣೆಯ ಗಡಿಬಿಡಿಯಲ್ಲಿದ್ದೇವೆ, ಈ ಚುನಾವಣೆ ಆದ ಕೂಡಲೇ ಮಾಡುತ್ತೇವೆಂದು ಹೇಳಿ ದರು. ಅಷ್ಟರಲ್ಲಿ ಅಂದರೆ ಇತ್ತೀಚೆಗೆ ಯಾರಿಗೂ ಹೇಳದೆ, ಕಮೀಷನರ್‌ರವರಿಗೂ ತಿಳಿಸದೆ, ನನಗೂ ತಿಳಿಸದೆ ಮುಂಜಾನೆ ಬೆಳಿಗ್ಗೆ ಅರ್ಧ ಕಟ್ಟಿದ್ದ ಕಟ್ಟಡವನ್ನು ಒಡೆದು ಹಾಕಿದರು. ಇಂಥ ಕೆಲಸವನ್ನು ಯಾರಿಗೂ ತಿಳಿಸದೇ ಮಾಡಿದ್ದಾರೆ. ಅವತ್ತೇ ಅಂದರೆ ದಾದಾಸಾಹೇಬ್ ಫಾಲ್ಕೆ ಅವಾರ್ಡ್‌ನ್ನು

ಒಂದು ಕಡೆ ಕೊಡುತ್ತೀರಿ, ಇನ್ನೊಂದು ಕಡೆ ಕಲಾ ದೇಗುಲವನ್ನು ಕಟ್ಟುವುದಕ್ಕೆ ಬಿಡುವುದಿಲ್ಲ ಎಂದು ಹೇಳಿದೆವು. ಅವತ್ತು ಮಾನ್ಯ ರಾಜ್‌ಕುಮಾರ್‌ರವರಿಗೆ ಫಾಲ್ಕೆ ಅವಾರ್ಡ್ ಕೊಡುವ ದಿವಸ.

ಅಧ್ಯಕ್ಷರು:- ಬಹುಶಃ ಇದೂ ಒಂದು ರೀತಿಯ ಅವಾರ್ಡ್, ಒಂದು ರೀತಿಯ ಸನ್ಮಾನ ಎಂದು ಬಿ.ಡಿ.ಎ. ನವರು ತಿಳಿದುಕೊಂಡಿರಬಹುದು.

ಶ್ರೀ ಅನಂತನಾಗ್:- ಇದು ಒಂದು ನೋವಿನ ಸಂಗತಿ. ಇಂಥ ಒಂದು ದುಃಸ್ಥಿತಿ ಇದೆ ಎಂಬು-ದನ್ನು ಈ ಸದನದ ಗಮನಕ್ಕೆ ತರಬಯಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ಹಾಗಾದರೆ ಇದಕ್ಕೆ ಪರಿಹಾರವೇನು? ಅದನ್ನು ಈಗ ಅವರು ಒಡೆದು ಹಾಕಿದ್ದಾರೆ, ಅದನ್ನು ತಾವು ಸದನದ ಗಮನಕ್ಕೆ ತಂದಿದ್ದೀರಿ. ಆದರೆ ಇದಕ್ಕೆ ಪರಿಹಾರ ಏನು?

ಇನ್ನೊಂದು ವಿಚಾರ ಎಂದರೆ, ನಿನ್ನೆ ರಾತ್ರಿ ನಿಮ್ಮ ಆಡಳಿತಾಧಿಕಾರಿಗಳು ಪೋಲೀಸರನ್ನು ಕರೆದು ಕೊಂಡು ಹೋಗಿ ರಸ್ತೆಯಲ್ಲಿದ್ದ ದೇವಸ್ಥಾನದ ಗೋಡೆಗಳನ್ನೆಲ್ಲಾ ಒಡೆದು ಉರುಳಿಸುತ್ತಿದ್ದಾರೆ. ಮೈಸೂರು ಬ್ಯಾಂಕ್‌ನ ಚೌಕದಲ್ಲಿದ್ದ ಗಣಪತಿ ದೇವಸ್ಥಾನದ ಪಕ್ಕದಲ್ಲಿದ್ದ ಗೋಡೆಯನ್ನು ಸಂಪೂರ್ಣ-ವಾಗಿ ನಿರ್ನಾಮ ಮಾಡಿದ್ದಾರೆ. ನಿನ್ನೆ ರಾತ್ರಿ 12 ಗಂಟೆಯಲ್ಲಿ ನಾನೂ ಮತ್ತು ವಿಧಾನ ಪರಿಷತ್ತಿನ ಸದಸ್ಯರಾದ ಮಾನ್ಯ ರಾಮಚಂದ್ರಗೌಡರೂ ಪೋಲಿಸ್ ಕಮಿಷನರ್‌ರವರಿಗೆ ಫೋನ್ ಮಾಡಿದೆವು. ಬಹುಶಃ ತಮಗೂ ಆ ಫೋನ್ ಕರೆ ಬಂದಿರಬಹುದೆಂದು ಕಾಣುತ್ತದೆ. ಈ ರೀತಿಯಲ್ಲಿ ಎಲ್ಲಾ ಕಡೆ-ಗಳಲ್ಲೂ ಜನರ ಭಾವನೆಗಳನ್ನು ಕೆರಳಿಸುವ ಕೆಲಸ ಮಾಡುತ್ತಿದ್ದಾರೆ ನಿಮ್ಮ ಆಡಳಿತಾಧಿಕಾರಿಗಳು. ಇದರ ಬಗ್ಗೆ ತಮಗೇನಾದರೂ ಮಾಹಿತಿ ಇದ್ದರೆ ಹೇಳಬೇಕು. ಇನ್ನು ಕಲಾ ದೇಗುಲದ ಬಗ್ಗೆ ತಾವು ಹೇಳಿದಿರಿ. ಅದನ್ನು ಉಳಿಸುವುದಕ್ಕೆ ಏನು ಪ್ರಾಮಾಣಿಕ ಕ್ರಮವನ್ನು ತೆಗೆದುಕೊಂಡಿದ್ದೀರಿ ಎಂಬುದನ್ನು ಹೇಳಬೇಕು.

ಶ್ರೀ ಅನಂತನಾಗ್:- ದೇವಸ್ಥಾನದ ಗೋಡೆ ಒಡೆಯುವ ವಿಚಾರವನ್ನು ನನ್ನ ಗಮನಕ್ಕೆ ತಂದಿ-ದ್ದರು. ಅದನ್ನು ಪರಿಶೀಲಿಸುತ್ತೇನೆ. ಕಲಾ ದೇಗುಲದ ಬಗ್ಗೆ ಸುಪ್ರೀಂ ಕೋರ್ಟ್. . .

ಶ್ರೀ ಎನ್. ರಾಜಣ್ಣ:- ಮಾನ್ಯ ಅಧ್ಯಕ್ಷರೆ, ಇವತ್ತು ಬೆಳಿಗ್ಗೆ ನನ್ನ ಕ್ಷೇತ್ರದ ಜನರು ಒಂದು ದೇವಸ್ಥಾನದ ಶಿಖರವನ್ನು ಕಟ್ಟಬೇಕಾಗಿದೆ ಎಂದು ಕೇಳಿದರು. ನೀವು ಕಟ್ಟಿಕೊಳ್ಳಿ ಎಂದು ಹೇಳಿದೆ. ಅಡ್ಮಿನಿಸ್ಟ್ರೇಟರ್‌ರವರಿಗೆ ಈ ವಿಚಾರವನ್ನು ಹೇಳಿದರೆ ಅಷ್ಟು ಹೊತ್ತಿಗೆ ಸ್ಕ್ವಾಡನ್ನು ಕಳುಹಿಸಿದ್ದಾರೆ. ಈ ದೇವಸ್ಥಾನ ಇರತಕ್ಕದ್ದು ಅಲಸೂರಿನ ಲೇಕ್ ಹತ್ತಿರ. ಜನರು ನಮ್ಮ ಮೇಲೆ ಬಂದು ಬೀಳುತ್ತಾರೆ. ನಾವು ಏನು ಮಾಡಬೇಕು?

ಅಧ್ಯಕ್ಷರು:- ಆ ದೇವಸ್ಥಾನ ಬ್ರಿಟಿಷ್ ದೇಶದ್ದೇ? ಅಂದರೆ ಆ ದೇವಸ್ಥಾನ ಇತ್ತೀಚಿನದೋ ಅಥವಾ ಹಳೆಯದೋ?

ಶ್ರೀ ಎನ್. ರಾಜಣ್ಣ:- ಅದನ್ನು ಕಟ್ಟಿ ಸುಮಾರು 10-15 ವರ್ಷವಾಗಿರಬಹುದು. ಅದರ ಸಣ್ಣ ಪುಟ್ಟ ರಿಪೇರಿ ಕೆಲಸ ಮಾಡುತ್ತಿದ್ದಾರೆ. ಆ ಸಂದರ್ಭದಲ್ಲಿ ಫುಟ್‌ಪಾತ್‌ನ್ನು ಸ್ವಲ್ಪ ಎನ್‌ಕ್ರೋಚ್‌ಮೆಂಟ್ ಮಾಡಿಕೊಂಡಿದ್ದಾರೆ.

ಶ್ರೀ ಬಿ.ಎನ್. ಬಚ್ಚೇಗೌಡ:- ಮಾನ್ಯ ಅಧ್ಯಕ್ಷರೆ, ಈ ಬೆಂಗಳೂರಿನಲ್ಲಿ ದೇವಸ್ಥಾನಗಳನ್ನು ಫುಟ್ ಪಾತ್ ಮೇಲೆ ಕಟ್ಟುವುದು ಒಂದು ವಾಡಿಕೆಯಾಗಿದೆ. ಇದು ಮಾನ್ಯ ವಾಟಾಳ್ ನಾಗರಾಜ್ ರವರಿಗೂ ಗೊತ್ತಿದೆ. ಮಾನ್ಯ ವಾಟಾಳ್‌ರವರ ವಾದ ಒಂದು ಕಡೆ ಜನಸಂದಣಿ ಜಾಸ್ತಿ ಇದೆ, ಫುಟ್‌ಪಾತನ್ನು ತೆರವು ಮಾಡಬೇಕು, ಜನ ಸುಗಮವಾಗಿ ಸಂಚರಿಸುವಂತಿರಬೇಕು, ಬೆಂಗಳೂರು ಬಹಳ ಚೆನ್ನಾಗಿರಬೇಕೆಂದು ಹೇಳುತ್ತಾರೆ, ಇನ್ನೊಂದು ಕಡೆ ಇಂಥಾದ್ದಕ್ಕೆಲ್ಲಾ ಅವಕಾಶವನ್ನೂ ಕೊಡಿ ಎಂದು ಹೇಳುತ್ತಾರೆ. ಸ್ಮಶಾನದಲ್ಲಿ ದೇವಸ್ಥಾನಗಳನ್ನು ಕಟ್ಟಿಕೊಂಡು ಅದಕ್ಕೆ ಮಂಜೂರಾತಿಯನ್ನು ಕೊಡಿ ಎಂದು ಕೇಳುವಂಥ ಪ್ರಸಂಗಗಳೂ ಈ ಬೆಂಗಳೂರಿನಲ್ಲಿವೆ. ಫುಟ್‌ಪಾತ್‌ನ ಮೇಲೆ ಇದೇ ಒಂದು ದಂಧೆ ಆಗಿದೆ. ತಮಿಳ್ನಾಡಿನವರು ಬಂದು ಮಾರಿಯಮ್ಮ ಎಂದೋ ಅಥವಾ ಇನ್ನೊಂದು ಯಾವುದೋ ಓಂ ಶಕ್ತಿ ಎಂದೋ ಇಟ್ಟುಕೊಂಡು ವಸೂಲಿ ಮಾಡುತ್ತಿದ್ದಾರೆ. ಇಂಥಾದ್ದಕ್ಕೆಲ್ಲಾ ನಾವು ಪ್ರೋತ್ಸಾಹ ನೀಡುತ್ತಾ ಹೋದರೆ ಹೇಗೆ? ನಮ್ಮ ನಮ್ಮ ಕ್ಷೇತ್ರಗಳಲ್ಲಿ ತಮಿಳರಿದ್ದಾರೆ ಎಂದು ಅವರಿಗೆ ಪ್ರೋತ್ಸಾಹಿಸುವುದು, ಇನ್ನೊಂದು ಕ್ಷೇತ್ರದಲ್ಲಿ ಇನ್ನೊಂದು ಜಾತಿಯವರಿದ್ದಾರೆ ಎಂದು ಪ್ರೋತ್ಸಾಹಿಸುವುದು ಸರಿಯಲ್ಲ. ಈ ಬೆಂಗಳೂರಿನಲ್ಲಿ ಇಂಥ ವಿಚಾರಕ್ಕೆ ಸಂಬಂಧಪಟ್ಟಂತೆ ಏನಾದರೂ ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕು. ಇಂಥಾದ್ದಕ್ಕೆ ನಾವು ಪ್ರೋತ್ಸಾಹ ನೀಡಬಾರದು. ದೇವರು ಎಂದರೆ ನಮ್ಮ ಮನೆಗಳಲ್ಲಿ ಪೂಜೆ ಮಾಡೋಣ. ದಿನಬೆಳಗಾದರೆ ಹೊಸ ಹೊಸ ದೇವಸ್ಥಾನಗಳು ಬಂದರೆ ಅದನ್ನೆಲ್ಲಾ ಸುಧಾರಿಸುವುದಾದರೂ ಹೇಗೆ? ಇದು ಅಶಿಸ್ತು ಆಗುತ್ತದೆ. We should not encourage this. How do you maintain it? It is indiscipline.

ಶ್ರೀ ವಾಟಾಳ್ ನಾಗರಾಜ್:- ಮೈಸೂರು ಬ್ಯಾಂಕ್ ಹತ್ತಿರ ಇರುವಂಥ ದೇವಸ್ಥಾನ ಬಹಳ ಪುರಾತನವಾದದು. ಇದಕ್ಕೆ ಶತಮಾನದ ಇತಿಹಾಸ ಇದೆ.

ಅಧ್ಯಕ್ಷರು:- ನೀವು ವಿಷಯವನ್ನು ಬಿಟ್ಟು ಹೋಗುತ್ತಿದ್ದೀರಿ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೆ, ದೇವಸ್ಥಾನವನ್ನು ಯಾರು ಕಟ್ಟಬೇಕು, ಯಾರು ಪೂಜೆ ಮಾಡಬೇಕು ಎಂಬುದಕ್ಕೆ ಜನರು ಇದ್ದಾರೆ, ಅವರು ಯೋಚನೆ ಮಾಡುತ್ತಾರೆ. ಸರ್ಕಾರದವರು ಅದರ ಬಗ್ಗೆ ಚಿಂತನೆ ಮಾಡುವುದು ಬೇಡ. ಇರತಕ್ಕ ದೇವಸ್ಥಾನಗಳನ್ನು ಹಾಳು ಮಾಡದಿದ್ದರೆ ಸಾಕು. ಮತ್ತು ಇರುವುದನ್ನು ಮೇಂಟೇನ್ ಮಾಡಿಕೊಂಡು ಹೋದರೆ ಸಾಕು.

ಶ್ರೀ ಬಿ.ಎನ್. ಬಚ್ಚೇಗೌಡ:- ಹೊಸ ಹೊಸದಾಗಿ ಬರುವಂಥ ದೇವಸ್ಥಾನಗಳ ಬಗ್ಗೆ. . .

ಶ್ರೀ ಬಿ.ಎಸ್. ಯಡಿಯೂರಪ್ಪ:- ಮುಜರಾಯಿ ಇಲಾಖೆಯವರು ದುಡ್ಡು ಕೊಡುವುದನ್ನು ಉಳಿಸಿಕೊಂಡರೆ ಸಾಕಾಗಿದೆ. ಅದನ್ನು ಮಾಡಿ, ಉಳಿದುದನ್ನು ಜನರು ಮಾಡಿಕೊಳ್ಳುತ್ತಾರೆ.

ಮಾನ್ಯ ಅಧ್ಯಕ್ಷರೆ, ತಮಗೆ ನಾನು ಒಂದು ಪತ್ರವನ್ನು 30-7-96ರಲ್ಲಿ ಬರೆದಿದ್ದೇನೆ. ಬಿ.ಡಿ.ಎ. ನಿಂದ ಕಳೆದ 2 ವರ್ಷಗಳಲ್ಲಿ ಭೂಸ್ವಾಧೀನ ಮಾಡಿಕೊಂಡಿದ್ದ ಜಮೀನಿನ ರೀ ಕನ್ವೆ ಮಾಡಿದ್ದ ವಿವರಗಳನ್ನು ನಾನು ಕೇಳಿದ್ದೆ. 1-8-96ರಂದು ಸರ್ಕಾರದ ನಿಮ್ಮ ಕಾರ್ಯದರ್ಶಿಯವರು ನಗರಾಭಿವೃದ್ಧಿ ಇಲಾಖೆಯ ಮೂಲಕ ಕಳುಹಿಸಿಕೊಟ್ಟಿದ್ದೇನೆ, ಅದನ್ನು ತರಿಸಿಕೊಳ್ಳಿ ಎಂದು ನನಗೆ ಉತ್ತರವನ್ನೂ ಬರೆದರು. ಇದು ಈ ನಿಮಿಷದವರೆಗೂ ಮಾಹಿತಿ ಬಂದಿಲ್ಲ. ಅದನ್ನು ನನಗೆ ಕಳುಹಿಸಿ ಕೊಡುವುದಕ್ಕೆ ಏನಾದರೂ ತೊಂದರೆ ಇದೆಯೇ? ಈ ರೀ ಕನ್ವೆಯನ್ನು ಏತಕ್ಕೆ ಮಾಡಿದಿರಿ? ಆ ಜಮೀನನ್ನು ಏತಕ್ಕೆ ಭೂಸ್ವಾಧೀನ ಪಡಿಸಿಕೊಂಡಿರಿ ಎಂಬುದನ್ನು ತಿಳಿದುಕೊಳ್ಳುವುದಕ್ಕೆ ಒಂದು ಪತ್ರವನ್ನು ಬರೆದೆ. ಇದುವರೆಗೂ ಉತ್ತರ ಇಲ್ಲ. ಇವತ್ತು ನಾಳೆಯೊಳಗೆ ಆ ಪತ್ರವನ್ನು ಕಳುಹಿಸಿ-ಕೊಡುವುದಕ್ಕೆ ಸಾಧ್ಯವೇ? ಎರಡನೆಯದಾಗಿ, ಇವತ್ತು ಬಿ.ಡಿ.ಎ. ನಲ್ಲಿ ಸುಮಾರು 80 ಸಾವಿರಕ್ಕಿಂತ ಹೆಚ್ಚು ಜನರು ನಿವೇಶನ ಕೋರಿ ಅರ್ಜಿ ಸಲ್ಲಿಸಿರುವವರಿದ್ದಾರೆ. ನಿಮ್ಮ ಕಾಲದಲ್ಲಿ ಇಷ್ಟು ಜನ ಅರ್ಜಿ ಹಾಕಿದ್ದರು, ಹಿಂದೆ ಏನನ್ನೂ ಮಾಡಿರಲಿಲ್ಲ, ನಾನು ಬಂದಮೇಲೆ ಇಷ್ಟು ಜನರಿಗೆ ನಿವೇಶನ ಕೊಟ್ಟಿ-ದ್ದೇನೆಂದು ಉತ್ತರ ಕೊಟ್ಟಿದ್ದಿದ್ದರೆ ನೀವು ಅರ್ಧ ಗಂಟೆ ಕಾಲ ಉತ್ತರವನ್ನು ಕೊಡುವ ಅಗತ್ಯವಿರಲಿಲ್ಲ. ನಾವು ತೃಪ್ತಿಯಿಂದ ಕುಳಿತುಕೊಳ್ಳುತ್ತಿದ್ದೆವು. ಅದು ಆಗಿಲ್ಲ. ಆದ್ದರಿಂದ ದಯವಿಟ್ಟು ಈ ಬಿ.ಡಿ.ಎ. ಅನ್ನು ರದ್ದುಮಾಡಿ ಯಾರಾದರೂ ಬೇರೆಯವರು ಸೈಟುಗಳನ್ನು ಕೊಡುತ್ತಾರೆ. ಈ ಬಿ.ಡಿ.ಎ. ಅನ್ನು ಏತಕ್ಕೆ ಆನೆಯಂತೆ ಸಾಕಿಕೊಂಡು ಕುಳಿತಿದ್ದೀರೋ ನನಗಂತೂ ಗೊತ್ತಾಗುತ್ತಿಲ್ಲ;

ಇನ್ನು ಮೂರನೆಯದಾಗಿ ಹೇಳುವುದಾದರೆ, ಮಾನ್ಯ ಅಧ್ಯಕ್ಷರೂ ಕೂಡ ಇದಕ್ಕೆ ಅಪ್ಪಣೆ ಕೊಡಿಸಿದ್ದಾರೆ. ಮಾನ್ಯ ಸದಸ್ಯರಾದ ಸುರೇಶ್‌ಕುಮಾರ್‌ರವರು ಮಾತನಾಡುತ್ತಾ ಬಿ.ಡಿ.ಎ. ನಲ್ಲಿ ಇರುವಂಥ ಒಬ್ಬ ಕಂದಾಯ ಅಧಿಕಾರಿ ಬೋಗಸ್ ಸೈಟ್ಸ್‌ನ್ನು ನೀಡಿದ್ದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಆ ತನಿಖೆಯನ್ನು ಬದಲಾವಣೆ ಮಾಡಿ ಸಿ.ಓ.ಡಿ. ಗೆ ಏತಕ್ಕೆ ವಹಿಸಲಾಯಿತೆಂಬ ವಿಚಾರವನ್ನು ಕೇಳಿದ್ದರು. ಅದರ ಬಗ್ಗೆ ತಾವು ಉತ್ತರ ಕೊಡುತ್ತೇನೆ ಎಂದು ಹೋದವರು ಇದುವರೆಗೆ ಉತ್ತರ ಕೊಡಲಿಲ್ಲ. ಅದೇನು ಉತ್ತರ ಕೊಡಬಾರದು ಎಂದು ಎದ್ದು ಹೋದರೋ ಅಥವಾ ಕೊಡು-ತ್ತೀರೋ ಗೊತ್ತಿಲ್ಲ. ಆದೇಕೋ ಈಗಲೂ ಅದರ ಬಗ್ಗೆ ಬರಲಿಲ್ಲ. ಅದಕ್ಕೋಸ್ಕರ ಇದರ ಬಗ್ಗೆ ಹೇಳಿ. ಬಿ.ಡಿ.ಎ. ನಲ್ಲಿ ನಿವೃತ್ತರಾದಂಥ ಕಾನೂನು ಅಧಿಕಾರಿಯನ್ನು ಪುನರ್‌ನೇಮಕ ಮಾಡಿಕೊಂಡಿದ್ದೀರಿ. ಅಂಥ ಉತ್ಕೃಷ್ಟವಾದ, ಇನ್ನೆಲ್ಲೂ ಸಿಗದೇ ಇರುವಂಥ ವ್ಯಕ್ತಿಗಳೇ ಅವರು? ನಿವೃತ್ತಿಯಾದವರನ್ನು ಏತಕ್ಕೆ ನೇಮಕ ಮಾಡಿಕೊಂಡಿದ್ದೀರಿ? ಈ ಮೂರಕ್ಕೆ ಉತ್ತರ ಕೊಟ್ಟರೆ ಸಾಕು.

ಶ್ರೀ ಎಂ. ಶ್ರೀನಿವಾಸ್:- ಸನ್ಮಾನ್ಯ ನಗರಾಭಿವೃದ್ಧಿ ಮಂತ್ರಿಗಳಿಗೆ ಕೇಳುವುದೇನೆಂದರೆ ಹಿಂದೆ ನಮ್ಮ ರೋಷನ್ ಬೇಗ್ ಅವರು ಮಂತ್ರಿಗಳಾಗಿದ್ದರು. ಅವರನ್ನು ಕರೆದುಕೊಂಡು ಹೋಗಿದ್ದೆ.

ಬಿ.ಡಿ.ಎ. ಗೆ ಸೇರಿದ 19 ಎಕರೆ ಜಮೀನನ್ನು ಗೌರ್ನ್‌ಮೆಂಟ್ ಜಮೀನನ್ನು ಬೇರೆ ಪ್ರೈವೇಟ್‌ನವರು ಲೇ ಔಟ್ ಮಾಡಿ ಹಂಚುತ್ತಿದ್ದಾರೆ. ಅದರ ಹೆಸರು ಹೇಳಬೇಕೆಂದರೆ ವಿಶ್ವಭಾರತಿ ಕೋ–ಆಪರೇ-ಟಿವ್ ಸೊಸೈಟಿ. ಅದಾದಮೇಲೆ ಅಲ್ಲಿರತಕ್ಕ ಸಿ.ಎ. ಸೈಟಿನಲ್ಲಿ ಮನೆಗಳನ್ನು ಕಟ್ಟಿ ಮಾರುತ್ತಿದ್ದಾರೆ. ಇದು ತಮ್ಮ ಗಮನಕ್ಕೆ ಬಂದಿದೆಯೇ? ಹೋಗಲಿ. ನಾನು ಕೊಶ್ಚನ್ ಹಾಕಿದ್ದೇನೆ, ಅದು ತಮ್ಮ ಗಮನಕ್ಕೆ ಬರಬಹುದು. 19 ಎಕರೆಯಲ್ಲಿ ಪ್ಲಾನ್ ಅಪ್ರೂವ್ ಆಗಿಲ್ಲ. 50 ಕೋಟಿ ರೂಪಾಯಿಗಳ ಜಮೀನನ್ನು ಇವತ್ತು ಕಟ್ಟಿ ಮಾರುತ್ತಿದ್ದಾರೆ. ಇವತ್ತು ನಾನು ಸಭಾಧ್ಯಕ್ಷರ ಮುಂದೆ ಹೇಳುತ್ತಿದ್ದೇನೆ, ಇವತ್ತಿನಿಂದ-ಲಾದರೂ ಅದನ್ನು ನಿಲ್ಲಿಸುತ್ತೀರೋ?

ಶ್ರೀ ಅನಂತನಾಗ್:- ಸನ್ಮಾನ್ಯ ಶ್ರೀನಿವಾಸ್ ಅವರು ಹೇಳಿದ್ದನ್ನು ನಾನು ಪರಿಶೀಲಿಸಿ ತಕ್ಷಣ ಕ್ರಮವನ್ನು ಕೈಗೊಳ್ಳುವ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಎಂ. ಶ್ರೀನಿವಾಸ್:- ಫೈಲ್ ಎಲ್ಲಿದೆ ಎಂದು ತಮಗೆ ಹೇಳಿಬಿಡುತ್ತೇನೆ. ಬಿ.ಡಿ.ಎ. ನವರು, ಟೌನ್‌ಪ್ಲಾನಿಂಗ್ ಮೆಂಬರ್, ಡಿ.ಸಿ. ಯವರು ಇನ್‌ಸ್ಪೆಕ್ಷನ್ ಮಾಡಿ ಇದು ಬಿ.ಡಿ.ಎ. ಗೆ ಸೇರಿರ-ತಕ್ಕಂಥದ್ದು ಹತ್ತೊಂಭತ್ತೂ ಮುಕ್ಕಾಲು ಎಕರೆ ಎಂದು ರಿಪೋರ್ಟ್ ಕೊಟ್ಟಿದ್ದಾರೆ. ಮತ್ತೆ ಏನೂ ಇನ್‌ಸ್ಪೆಕ್ಷನ್ ಮಾಡುವುದು ಬೇಕಾಗಿಲ್ಲ. ಬಿ.ಡಿ.ಎ. ನವರು ರಿಪೋರ್ಟ್ ಹಾಕಿದ್ದಾರೆ ಹತ್ತೊಂಭತ್ತೂ ಮುಕ್ಕಾಲು ಎಕರೆ ನಮ್ಮ ಬಿ.ಡಿ.ಎ. ಪ್ರಾಪರ್ಟಿ, ಗೌರ್ನ್‌ಮೆಂಟ್ ಪ್ರಾಪರ್ಟಿ ಎಂದು. ಆದ್ದರಿಂದ ಈ ತಕ್ಷಣ ಅದನ್ನು ನಿಲ್ಲಿಸುತ್ತೀರೋ?

ಶ್ರೀ ಅನಂತನಾಗ್:- ಸನ್ಮಾನ್ಯ ಅಧ್ಯಕ್ಷರೆ, ಬಿ.ಡಿ.ಎ. ಪ್ರಾಪರ್ಟಿ ಏನಾದರೂ ಎನ್‌ಕ್ರೋಚ್ ಆಗಿದ್ದರೆ ಅದಕ್ಕೆ ಸೂಕ್ತ ಕ್ರಮವನ್ನು ಕೈಗೊಳ್ಳುತ್ತೇನೆ. ಅದನ್ನು ಪರಿಶೀಲಿಸಿ ಏನು ಕ್ರಮ ಕೈಗೊಳ್ಳಬೇಕೋ ಅದನ್ನು ಕೈಗೊಳ್ಳುತ್ತೇನೆ. ತಮಗೂ ಗೊತ್ತಿದೆ. ತಾವೂ ಕೂಡ ಆ ಸಮಿತಿಯಲ್ಲಿದ್ದೀರಿ.

ಶ್ರೀ ಎಂ. ಶ್ರೀನಿವಾಸ್:- ಇದು ನಾಲ್ಕು ಫ್ಲೋರ್ ಬಿಲ್ಡಿಂಗ್. ಇದು ಬಹಳ ಪ್ರಾಮುಖ್ಯವಾಗಿ-ರುವುದರಿಂದ ಅಧ್ಯಕ್ಷರಿಂದ ಪರ್ಮಿಷನ್ ತೆಗೆದುಕೊಂಡು ಕೇಳುತ್ತಿದ್ದೇನೆ. ಇನ್ನೂ ಕ್ವೊಶ್ಚನ್ ಹವರ್ ಬಂದಿಲ್ಲ. ಸಭಾಧ್ಯಕ್ಷರು ಕೇಳಿ ಎಂದು ಹೇಳಿದ್ದಕ್ಕೆ ಕೇಳುತ್ತಿದ್ದೇನೆ. ಸಿ.ಎ. ಜಾಗದಲ್ಲಿ ಏನು ಸೈಟುಗಳು ರಿಸರ್ವೇಷನ್ ಇಟ್ಟಿದ್ದೀರಿ ಅದರೊಳಗೆ ಐದು ಫ್ಲೋರ್ ಬಿಲ್ಡಿಂಗ್ ಕಟ್ಟಿ ಮಾರುತ್ತಾ ಇದ್ದಾರೆ. ಕಟ್ಟು-ವುದಕ್ಕೆ ಮೊದಲು ನಾನು ಅದನ್ನು ಮಂತ್ರಿಗಳಿಗೆ ತೋರಿಸಿ ಕಮಿಷನರ್ ಮತ್ತು ಛೇರ್ಮನ್ ಎಲ್ಲ-ರನ್ನೂ ಕರೆದುಕೊಂಡು ಹೋಗಿ ಅದನ್ನು ನಿಲ್ಲಿಸಬೇಕೆಂದು ಹೇಳಿದರೆ ಈಗ ಫಿನಿಷಿಂಗ್ ಆಗಿ ಈಗ ಅದನ್ನು ಮಾರುತ್ತಾ ಇದ್ದಾರೆ. ನೀವು ಈಗ ಬಂದಿದ್ದೀರಿ. ಅದನ್ನು ನಿಲ್ಲಿಸುತ್ತೀರೋ?

ಶ್ರೀ ಅನಂತನಾಗ್:- ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದ್ದನ್ನು ಪರಿಶೀಲನೆ ಮಾಡಿ ಅದು ಒಂದು ವೇಳೆ ಎನ್‌ಕ್ರೋಚ್‌ಮೆಂಟ್ ಆಗಿದ್ದರೆ ಅದನ್ನು ಖಾಲಿ ಮಾಡಿಸುವ ಕ್ರಮವನ್ನು ಕೈ-ಗೊಳ್ಳುತ್ತೇನೆ. ಇನ್ನು ಸನ್ಮಾನ್ಯ ಯಡಿಯೂರಪ್ಪನವರು ಕೇಳಿದ್ದಾರೆ. ರೀಕನ್‌ವೇಯನ್ಸ್ ಬಗ್ಗೆ ಒಂದು

ಪ್ರಶ್ನೆ ಚುಕ್ಕೆ ಗುರುತಿನದು ಬಂದಿತ್ತು. ಅದನ್ನೂ ಚುಕ್ಕೆ ಗುರುತಿಲ್ಲದ ಪ್ರಶ್ನೆಯಾಗಿ ಅದಕ್ಕೆ ಉತ್ತರವನ್ನು ಕಳುಹಿಸಿದ್ದೇವೆ. ಅದು ಬರದೇ ಇದ್ದರೆ ಇವತ್ತು ನಾಳೆಯೊಳಗೆ ಅಥವಾ ಸೋಮವಾರದೊಳಗಾಗಿ ಕಳುಹಿಸಿಕೊಡುತ್ತೇನೆ. ಇನ್ನೊಂದು ವಿಚಾರ ಮೊನ್ನೆ ಸುರೇಶ್‌ಕುಮಾರ್ ಅವರು ಹೇಳಿದರು ಎಂದು ಹೇಳಿದಿರಿ. ಅದಕ್ಕೆ ನಾನು ವರದಿಯನ್ನು ತರಿಸಿದ್ದೇನೆ. ಉತ್ತರ ಕೊಡಬಾರದು ಎಂದು ಏನೂ ಇಲ್ಲ. ಸಂಬಂಧಪಟ್ಟ ಕಂದಾಯಾಧಿಕಾರಿಯನ್ನು ಮರುನೇಮಕ ಮಾಡುವುದಕ್ಕೆ ಏನಾದರೂ ಆದೇಶ ಮಾಡಿದ್ದಾರೆ ಎನ್ನುವುದಕ್ಕೆ ಸ್ಪಷ್ಟವಾದಂಥ ಉತ್ತರ ಮರುನೇಮಕ ಮಾಡುವ ಯಾವ ಉದ್ದೇಶ ಕೂಡ ಸರ್ಕಾರಕ್ಕಿಲ್ಲ ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಸ್ಪಷ್ಟ ಮಾಡಿ. . .

ಶ್ರೀ ಎಸ್. ಸುರೇಶ್ ಕುಮಾರ್:- ದಯವಿಟ್ಟು ಸತ್ಯಕ್ಕೆ ದೂರವಾದ ಮಾತು ಬೇಡ. ನನಗೆ ಗೊತ್ತು, ಈ ಪ್ರಕರಣದಲ್ಲಿ 20-6-96ರಲ್ಲಿ ಸರ್ಕಾರದಿಂದ ಒಂದು ನಿರ್ದೇಶನ ಹೋಗಿದೆ ಅವರನ್ನು ಮರುನೇಮಕ ಮಾಡಬೇಕು ಎಂದು. ಮರುನೇಮಕ ಮಾಡಬೇಕು ಎನ್ನುವುದಕ್ಕೆ ಒಬ್ಬ ಪ್ರಮುಖ ಮಂತ್ರಿಗಳು, ಈಗ ಈ ಕ್ಯಾಬಿನೆಟ್‌ನಲ್ಲಿರುವ ಒಬ್ಬ ಮಂತ್ರಿಗಳು ಇನ್ನೊಬ್ಬರು ಶಾಸಕರು ಪ್ರಯತ್ನ ಮಾಡಿದ್ದಾರೆ. ಅವನನ್ನು ರೀ-ಇನ್‌ಸ್ಟೇಟ್ ಮಾಡಬೇಕು ಎಂದು ಲೆಟರ್ ಕೊಟ್ಟಿದ್ದಾರೆ. ಆದ್ದರಿಂದ ದಯವಿಟ್ಟು ಮಾಡುವುದಿಲ್ಲ ಎಂದು ಹೇಳಿ. ನಿರ್ದೇಶನ ಕೊಟ್ಟಿರುವುದರಿಂದ ನಾನು ಕೇಳುತ್ತಾ ಇರುವುದು.

ಶ್ರೀ ಅನಂತನಾಗ್:- ಅವರನ್ನು ಮರುನೇಮಕ ಮಾಡುವುದಿಲ್ಲ ಎನ್ನುವುದನ್ನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಒಂದೊಂದು ಸಾರಿ ತಮಗೂ ಗೊತ್ತಿದೆ, ಎಲ್ಲರ ಅನುಭವಕ್ಕೂ ಬರುವಂಥದ್ದು. ಸಸ್ಪೆಂಡ್ ಆದವರು ನೂರಾರು ಕಡೆಯಿಂದ ಪತ್ರಗಳನ್ನು ತಂದು ಒತ್ತಡ ತರುವುದಕ್ಕೆ ಪ್ರಯತ್ನ ಮಾಡುತ್ತಾರೆ. ಅದರಂತೆ ಅದು ನಡೆದಿರಬಹುದು. ಆದರೆ ನಮ್ಮ ಸರ್ಕಾರಕ್ಕೆ ಅವರನ್ನು ಮರುನೇಮಕ ಮಾಡುವ ಯಾವ ಒಂದು ವಿಚಾರವೂ ಇಲ್ಲ ಎನ್ನುವುದನ್ನು ಇಲ್ಲಿ ಸ್ಪಷ್ಟವಾಗಿ ಹೇಳುತ್ತೇನೆ. ಮತ್ತೆ ಅದನ್ನು ಸಿ.ಓ.ಡಿ. ಗೆ ಏತಕ್ಕೆ ಒಪ್ಪಿಸಿದ್ದೀರಿ ಎನ್ನುವ ಮಾತನ್ನು ಅವರು ಕೇಳಿದರು. ಸಿ.ಓ.ಡಿ.ಗೆ ಕಂಪೇರ್ ಮಾಡಿದರೆ ಸಿಟಿ ಕ್ರೈಮ್ ಬ್ರಾಂಚ್ (ಸಿಸಿಬಿ) ಸ್ಮಾಲರ್ ಯೂನಿಟ್. ಸುಮಾರು ನೂರಾರು ಕೇಸ್‌ಗಳು ಅಂದರೆ 12-13 ಪೋಲೀಸ್ ಸ್ಟೇಷನ್‌ಗಳಲ್ಲಿ ಇದರ ವಿಚಾರಣೆ ನಡೆಯುತ್ತಿತ್ತು. ಬಿ.ಡಿ.ಎ. ನಲ್ಲಿ ಬೋಗಸ್ ಸೈಟ್‌ಗಳನ್ನು ಮಾಡಿ ಏನು ಮಾರುತ್ತಿದ್ದರು ಆ ಸಂದರ್ಭದಲ್ಲಿ ಸಿ.ಸಿ.ಬಿ. ಯಿಂದ ಅದನ್ನು ಸಿ.ಓ.ಡಿ. ಗೆ ವರ್ಗಾಯಿಸಲಾಯಿತು. ಅದರ ಹಿಂದೆ ಯಾವ ಒಂದು ದುರುದ್ದೇಶವೂ ಇಲ್ಲ. ಒಂದು ಸರಿಯಾದ ವರದಿ ಬರಲಿ ಎನ್ನುವ ದೃಷ್ಟಿಯಿಂದಲೇ ಅದನ್ನು ಸಿ.ಓ.ಡಿ. ಗೆ ಒಪ್ಪಿಸಲಾಯಿತು ಎನ್ನುವುದನ್ನು ಸನ್ಮಾನ್ಯ ವಿರೋಧಪಕ್ಷದ ನಾಯಕರಿಗೆ ತಮ್ಮ ಮೂಲಕ ಸ್ಪಷ್ಟಪಡಿಸಲಿಚ್ಛಿಸುತ್ತೇನೆ. ಇನ್ನು ಸುರೇಶ್‌ಕುಮಾರ್ ಅವರು ಕೂಡ ಇಂಟೆನ್ಸೀವ್ ಕ್ಲಿಯರೆನ್ಸ್ ಬಗ್ಗೆ. . .

ಶ್ರೀ ಎಸ್. ಸುರೇಶ್‌ಕುಮಾರ್:- ಪ್ರಾಪರ್ಟಿ ಟ್ಯಾಕ್ಸ್ ಹಾಕುವ ಬಗ್ಗೆ ಹೇಳುತ್ತಾ ಇದ್ದೀರಿ. ಆ ಮೊಮೆಂಟ್‌ನಲ್ಲಿ ಕುಮಾರಸ್ವಾಮಿ ಲೇ ಔಟಿಗೆ ಹೋದಿರಿ. ಪ್ರಾಪರ್ಟಿ ಟ್ಯಾಕ್ಸ್‌ಗೆ ಸೈಂಟಿಫಿಕ್

ಫಾರ್ಮುಲಾ ಮಾಡುವ ಬಗ್ಗೆ ಹೇಳುತ್ತಿದ್ದಿರಿ.

ಶ್ರೀ ಅನಂತನಾಗ್:- ಅನೇಕ ಕಡೆ ಡಿಸ್ಕ್ರಿಷನರಿ ಪವರ್ಸ್ ಎಂದು ಏನು ಕೊಟ್ಟಿದ್ದಾರೆ ಅವು-ಗಳನ್ನು ಮೀರಿ ಒಮ್ಮೊಮ್ಮೆ ಆಗಿದೆ. ಅಂಥದ್ದನ್ನು ತಪ್ಪಿಸುವುದಕ್ಕೆ ಈಗ ಒಂದು ಸ್ಲ್ಯಾಬ್ ಸಿಸ್ಟಮನ್ನು ತಂದು ಪ್ರಾಪರ್ಟಿ ಟ್ಯಾಕ್ಸ್ ಸಿಸ್ಟಮನ್ನು ಸ್ಟ್ರೀಮ್‌ಲೈನ್ ಮಾಡಲಾಗುತ್ತದೆ ಎನ್ನುವುದನ್ನು ತಮಗೆ ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ. ಸನ್ಮಾನ್ಯ ಅಧ್ಯಕ್ಷರೆ, ಕೆಲವು ಕಡೆ 1989ರಲ್ಲಿ 3 ಸಾವಿರ ಕೊಟ್ಟ-ವರಿಗೆ ಕಳೆದ ವರ್ಷ 16 ಸಾವಿರ ಕೊಡಿ ಎಂದು ಹೇಳಿ ಮತ್ತು ಈ ಸಲ 69-70 ಸಾವಿರ ಟ್ಯಾಕ್ಸ್ ಕೊಡಬೇಕು ಎನ್ನುವುದನ್ನೂ ಕೂಡ ಹೇಳಿರುವ ಪ್ರಕರಣಗಳು ನಡೆದಿರುವುದರಿಂದ ಅದನ್ನು ಸ್ಟ್ರೀಮ್ ಲೈನ್ ಮಾಡುವುದಕ್ಕೆ ವ್ಯವಸ್ಥೆಯನ್ನು ಮಾಡಿದ್ದೇವೆ. ಸ್ಟ್ರೀಮ್‌ಲೈನಿಂಗ್ ಪ್ರೋಸೆಸ್ ನಡೆಯುತ್ತಿದೆ. ಆದೇಶವನ್ನು ಶೀಘ್ರವೇ ಹೊರಡಿಸುತ್ತೇವೆ. ಮಾನ್ಯ ಮುನಿಯಪ್ಪನವರು ಕೇಳಿರುವ ವಿಚಾರಗಳಿಗೆ ನಾನು ಉತ್ತರದಲ್ಲೇ ಹೇಳಿದ್ದೇನೆ. ಅವರು ಕೇಳಿಸಿಕೊಳ್ಳಲಿಲ್ಲ ಎಂದು ಕಾಣುತ್ತದೆ. ರಿಸರ್ವೇಷನ್ಸ್ ಕುರಿತು ನೀವು ಅವೈಜ್ಞಾನಿಕವಾದ ನೀತಿಯನ್ನು ಅನುಸರಿಸಿದ್ದೀರಿ ಎಂದು ಹೇಳಿದ್ದೀರಿ. ಅದಕ್ಕೋಸ್ಕರ ಅಲ್ಲಿ ಬಹಳ ಪ್ರಯತ್ನ ಮಾಡಿಯೇ ಆ 100 ವಾರ್ಡ್‌ಗಳನ್ನು ಮಾಡಿದ್ದೇವೆ. ಆದರೆ ನೀವು ಹೇಳಿದಂತೆ ಎಲ್ಲಾದರೂ ತಪ್ಪಿದ್ದರೆ ಅದನ್ನು ತಿದ್ದುವ ಪ್ರಯತ್ನವನ್ನು ನಾನು ಮಾಡುತ್ತೇನೆ ಎಂದು ಈ ಸಂದರ್ಭ-ದಲ್ಲಿ ತಮಗೆ ಹೇಳಲಿಚ್ಛಿಸುತ್ತೇನೆ. ಕಸ ತೆಗೆಯುವ ಲಾರಿ ಕುರಿತು ತಾವು ಹೇಳಿದ್ದೀರಿ. ಅದರ ಬಗ್ಗೆ ನಾನು ಆಗಲೇ ಅದನ್ನು ಹೇಳಿದೆ. ಸುಮಾರು 200 ಲಾರಿಗಳು ಕಾರ್ಪೋರೇಷನ್‌ದೇ ಇರಬೇಕು. ಅವು ಮಾಡ್ರನ್ ಲಾರಿಗಳು ಎಲ್ಲಾ ಕಡೆ ಕ್ಲೋಸ್ ಆಗಿರುವಂಥದ್ದು ಆಗಿರಬೇಕು ಎಂದು ಹೇಳಿದ್ದೇನೆ. ಇನ್ನು ಡಂಪಿಂಗ್ ಯಾರ್ಡ್ ಬಗ್ಗೆಯೂ ಮಾನ್ಯ ಸುರೇಶ್‌ಕುಮಾರ್‌ರವರು ಹೇಳಿದರು. ಅದಕ್ಕಾಗಿ ಆ ಬಾಬ್ತಿನಲ್ಲೇ 100 ಕೋಟಿ ರೂಪಾಯಿಗಳನ್ನು ಮಹಾನಗರಪಾಲಿಕೆಗೆ ಕೊಡಬೇಕೆಂದು ನಾನು ಆಗಲೇ ಸರ್ಕಾರವನ್ನು ವಿನಂತಿಸಿಕೊಂಡೆ. ಈ ವರ್ಷದಲ್ಲೇ ಹಂತಹಂತವಾಗಿ ಕೊಟ್ಟರೂ ಚಿಂತೆ ಇಲ್ಲ. ಅದರಲ್ಲಿ 12 ಕೋಟಿ ರೂಪಾಯಿ 200 ಲಾರಿ ಮತ್ತು 4 ಎಸ್ಕವೇಟರ್ಸ್ ತೆಗೆದುಕೊಳ್ಳುವುದಕ್ಕೆ ಬೇಕು ಎಂದು ಹೇಳಿದ್ದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ನಾನು ಮಾತನಾಡಬೇಕಾದರೆ ಒಂದು ಪ್ರಶ್ನೆ ಕೇಳಿದ್ದೆ. ರಿಟೈರ್ಡ್ ಲಾ ಆಫೀಸರನ್ನು ತಾವು ಬಿ.ಡಿ.ಎ.ಗೆ ನೇಮಕ ಮಾಡಿಕೊಂಡಿದ್ದೀರಿ. ಅವರ ಅಗತ್ಯ ಇಲ್ಲ. ಅನೇಕ ಜನ ಅನುಭವಿ ಅಧಿಕಾರಿಗಳು ನಮ್ಮಲ್ಲಿದ್ದಾರೆ. ನಮಗೆ ಏನು ಅನುಮಾನ ಬರುತ್ತದೆ ಅಂದರೆ ಈ ರಿಟೈರ್ಡ್ ಲಾ ಅಫೀಸರ್‌ಗಳನ್ನು ಮತ್ತೆ ಮರುನೇಮಕ ಮಾಡಿಕೊಳ್ಳುವುದನ್ನು ನೋಡಿದಾಗ ಅವರಲ್ಲಿದ್ದಾಗ ಎಲ್ಲೆಲ್ಲಿ ಏನೇನು ನಡೆಯುತ್ತದೆ ಎಂಬುದು ಗೊತ್ತಿತ್ತು. ಮತ್ತೆ ಅದರಲ್ಲಿ ಸಹಕಾರ ಆಗುತ್ತದೆ ಎನ್ನುವ ದೃಷ್ಟಿಯಿಂದ ನೇಮಕ ಮಾಡಿದರೇನೋ ಎಂದು ಜನ ಅನುಮಾನ ಪಡುವ ಹಾಗೆ ಆಗುತ್ತದೆ. ಅದಕ್ಕೋಸ್ಕರ ದಯಮಾಡಿ ಏನು ರಿಟೈರ್ಡ್ ಲಾ ಅಫೀಸರ್ ಅವರನ್ನು ನೇಮಕ ಮಾಡಿಕೊಂಡಿದ್ದೀರಿ ಅವನ್ನು ನಾಳೆಯಿಂದಲೇ ರದ್ದು ಮಾಡಿ ಮುಂದೆ ಆ ರೀತಿ ನೇಮಕ ಮಾಡಿ-

ಕೊಳ್ಳುವುದಿಲ್ಲ ಎಂದು ಏನಾದರೂ ಭರವಸೆಯನ್ನು ಸದನಕ್ಕೆ ಕೊಡುತ್ತೀರೋ?

ಶ್ರೀ ಅನಂತ್‌ನಾಗ್:- ಮಾನ್ಯ ವಿರೋಧಪಕ್ಷದ ನಾಯಕರು ಏನು ಸಲಹೆ ಕೊಟ್ಟಿದ್ದಾರೆ, ಅದನ್ನು ಪರಿಶೀಲನೆ ಮಾಡುತ್ತೇನೆ. ನನ್ನ ಗಮನಕ್ಕಂತೂ ಅದು ಬಂದಿಲ್ಲ. ಅದರ ಬಗ್ಗೆ ಸೂಕ್ತವಾದ ಕ್ರಮ ಕೈಗೊಳ್ಳುತ್ತೇನೆ.

ಅಧ್ಯಕ್ಷರು:- ಆಲ್‌ರೈಟ್. ಮಾನ್ಯ ಬಚ್ಚೇಗೌಡರಿಲ್ಲ ಮುನಿಯಪ್ಪನವರೇ, ಬಹಳ ಹೊತ್ತಾಗಿದೆ. ಬೇರೆ ಯಾವ ಇಲಾಖೆ ಬಗ್ಗೆಯೂ ಇಷ್ಟೊಂದು ಸ್ಪಷ್ಟೀಕರಣಕ್ಕೆ ಅವಕಾಶ ಕೊಟ್ಟಿಲ್ಲ. ಈಗ ಬೇರೆ ಇಲಾಖೆಯದು ತೆಗೆದುಕೊಳ್ಳೋಣ.

ಶ್ರೀ ಬಿ. ಮುನಿಯಪ್ಪ:- ಪ್ರೋಗ್ರಾಂ ಆಫ್ ವರ್ಕ್ಸ್ ಹೇಳಿಲ್ಲ. ನಾವು ಜನರ ಕೆಲಸ ಮಾಡದೆ ಬೆಂಗಳೂರಿನಲ್ಲಿ ಓಡಾಡುವುದಕ್ಕಾಗುತ್ತಿಲ್ಲ. ಅದನ್ನು ಹೇಳಲೇ ಇಲ್ಲ ಅವರು.

ಶ್ರೀ ಅನಂತ್‌ನಾಗ್:- ಮಾನ್ಯ ಅಧ್ಯಕ್ಷರೆ, ಅನೇಕ ಕ್ರಮಗಳನ್ನು ಕೈಗೊಳ್ಳುತ್ತೇನೆ. ಅದಕ್ಕೇ ತಮ್ಮ ಮೂಲಕ ಸಹಕಾರ ಬೆಂಬಲ ಬೇಕು, 100 ಕೋಟಿ ರೂಪಾಯಿಗಳನ್ನು ಸ್ಪೆಷಲ್ ಕೇಸ್ ಆಗಿ ಈ ವರ್ಷದಲ್ಲೇ ಸರ್ಕಾರಕ್ಕೆ ಕೊಡಿ ಎಂದು ಹೇಳಿದ್ದು. ನಾನು ಆಗಲೇ ಹೇಳಿದಹಾಗೆ ಅಭಿವೃದ್ಧಿ ಕಾರ್ಯ-ಕ್ರಮಗಳು, ಮೈಂಟೆನೆನ್ಸ್ ಮಾಡುವುದಕ್ಕೆ. . .

ಶ್ರೀ ಬಿ. ಮುನಿಯಪ್ಪ:- ಪ್ರತಿ ವರ್ಷ ನಗರಪಾಲಿಕೆಗೆ ಬರುವ ವರಮಾನದಲ್ಲಿ ಪ್ರೋಗ್ರಾಂ ಫಿಕ್ಸ್ ಮಾಡುವುದು. 100 ಕೋಟಿಯೋ 1000 ಕೋಟಿಯೋ ಸ್ಪೆಷಲ್ ವರ್ಕ್‌ಗೆ ಎಂದು ಇಟ್ಟುಕೊಳ್ಳಿ. ಮಾಮೂಲಿಯಾಗಿ ನಡೆಯುವಂಥ ಪ್ರೋಗ್ರಾಂ ಈ ವರ್ಷ ನಡೆದಿಲ್ಲ. ಅದನ್ನು ಹೇಳಿ ಅಂದರೆ 100 ಕೋಟಿ ರೂಪಾಯಿ ಸರ್ಕಾರದಲ್ಲಿ ಕೇಳುತ್ತೇನೆ ಎನ್ನುತ್ತಾರೆ.

ಶ್ರೀ ಅನಂತ್‌ನಾಗ್:- ತಾವು ಹೇಳಿದ ಸಲಹೆಯನ್ನು ಪರಿಶೀಲಿಸಿ ಸೂಕ್ತ ಕ್ರಮವನ್ನು ಶೀಘ್ರ-ದಲ್ಲೇ ನಾನು ಕೈಕೊಳ್ಳುತ್ತೇನೆ.

ಶ್ರೀ ವಿ. ಶಿವರಾಜ್ (ಯಲಹಂಕ):- ಹೊಸದಾಗಿ ಕಾರ್ಪೊರೇಷನ್‌ಗೆ ಸೇರಿಸುವ ಎಲ್ಲಾ ಕಡೆಯಲ್ಲಿಯೂ ನೀರಿನ ಅಭಾವ ಬಹಳ ಜಾಸ್ತಿಯಾಗಿದೆ. ನೀರು ಬಿಡುವವರು ಕೆಲವರಿದ್ದರು. ನಿನ್ನೆ ಒಂದು ಮೆಮೋ ಕೊಟ್ಟು ನೀರು ಬಿಡುವವರನ್ನೆಲ್ಲಾ ತಡೆಗಟ್ಟಿದ್ದಾರೆ. ಸುಮಾರು 3 ಲಕ್ಷ ಜನ ವಾಸ ಮಾಡತಕ್ಕಂಥ ಸಂಜಯನಗರ, ಹೆಬ್ಬಾಳ, ಕಾವಲ್‌ಬೈರಸಂದ್ರ, ದೇವರಜೀವನಹಳ್ಳಿ ಇಂಥ ಕಡೆ ಫುಲ್ ನೀರು ಬಿಡುವುದನ್ನು ನಿಲ್ಲಿಸಿದ್ದಾರೆ. ಮೊನ್ನೆ ಕಾರ್ಪೊರೇಷನ್ ಕಮಿಷನರ್‌ನಿಂದ ಒಂದು ಮೆಮೋ ಹೋಗಿದೆ. ಆದ್ದರಿಂದ ಪಾಪ ಅವರಿಗೆ ಎಲ್ಲಾ ತೊಂದರೆಯಾಗಿದೆ. ಅದಕ್ಕೆ ಮಾನ್ಯ ಸಚಿವರು ಏನು ಕ್ರಮ ತೆಗೆದುಕೊಳ್ಳುತ್ತಾರೆ ಎಂಬುದನ್ನು ಹೇಳಬೇಕು. ಅವರು ಸುಮಾರು 8 ತಿಂಗಳಿಂದ ನೀರು ಬಿಡುತ್ತಾ ಇದ್ದಾರೆ. ಸದ್ಯಕ್ಕೆ ನಿಲ್ಲಿಸುವುದು ಎಂದರೆ ಬಹಳ ತೊಂದರೆಯಾಗುತ್ತದೆ. ಅಲ್ಲಿ ನೀರು

ಬಿಡುವವರಿಲ್ಲ. ಆದ್ದರಿಂದ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು ಎಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಅನಂತ್‌ನಾಗ್:- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಅದನ್ನು ಪರಿ-ಶೀಲಿಸುತ್ತೇನೆ. ಖುದ್ದಾಗಿ ಅವರ ಜೊತೆಯಲ್ಲಿ ಹೋಗಿ ಆ ಸಮಸ್ಯೆ ಏನೆಂದು ಕಂಡು ಹಿಡಿದು, ಅದಕ್ಕೆ ಸೂಕ್ತವಾದ ಕ್ರಮವನ್ನು ಕೈಗೊಳ್ಳುತ್ತೇನೆ.

(ಆ) ನಗರಾಭಿವೃದ್ಧಿ ಇಲಾಖೆಯ ಬೇಡಿಕೆಯ ಮೇಲಿನ ಚರ್ಚೆಗೆ ಉತ್ತರ

+ **ಶ್ರೀ ಬಿ.ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು):-** ಮಾನ್ಯ ಅಧ್ಯಕ್ಷರೆ, ನನ್ನ ಖಾತೆಗೆ ಸೇರಿದ ಬೇಡಿಕೆ ಸಂಖ್ಯೆ 31ರ ನಗರಾಭಿವೃದ್ಧಿ ಯೋಜನೆಗಳು ಮತ್ತು ನಗರ ಮೂಲ ಸೌಲಭ್ಯ ಅಭಿವೃದ್ಧಿ ಬಗ್ಗೆ ಮಾನ್ಯ ಅನೇಕ ಜನ ಸದಸ್ಯರು ಅನೇಕ ಸಲಹೆ ಸೂಚನೆಗಳನ್ನು ಕೊಟ್ಟಿದ್ದಾರೆ. ಅನೇಕ ಲೋಪದೋಷಗಳನ್ನು ತೋರಿಸಿದ್ದಾರೆ. ಮತ್ತು ವಿಶೇಷವಾಗಿ ನಗರಾಭಿವೃದ್ಧಿ ಇಲಾಖೆಯಲ್ಲಿ ನಗರಾಭಿವೃದ್ಧಿ ಪ್ರಾಧಿಕಾರಿಗಳು ಮತ್ತು ನಗರ ಯೋಜನಾ ಇಲಾಖೆ, ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಈ ಮೂರು ನನಗೆ ಬರುತ್ತದೆ. ಮಾನ್ಯ ಮಿರಾಜುದ್ದೀನ್ ಪಟೇಲ್ ರವರಿಗೆ ಪೌರಾಡಳಿತ ಸೇವೆಗಳು ನಗರಾಭಿವೃದ್ಧಿ ಇಲಾಖೆಯದು ಅವರಿಗೆ ಸೇರುತ್ತದೆ. ನಂತರ ಬೆಂಗಳೂರು ಸಿಟಿ ಕಾರ್ಪೊರೇಷನ್, ಈಗ ತಾನೇ ಉತ್ತರ ಕೊಟ್ಟಂತಹ ಮಾನ್ಯ ಅನಂತನಾಗ್‌ರವರಿಗೆ ಸೇರುತ್ತದೆ. ಬಿ.ಡಬ್ಲ್ಯು.ಎಸ್.ಎಸ್.ಬಿ., ಬಿ.ಎಂ.ಆರ್.ಡಿ.ಎ., ಎಂ.ಆರ್.ಸಿ.ಎಸ್. ಎಲ್ಲಾ ಸೇರಿಸಿ ಅದು ಮಾನ್ಯ ಮುಖ್ಯಮಂತ್ರಿಗಳಿಗೆ ಹೋಗುತ್ತದೆ. ಮತ್ತು ವಸತಿ ಇಲಾಖೆ 1995ರಲ್ಲಿ ನಗರಾಭಿವೃದ್ಧಿ ಇಲಾಖೆಯಿಂದ ಬೇರ್ಪಟ್ಟು ಅದು ಪ್ರತ್ಯೇಕ ಇಲಾಖೆಯಾಗಿ ಮಾನ್ಯ ರೇವಣ್ಣನವರಿಗೆ ಸೇರುತ್ತದೆ. ಅವರೂ ಸಹ ಈಗಾಗಲೇ ಉತ್ತರವನ್ನು ಕೊಟ್ಟಿದ್ದಾರೆ.

ಮೊದಲನೆಯದಾಗಿ, ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆಯ ಬಗ್ಗೆ ಸಾಕಷ್ಟು ವಿಷಯಗಳನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಈವೊಂದು ಮಂಡಳಿ 1975ರಲ್ಲಿ ಪ್ರಾರಂಭವಾಗಿ ಇವತ್ತು ಬೆಂಗಳೂರನ್ನು ಹೊರತುಪಡಿಸಿ ನೀರು ಸರಬರಾಜು ಮತ್ತು ಒಳಚರಂಡಿ ಯೋಜನೆಗಳನ್ನು ವಿನ್ಯಾಸ ಮತ್ತು ತಯಾರಿಕೆ ಅದರ ಜೊತೆಗೆ ಕಾರ್ಯಗತಗೊಳಿಸುವ ಎಲ್ಲಾ ಕಾರ್ಯಕ್ರಮಗಳನ್ನು ನಮ್ಮ ಇಲಾಖೆ ಹಮ್ಮಿಕೊಂಡಿದೆ. ಇವತ್ತು ಈ ಮಂಡಳಿಯ ವ್ಯಾಪ್ತಿಯಲ್ಲಿ ಸುಮಾರು 242 ನಗರ ಮತ್ತು ಪಟ್ಟಣಪ್ರದೇಶಗಳಿಗೆ ನೀರನ್ನು ಒದಗಿಸುವಂತಹ ಒಂದು ಕಾರ್ಯ 1975 ರಿಂದ 21ವರ್ಷಗಳಿಂದ ಮಾಡಿಕೊಂಡು ಬಂದಿದ್ದೇವೆ. ಇದರಲ್ಲಿ ಸುಮಾರು 71 ನಗರಗಳು ಮಧ್ಯೆ ಜಿಲ್ಲಾ ಪಂಚಾಯಿತಿಗೆ ಸೇರಿದ್ದು ಅನಂತರ ಸುಮಾರು 171 ನಗರಗಳು ನಮಗೆ ಸೇರಿವೆ. ಇದಾದ ಮೇಲೆ ಮಧ್ಯಂತರ ಮಂಡಳಿ ಪಂಚಾಯಿತಿಗಳು ಆದಮೇಲೆ ಅಲ್ಲಿನ 34 ನಗರ ಪ್ರದೇಶಗಳು ಮತ್ತೆ ಈ ಮಂಡಳಿಗೆ ಸೇರಿದ ಮೇಲೆ ಇವತ್ತು 205 ನಗರಪ್ರದೇಶಗಳು ನಮ್ಮ ವ್ಯಾಪ್ತಿಯಲ್ಲಿ ಬರುತ್ತಿವೆ.